ಬುಧವಾರ, ಏಪ್ರಿಲ್ 22, 2026| ₹ 7.00

prajavani.net | prajavani

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



## ಸ್ವರ್ಣ ಜಯಿಸಿದ ಶಿವ

ಭಾರತದ ಶಿವ ನರ್ವಾಲ್ ಅವರು ಕೈರೊದಲ್ಲಿ ಮಂಗಳವಾರ ಆರಂಭವಾದ ಜೂನಿಯರ್ ಶೂಟಿಂಗ್ ವಿಶ್ವಕಪ್‌ನ ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆದ್ದು ಸಂಭ್ರಮಿಸಿದರು



## ಶರ್ಮಾ ಶತಕದ ಅಬ್ಬರ

ಹೈದರಾಬಾದ್‌ನಲ್ಲಿ ಮಂಗಳವಾರ ನಡೆದ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ (ಅಜೇಯ 135; 68ಎಸೆತ, 4X10, 6X10) ಶತಕ ಗಳಿಸಿದರು

prajavani.net prajavani
ಬುಧವಾರ, ಏಪ್ರಿಲ್ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 111 | ಪುಟ 16
www.prajavani.net



ನೃತ್ಯ...
ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ದಾಲ್ ಸರೋವರದ ತೀರದಲ್ಲಿ ನಡೆಯುತ್ತಿರುವ ಕಲಾ ಉತ್ಸವದಲ್ಲಿ ಸಾಂಪ್ರದಾಯಿಕ ಉಡುಪಿನಲ್ಲಿ ನೃತ್ಯ ಪ್ರದರ್ಶಿಸಿದ ತಂಡದಲ್ಲಿದ್ದ ಮಹಿಳೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ




ಸೆನ್ಸೆಕ್ಸ್ 79,273 | ನಿಫ್ಟಿ 24,576 | $/₹ 93.44 | ಚಿನ್ನ (Std. 10g) ₹1,59,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,65,700 (ಬೆಂಗಳೂರು)

# ಹಿಂದಿಗೆ ಅಂಕ: ಹೈಕೋರ್ಟ್ ಆದೇಶ

## ಸರ್ಕಾರದ ಮರುಪರಿಶೀಲನಾ ಅರ್ಜಿ ವಜಾ, ಇಂದು ಸಿ.ಎಂ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** '2025-26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಯ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡಬೇಕೆಂಬ ಆದೇಶವನ್ನು ಮರುಪರಿಶೀಲನೆ ಮಾಡಬೇಕು' ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ.



ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ಈ ಕುರಿತು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಲಾ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧಿಕಾರಿಗಳ ತುರ್ತು ಸಭೆಯನ್ನು ಬುಧವಾರ (ಏ.22) ಕರೆದಿದ್ದಾರೆ.

ಮರು ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ಚಾಲ್ತಿಯಲ್ಲಿರುವ ಅಂಕ ನೀಡುವ ಪದ್ಧತಿಯನ್ನೇ ಮುಂದುವರಿಸುವಂತೆ ಆದೇಶಿಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಗ್ರಾಮೀಣ ಪ್ರದೇಶದ ಶೇ 80ರಷ್ಟು ವಿದ್ಯಾರ್ಥಿಗಳು ಹಿಂದಿಯಲ್ಲಿ ನಪಾಸಾಗುತ್ತಿದ್ದಾರೆ. ಕಳೆದ ಸಾಲಿನಲ್ಲಿ 1.5 ಲಕ್ಷದಿಂದ 1.75 ಲಕ್ಷದಷ್ಟು ವಿದ್ಯಾರ್ಥಿಗಳು ಮೂರನೇ ಭಾಷೆಯ ವಿಷಯದಲ್ಲಿ ನಪಾಸಾಗಿದ್ದಾರೆ. 15-16 ನೇ ವಯಸ್ಸಿನಲ್ಲಿ ನಪಾಸಾದರೆ ಮಕ್ಕಳ ಮಾನಸಿಕ ಸ್ಥಿತಿಯ ಮೇಲೆ ಸಾಕಷ್ಟು ಒತ್ತಡ ಬೀಳುತ್ತದೆ' ಎಂದರು.

'ಗ್ರೇಡ್ ನೀಡುವುದರಿಂದ ಯಾವುದೇ ಸಮಸ್ಯೆಯಾಗುವುದಿಲ್ಲ. ಬೇರೆ ರಾಜ್ಯಗಳಲ್ಲಿ ಇರುವಂತೆ ಕರ್ನಾಟದಲ್ಲಿ ದ್ವಿಭಾಷಾ ನೀತಿಯಿಲ್ಲ. ತ್ರಿಭಾಷಾ ನೀತಿಯಿದೆ. ಹಾಗಾಗಿ, ಅಂಕದ ಬದಲು ಗ್ರೇಡ್ ನೀಡಲು ನಿರ್ಧಾರ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕಾನೂನಿಗೆ ಸೂಕ್ತ ತಿದ್ದುಪಡಿ ತರಲು ಕರಡು ನಿಯಮಗಳನ್ನು ರೂಪಿಸಲಾಗಿದೆ' ಎಂದರು.

▶10

### 'ಸಿ.ಎಂ ಸಭೆಯಲ್ಲೇ ನಿರ್ಧಾರ'

'ಹೈಕೋರ್ಟ್ ಸೂಚನೆ ಪಾಲಿಸಬೇಕೇ ಅಥವಾ ಮೇಲ್ಮನವಿ ಸಲ್ಲಿಸಬೇಕೇ ಎನ್ನುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.



ಸುದ್ದಿಗಾರರ ಜತೆ ಮಾತನಾಡಿದ ಅವರು, '2025–26ನೇ ಶೈಕ್ಷಣಿಕ ಸಾಲಿಗೆ ತೃತೀಯ ಭಾಷಾ ವಿಷಯಗಳಿಗೆ ಅಂಕಗಳನ್ನು ಪರಿಗಣಿಸುವಂತೆ ಕೋರ್ಟ್ ಹೇಳಿದೆ. ಮುಖ್ಯಮಂತ್ರಿ ಜತೆ ಬುಧವಾರ ಚರ್ಚಿಸಲಾಗುವುದು. ಆದೇಶದ ಪ್ರತಿ ಸಿಕ್ಕ ತಕ್ಷಣ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುವುದು' ಎಂದರು.

### 'ಹೈಕೋರ್ಟ್ ತೀರ್ಪಿಗೆ ಸ್ವಾಗತ'

'ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ವಿಷಯದ ಗಾಂಭೀರ್ಯವನ್ನು ಅರ್ಥಮಾಡಿಕೊಳ್ಳಬೇಕಿತ್ತು. ಪರೀಕ್ಷೆಗಳ ಗೌರವ ಕಾಪಾಡದಿದ್ದರೆ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತದೆ' ಎಂದು ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಹೇಳಿದ್ದಾರೆ. 'ಹೈಕೋರ್ಟ್ ತೀರ್ಪು ಕನ್ನಡ ಸೇರಿದಂತೆ ಎಲ್ಲಾ ಸ್ಥಳೀಯ ಭಾಷೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ' ಎಂದು ಸ್ಥಳೀಯ ಭಾಷೆಗಳ ಹಿತಾಸಕ್ತಿ ರಕ್ಷಣಾ ಸಂಘ ಹೇಳಿದೆ. 'ಪರೀಕ್ಷೆಗೆ ಕೆಲವೇ ದಿನಗಳ ಮೊದಲು ಗ್ರೇಡ್ ನೀಡುವುದಾಗಿ ಘೋಷಿಸಿ ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿಸಿರುವುದಕ್ಕೆ ಸರ್ಕಾರ ಕ್ಷಮೆ ಕೇಳಬೇಕು' ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಆಗ್ರಹಿಸಿದ್ದಾರೆ.

### ತ್ವರಿತ ಫಲಿತಾಂಶಕ್ಕೆ ಸಿದ್ಧತೆ

ಹೈಕೋರ್ಟ್ ಈ ಹಿಂದೆಯೇ ಅಂಕ ನೀಡಲು ಸೂಚನೆ ನೀಡಿದ ದಿನದಿಂದಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಂಕ ಹಾಗೂ ಗ್ರೇಡ್ ಎರಡೂ ವಿಧಾನವನ್ನು ಅಳವಡಿಸಿಕೊಂಡು ಪ್ರತ್ಯೇಕ ಫಲಿತಾಂಶದ ಪಟ್ಟಿ ಸಿದ್ಧಪಡಿಸುತ್ತಿದೆ. ಹಾಗಾಗಿ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲೇ ಎಸ್‌ಎಸ್‌ಎಲ್‌ಸಿ ಫಲಿತಾಂಶದ ದಿನವನ್ನೂ ಪ್ರಕಟಿಸುವ ಸಾಧ್ಯತೆ ಇದೆ.

### 'ಪರೀಕ್ಷೆ ರದ್ದು ಮಾಡಬಹುದಲ್ಲಾ?'

'ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕ ನೀಡುವುದಿಲ್ಲ, ಗ್ರೇಡ್ ನೀಡಲಾಗುವುದು ಎಂದು ನೀವು ಸ್ಪಷ್ಟಪಡಿಸಬೇಕಿತ್ತು. ಆದರೆ, ಅಧಿಸೂಚನೆಯಲ್ಲಿ ಇಲ್ಲದ ಗ್ರೇಡ್ ಪದ್ಧತಿಯನ್ನು ಈಗ ಅನುಷ್ಠಾನಕ್ಕೆ ತರಲು ಹೊರಟಿದ್ದೀರಿ. ಉರ್ದು ಶಾಲೆ ಸೇರಿದಂತೆ ಕೆಲವು ಶಾಲೆಗಳಲ್ಲಿ ಕನ್ನಡ ತೃತೀಯ ಭಾಷೆಯಾಗಿದೆ. ತೃತೀಯ ಭಾಷೆಗೆ ಅಂಕದ ಬದಲು ಗ್ರೇಡ್ ನೀಡಿದರೆ ಕನ್ನಡವನ್ನು ತೃತೀಯ ಭಾಷೆಯಾಗಿ ಕಲಿಯುತ್ತಿರುವವರ ಮೇಲಾಗುವ ಪರಿಣಾಮಗಳನ್ನೂ ಯೋಚಿಸಿ' ಎಂದು ನ್ಯಾಯಪೀಠ ಸರ್ಕಾರದ ನಡೆಗೆ ಅಸಮಾಧಾನ ವ್ಯಕ್ತಪಡಿಸಿತು.

▶10



ಕೇರಳದ ತ್ರಿಶ್ಯೂರ್ ಸಮೀಪದ ಮುಂಡತ್ತಿಕೋಡ್ ಎಂಬಲ್ಲಿ, ತ್ರಿಶ್ಯೂರ್ ಪೂರಂಗಾಗಿ ಪಟಾಕಿ ತಯಾರಿಕೆ ನಡೆಯುತ್ತಿದ್ದ ಸ್ಥಳದಲ್ಲಿ ಸಂಭವಿಸಿದ ಸ್ಫೋಟದಲ್ಲಿ ದಟ್ಟ ಹೊಗೆ, ಬೆಂಕಿ ಕಾಣಿಸಿಕೊಂಡಿತು — ವಿಡಿಯೊ ತುಣುಕಿನ ಚಿತ್ರ

# ಪಟಾಕಿ ದುರಂತ, 13 ಸಾವು

**ತ್ರಿಶ್ಯೂರ್ (ಕೇರಳ) (ಪಿಟಿಐ):** ಕೇರಳದ ಪ್ರಸಿದ್ಧ 'ತ್ರಿಶ್ಯೂರ್ ಪೂರಂ'ಗಾಗಿ (ಉತ್ಸವ) ಮುಂಡತ್ತಿಕೋಡ್ ಎಂಬಲ್ಲಿ ಪಟಾಕಿ ತಯಾರಿಕೆ ನಡೆಯುತ್ತಿದ್ದ ಸ್ಥಳದಲ್ಲಿ ಮಂಗಳವಾರ ಸ್ಫೋಟ ಸಂಭವಿಸಿ 13 ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ.

ತ್ರಿಶ್ಯೂರ್ ಪೂರಂ 'ಮಾದರಿ ಸಿಡಿಮದ್ದು ಪ್ರದರ್ಶನ' ಏಪ್ರಿಲ್ 24ರಂದು ನಡೆಯಲಿದೆ. ಇದಕ್ಕಾಗಿ ತಿರುವಂಬಾಡಿ ದೇವಸ್ವಂ ಬೋರ್ಡ್ ಪರವಾಗಿ ಕಾರ್ಮಿಕರು ಮುಂಡತ್ತಿಕೋಡ್‌ನ ಭತ್ತದ ಗದ್ದೆಯಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಂಡು ಪಟಾಕಿ ತಯಾರಿಸುತ್ತಿದ್ದರು.

ಮಧ್ಯಾಹ್ನ 3.30ರ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದೆ. ಆಗ ಶೆಡ್‌ಗಳಲ್ಲಿ 40ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಸ್ಫೋಟದ ತೀವ್ರತೆಗೆ ಮೂವರು ಕಾರ್ಮಿಕರ ದೇಹಗಳು ಛಿದ್ರಗೊಂಡು ಘಟಕದ ಹೊರಗೆ ಚದುರಿ ಬಿದ್ದಿವೆ. ಶೆಡ್‌ಗಳು ಕ್ಷಣಮಾತ್ರದಲ್ಲೇ ಉರಿದು ಭಸ್ಮವಾಗಿವೆ.

'13 ಕಾರ್ಮಿಕರು ಮೃತಪಟ್ಟಿರುವುದನ್ನು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಕೆಎಸ್‌ಡಿಎಂಎ) ದೃಢಪಡಿಸಿದೆ. ಐದು ಮೃತದೇಹಗಳನ್ನು ಗುರುತಿಸಲಾಗಿದೆ. ಮೂರು ಮೃತದೇಹಗಳ ಭಾಗಗಳು ಗುರುತು ಸಿಗದ ರೀತಿಯಲ್ಲಿ ಘಟನೆ ನಡೆದ ಸ್ಥಳದಲ್ಲಿ ಛಿದ್ರಗೊಂಡು ಬಿದ್ದಿದ್ದವು' ಎಂದು ಮೂಲಗಳು ಹೇಳಿವೆ.

ಬೆಂಕಿ ವ್ಯಾಪಿಸಿದ್ದರಿಂದ ಮತ್ತು ಶೆಡ್‌ಗಳ ಒಳಗೆ ಸಂಗ್ರಹಿಸಿಟ್ಟ ಸಿಡಿಮದ್ದು ಸ್ಫೋಟಗೊಳ್ಳುತ್ತಲೇ ಇದ್ದಿದ್ದರಿಂದ ರಕ್ಷಣಾ ಕಾರ್ಯಕ್ಕೆ ಅಡ್ಡಿಯಾಯಿತು. ಶೆಡ್‌ಗಳಿಂದ ಕಾರ್ಮಿಕರನ್ನು ರಕ್ಷಿಸಲು ಮತ್ತು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲು ಸ್ಥಳೀಯರು ನೆರವಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಡತ್ತಿಕೋಡ್ ಪಟಾಕಿ ತಯಾರಿಕಾ ಘಟಕವು ತ್ರಿಶ್ಯೂರ್ ಪಟ್ಟಣದಿಂದ 12 ಕಿ.ಮೀ ದೂರದಲ್ಲಿದೆ. ಸುಟ್ಟ ಗಾಯಗಳಿಂದ ಐವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಚಿಕಿತ್ಸೆ, ಮೇಲ್ವಿಚಾರಣೆಗೆ ವಿಶೇಷ ವ್ಯವಸ್ಥೆ

ಗಂಭೀರವಾಗಿ ಗಾಯಗೊಂಡವರಿಗೆ ಚಿಕಿತ್ಸೆ ಮತ್ತು ವಿಶೇಷ ಆರೈಕೆ ಕಲ್ಪಿಸಲು ತ್ರಿಶ್ಯೂರ್‌ನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳಿಗೆ ಆರೋಗ್ಯ ಸಚಿವೆ ವೀಣಾ ಜಾರ್ಜ್ ಸೂಚಿಸಿದ್ದಾರೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಸನ್ನದ್ಧವಾಗಿರುವಂತೆ ತ್ರಿಶ್ಯೂರ್ ಸುತ್ತಲಿನ ಎಲ್ಲ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ. 'ಎಷ್ಟು ಜನರು ಈ ಶೆಡ್‌ಗಳಲ್ಲಿ ಇದ್ದರು, ಮೃತಪಟ್ಟವರೆಷ್ಟು, ಗಾಯಗೊಂಡವರು ಎಷ್ಟು ಮಂದಿ ಎನ್ನುವುದು ಇನ್ನೂ ನಿಖರವಾಗಿ ತಿಳಿದಿಲ್ಲ' ಎಂದು ವಡಕಾಂಚೇರಿ ನಗರಸಭೆ ಅಧ್ಯಕ್ಷ ಪಿ.ಎನ್ ಸುರೇಂದ್ರನ್ ಹೇಳಿದ್ದಾರೆ.

ತ್ರಿಶ್ಯೂರ್ ಜಿಲ್ಲಾಧಿಕಾರಿ ದುರಂತದ ಕುರಿತು ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದಾರೆ. ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ವಿಶೇಷ ಕಾರ್ಯವಿಧಾನ ರೂಪಿಸಲಾಗಿದೆ ಎಂದು ಕೇರಳ ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

**₹2 ಲಕ್ಷ ಪರಿಹಾರ ಘೋಷಣೆ:** ಮೃತರ ಹತ್ತಿರದ ಸಂಬಂಧಿಕರಿಗೆ ₹2 ಲಕ್ಷ ಪರಿಹಾರವನ್ನು ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಘೋಷಿಸಲಾಗಿದೆ. ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

> **ಸೂರ್ಯನ ಪ್ರಖರ ಕಿರಣಗಳು ನೇರವಾಗಿ ಗನ್‌ಪೌಡರ್ (ಸಿಡಿಮದ್ದು) ಇರಿಸಿದ್ದ ಚೀಲದ ಮೇಲೆ ಬೀಳುತ್ತಿದ್ದವು. ಬಿಸಿಲಿನ ಝಳದಿಂದ ಅವಘಡ ಸಂಭವಿಸಿರಬಹುದು**
> **ವಿಲ್ಸನ್,** ಸ್ಫೋಟದಲ್ಲಿ ಬದುಕುಳಿದ ಕಾರ್ಮಿಕ

ಚಿನಕುರುಳಿ — ಪ್ರಕಾಶ್ ಶೆಟ್ಟಿ




# ಮಾತುಕತೆ: ಮುಗಿಯದ ಗೊಂದಲ

**ಇಸ್ಲಾಮಾಬಾದ್/ದುಬೈ/ವಾಷಿಂಗ್ಟನ್ (ಎಪಿ/ ಎಎಫ್‌ಪಿ):** ಅಮೆರಿಕ–ಇರಾನ್ ನಡುವಿನ ಮತ್ತೊಂದು ಸುತ್ತಿನ ಮಾತುಕತೆ ಕುರಿತ ಅನಿಶ್ಚಿತತೆ ಮಂಗಳವಾರವೂ ಮುಂದುವರಿದಿದೆ. ಎರಡು ವಾರಗಳ ಕದನ ವಿರಾಮ ಬುಧವಾರ ಕೊನೆಗೊಳ್ಳಲಿದ್ದು, ಅದನ್ನು ವಿಸ್ತರಿಸುವ ಬಗ್ಗೆಯೂ ಯಾವುದೇ ನಿರ್ಧಾರ ಹೊರಬಿದ್ದಿಲ್ಲ.

'ಅಮೆರಿಕದ ಬೆದರಿಕೆ ಇರುವುದರಿಂದ ಶಾಂತಿ ಮಾತುಕತೆಗಾಗಿ ಹಾಜರಾಗುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ' ಎಂದು ಇರಾನ್‌ನ ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಹೀಗಾಗಿ, ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಇಸ್ಲಾಮಾಬಾದ್‌ಗೆ ಕೈಗೊಳ್ಳಬೇಕಿದ್ದ ರಾಜತಾಂತ್ರಿಕ ಪ್ರವಾಸವನ್ನು ತಡೆಹಿಡಿಯಲಾಗಿದೆ.

'ಅಮೆರಿಕದ ಪ್ರಸ್ತಾವಗಳಿಗೆ ಇರಾನ್ ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

▶10

### 'ಕದನ ವಿರಾಮ ವಿಸ್ತರಣೆ ಇಲ್ಲ'

'ಇರಾನ್ ಜತೆಗಿನ ಕದನ ವಿರಾಮವನ್ನು ವಿಸ್ತರಿಸಲು ಬಯಸುವುದಿಲ್ಲ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. 'ಕದನ ವಿರಾಮ ವಿಸ್ತರಿಸುವಷ್ಟು ಸಮಯ ನಮ್ಮ ಬಳಿ ಇಲ್ಲ' ಎಂದು ಸಿಎನ್‌ಬಿಸಿಗೆ ಮಂಗಳವಾರ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಇರಾನ್ ಜತೆ ಶೀಘ್ರದಲ್ಲೇ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಅಮೆರಿಕವು ದಾಳಿಯನ್ನು ಪುನರಾರಂಭಿಸುತ್ತದೆ ಎಂದು ಮತ್ತೆ ಎಚ್ಚರಿಸಿದ್ದಾರೆ.

'ನಾವು ಬಾಂಬ್ ದಾಳಿ ಮಾಡಲು ಸಿದ್ಧರಿದ್ದೇವೆ. ಏಕೆಂದರೆ, ಅದೊಂದೇ ಆಯ್ಕೆ ನಮ್ಮ ಮುಂದಿದೆ ಎಂದು ಭಾವಿಸುತ್ತೇನೆ. ಇರಾನ್ ಮೇಲೆ ಮತ್ತೆ ಎರಗಲು ನಮ್ಮ ಸೇನೆ ಉತ್ಸುಕವಾಗಿದೆ' ಎಂದಿದ್ದಾರೆ.

### 'ಇರಾನ್‌ಗೆ ಚೀನಾ 'ಉಡುಗೊರೆ' ಸಾಗಿಸುತ್ತಿದ್ದ ಹಡಗು'

'ಚೀನಾದಿಂದ ಇರಾನ್‌ಗೆ 'ಉಡುಗೊರೆ' ಸಾಗಿಸುತ್ತಿದ್ದ ಹಡಗನ್ನು ಅಮೆರಿಕವು ತಡೆದಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಒಮಾನ್ ಕೊಲ್ಲಿಯಲ್ಲಿ ಸಾಗುತ್ತಿದ್ದ ಇರಾನ್ ಹಡಗನ್ನು ಅಮೆರಿಕ ಸೇನೆ ಭಾನುವಾರ ತನ್ನ ವಶಕ್ಕೆ ತೆಗೆದುಕೊಂಡಿತ್ತು.

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

# ‘ಔಷಧ’ಕ್ಕಾಗಿ ಕಾದಿವೆ ಪ್ರಾಥಮಿಕ ಆರೋಗ್ಯ ಕೇಂದ್ರ

## ನಗರದ ಚಿಕಿತ್ಸಾ ಕೇಂದ್ರಗಳಿಗೆ ನಿಯಮಿತವಾಗಿ ಪೂರೈಕೆಯಾಗದ ಔಷಧ • ಅಸಹಾಯಕರಾದ ವೈದ್ಯರು

• ವರುಣ ಹೆಗಡೆ



ಬಂಗಾರಪ್ಪ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದ ಹೊರನೋಟ




**ಬೆಂಗಳೂರು:** ಮೊದಲ ಹಂತದ ಆರೋಗ್ಯ ಸೇವೆಗಳನ್ನು ಒದಗಿಸುವ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಗಳ ದಾಸ್ತಾನು ಖಾಲಿಯಾಗಿದೆ. ಇದರಿಂದಾಗಿ ಬಹುತೇಕ ಔಷಧಗಳನ್ನು ಹೊರಗಡೆಯೇ ಖರೀದಿಸುವಂತೆ ವೈದ್ಯರು ಚೀಟಿ ಬರೆದುಕೊಡುತ್ತಿದ್ದಾರೆ.

ಸುಸಜ್ಜಿತ ಕಟ್ಟಡ ಹೊಂದಿರುವ ಈ ಕೇಂದ್ರಗಳಿಗೆ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅವರಲ್ಲಿ ಬಹುತೇಕರು ಬಡ–ಮಧ್ಯಮ ವರ್ಗದವರೇ ಆಗಿದ್ದಾರೆ. ಅದರಲ್ಲೂ ವೃದ್ಧರು ಹಾಗೂ ಮಹಿಳೆಯರು ನಿಯಮಿತವಾಗಿ ಈ ಕೇಂದ್ರಗಳಿಗೆ ಭೇಟಿ ನೀಡಿ, ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ. ಉಚಿತ ಚಿಕಿತ್ಸೆ ಪಡೆಯುತ್ತಿರುವ ಅವರು, ಮಾತ್ರೆಗಳಿಗೆ ಖಾಸಗಿ ಔಷಧ ಕೇಂದ್ರಗಳಲ್ಲಿ ನೂರಾರು ರೂಪಾಯಿ ವೆಚ್ಚ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯಮಿತವಾಗಿ ಔಷಧಗಳು ಪೂರೈಕೆಯಾಗದ ಕಾರಣ, ಕೇಂದ್ರಗಳ ಔಷಧ ದಾಸ್ತಾನು ವಿಭಾಗದಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡದಂತಹ ಸಮಸ್ಯೆಗಳಿಗೆ ನೀಡುವ ಸಾಮಾನ್ಯ ಔಷಧಗಳು ಮಾತ್ರ ಕಾಣಸಿಗುತ್ತವೆ.

ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಿತಿಗತಿ, ವೈದ್ಯರ ಲಭ್ಯತೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ‘ಪ್ರಜಾವಾಣಿ’ಯ ಪ್ರತಿನಿಧಿ ನಡೆಸಿದ ‘ರಿಯಾಲಿಟಿ ಚೆಕ್’ನಲ್ಲಿ ಔಷಧಗಳ ಕೊರತೆಯ ಸಮಸ್ಯೆ ದರ್ಶನವಾಗಿದ್ದು, ರೋಗಿಗಳು ಚೀಟಿ ಹಿಡಿದು ಖಾಲಿ ಕೈಯಲ್ಲಿ ತೆರಳುವ ದೃಶ್ಯ ಸಾಮಾನ್ಯವಾಗಿದೆ.

ನಗರದಲ್ಲಿ ಜಿಬಿಎ ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 150ಕ್ಕೂ ಅಧಿಕ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಮಾರ್ಗಸೂಚಿಗಳ ಪ್ರಕಾರ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕಿದೆ. ಆದರೆ, ನಗರದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಇರುವ ಕೇಂದ್ರಗಳಿಗೂ ಅಗತ್ಯ ಔಷಧ ಒದಗಿಸದಿರುವುದು ರೋಗಿಗಳ ಜತೆಗೆ ವೈದ್ಯರ ಅಸಮಾಧಾನಕ್ಕೂ ಕಾರಣವಾಗಿದೆ.

**ಸಿಜಿಎಚ್‌ಎಸ್ ಅಡಿ ಔಷಧ:** ಕೆಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ (ಸಿಜಿಎಚ್‌ಎಸ್) ಲಭ್ಯವಿರುವ ಔಷಧ ಪಡೆದು, ತಮ್ಮ ಕೇಂದ್ರದಲ್ಲಿ ವಿತರಿಸುತ್ತಿದ್ದಾರೆ. ಅವಧಿ ಮೀರಲು ಕೆಲ ದಿನಗಳು ಬಾಕಿ ಇರುವ ಔಷಧಗಳು ಮಾತ್ರ ಸಿಜಿಎಚ್‌ಎಸ್ ಅಡಿ ವೈದ್ಯರು ಪಡೆದುಕೊಳ್ಳುತ್ತಿದ್ದಾರೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಡಿ ಪೂರೈಕೆ ಆಗುವ ಔಷಧಗಳ ಬಳಕೆಯ ಅವಧಿಯೂ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿ ಇರುವುದಿಲ್ಲ ಎಂದು ದೂರುತ್ತಾರೆ ವೈದ್ಯರು.

‘ಸಿಜಿಎಚ್‌ಎಸ್ ಕೇಂದ್ರಗಳಲ್ಲಿ ಮನವಿ ಮಾಡಿ, ಔಷಧ ತರಿಸುತ್ತಿದ್ದೇವೆ. ಅಲ್ಲಿ ಕೂಡ ಅವಧಿ ಮೀರಲು ಸಮೀಪಿಸಿದ ಔಷಧಗಳನ್ನು ನೀಡುತ್ತಾರೆ. ಮಧುಮೇಹಕ್ಕೆ ‘ಮೆಟ್‌ಫಾರ್ಮಿನ್’ ಔಷಧ ಲಭ್ಯವಿದ್ದರೂ, ಈ ಸಮಸ್ಯೆ ನಿವಾರಣೆಗೆ ಬೇರೆ ಸಂಯೋಜನೆ ಅಗತ್ಯ. ಆ ಔಷಧಗಳು ಲಭ್ಯವಿಲ್ಲ. ಕ್ಯಾಲ್ಸಿಯಂ ಮಾತ್ರೆಗಳು ಇಲ್ಲವಾಗಿವೆ. ಈ ಸಮಸ್ಯೆ ನಿರಂತರ ಇರುವುದರಿಂದ ರೋಗಿಗಳೂ ಪ್ರಶ್ನಿಸದೆ ತೆರಳುತ್ತಿದ್ದಾರೆ’ ಎಂದು ಬೆಂಗಳೂರು ಪೂರ್ವದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರೊಬ್ಬರು ಹೇಳಿದರು.

‘ಉಚಿತವಾಗಿ ಚಿಕಿತ್ಸೆ ಹಾಗೂ ಔಷಧ ಸಿಗುತ್ತದೆ ಎಂಬ ಕಾರಣಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬರುತ್ತೇವೆ. ಆದರೆ, ಈ ಕೇಂದ್ರಗಳಲ್ಲಿ ಬಹುತೇಕ ಔಷಧಗಳು ದೊರೆಯುತ್ತಿಲ್ಲ. ಹೊರಗಡೆ ಖಾಸಗಿ ಔಷಧ ಕೇಂದ್ರಗಳಲ್ಲಿ ಖರೀದಿಸುತ್ತಿದ್ದೇವೆ’ ಎಂದು ಚಾಮರಾಜಪೇಟೆ ನಿವಾಸಿ ಮಮತಾ ಬೇಸರ ವ್ಯಕ್ತಪಡಿಸಿದರು.

‘ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಆದ್ಯತೆ ನೀಡಿದೆ, ಔಷಧ ಪೂರೈಕೆಗೂ ಸರ್ಕಾರ ಕ್ರಮವಹಿಸಬೇಕು. ನಮ್ಮ ಕ್ಲಿನಿಕ್‌ನಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಔಷಧಗಳು ಸಮರ್ಪಕವಾಗಿ ದೊರೆಯುತ್ತಿಲ್ಲ’ ಎಂದು ಮಲ್ಲೇಶ್ವರದ ನಿವಾಸಿ ನಾಗರಾಜು ಹೇಳಿದರು.

### ಆಯ್ದ ಕಡೆ ಆಯುಷ್ಮತಿ ಕ್ಲಿನಿಕ್

ನಗರದ ಆಯ್ದ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಯುಷ್ಮತಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರ ಆರೋಗ್ಯಕ್ಕಾಗಿ ವಿಶೇಷವಾಗಿ ರೂಪಿಸಲಾದ ಸರ್ಕಾರಿ ಕ್ಲಿನಿಕ್‌ಗಳು ಇವಾಗಿವೆ. ವಾರದ ವಿವಿಧ ದಿನ ತಜ್ಞ ವೈದ್ಯರು ಲಭ್ಯ ಇರುತ್ತಾರೆ. ಮಕ್ಕಳ ತಜ್ಞರು, ಮೂಳೆ ಮತ್ತು ಕೀಲು ತಜ್ಞರು, ಸ್ತ್ರೀರೋಗ ತಜ್ಞರು, ಸಾಮಾನ್ಯ ವೈದ್ಯರು ಸಹ ಭೇಟಿ ನೀಡುತ್ತಿದ್ದಾರೆ. ಪ್ರತಿ ಗುರುವಾರ ಲಸಿಕಾಕರಣ ನಡೆಯುತ್ತಿದೆ.

### ಆವರಣದಲ್ಲಿ ಅಶುಚಿತ್ವ

ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆವರಣದಲ್ಲಿ ಸ್ವಚ್ಛತೆ ಕಣ್ಮರೆಯಾಗಿದೆ. ಪೌರಕಾರ್ಮಿಕರು ನಿಯಮಿತವಾಗಿ ಕಸ ಹಾಗೂ ವೈದ್ಯಕೀಯ ತ್ಯಾಜ್ಯ ಸಂಗ್ರಹಕ್ಕೆ ಬಾರದ ಕಾರಣ, ಕೇಂದ್ರಗಳ ಆವರಣದಲ್ಲಿ ಎಲ್ಲೆಂದರಲ್ಲಿ ಕಸ ಸಾಮಾನ್ಯವಾಗಿದೆ. ಸಿರಿಂಜ್‌ಗಳು ಸಹ ತ್ಯಾಜ್ಯದಲ್ಲಿ ಇರುವ ಕಾರಣ ಪೌರಕಾರ್ಮಿಕರು ವಾಪಸ್ ತೆರಳುತ್ತಿದ್ದಾರೆ.

‘ಹಣ ನೀಡುತ್ತೇವೆ ಎಂದರೂ ಪೌರಕಾರ್ಮಿಕರು ಕಸ ಸಂಗ್ರಹಕ್ಕೆ ಬರುತ್ತಿಲ್ಲ. ಇದರಿಂದಾಗಿ ಕಸದ ವಿಲೇವಾರಿ ಸಮಸ್ಯೆಯಾಗಿದೆ. ವಾಸನೆ ತಾಳಲಾರದೆ ಅನಿವಾರ್ಯ ಕಾರಣದಿಂದ ಬೆಂಕಿ ಹಾಕಬೇಕಾಗಿದೆ’ ಎಂದು ಟಿ.ಆರ್. ಮಿಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ತಿಳಿಸಿದರು.



ಟಿ.ಆರ್.ಮಿಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಸ ಹಾಗೂ ವೈದ್ಯಕೀಯ ತ್ಯಾಜ್ಯಕ್ಕೆ ಬೆಂಕಿ ಹಾಕಿರುವುದನ್ನು ಗರ್ಭಿಣಿಯೊಬ್ಬರು ವೀಕ್ಷಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

### ಕೊರತೆ ಬಗ್ಗೆ ಪ್ರಸ್ತಾಪಿಸಿದ್ದ ವೈದ್ಯರು

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಬಗ್ಗೆ ದೂರಿದ್ದ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಈ ಸಮಸ್ಯೆ ನಿವಾರಿಸುವಂತೆ ರಾಜ್ಯ ಸರ್ಕಾರಕ್ಕೆ ಕಳೆದ ತಿಂಗಳು ಆಗ್ರಹಿಸಿತ್ತು. ‘ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಇತ್ತೀಚಿನ ದಿನಗಳಲ್ಲಿ ಔಷಧ ಸರಬರಾಜು ಮಾಡುವಲ್ಲಿ ಸಂಪೂರ್ಣ ವಿಫಲವಾಗಿರುವ ಕಾರಣ, ರೋಗಿಗಳಿಗೆ ಸರಿಯಾದ ಸಮಯದಲ್ಲಿ ಔಷಧೋಪಚಾರ ದೊರೆಯದೆ ಪರದಾಡುವಂತಾಗಿದೆ. ಇದರಿಂದ ವೈದ್ಯರು ಮತ್ತು ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಈ ಕೊರತೆ ರೋಗಿಗಳ ಜತೆಗೆ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ’ ಎಂದು ಹೇಳಿತ್ತು.

ವೈದ್ಯರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮಾರ್ಚ್ 10ರಂದು ರಾಜ್ಯ ಸರ್ಕಾರ ನಡೆಸಿದ ಸಭೆಯಲ್ಲಿ, ಔಷಧಗಳ ಪೂರೈಕೆ ಬಗ್ಗೆಯೂ ಪ್ರಸ್ತಾಪಿಸಲಾಗಿತ್ತು. ‘ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಿಂದ 500ಕ್ಕೂ ಅಧಿಕ ಔಷಧಗಳ ಖರೀದಿಗೆ ಟೆಂಡರ್ ಕರೆಯಲಾಗಿದೆ. ಹಂತ ಹಂತವಾಗಿ ಎಲ್ಲ ಆಸ್ಪತ್ರೆಗಳಿಗೆ ಔಷಧ ಸರಬರಾಜು ಮಾಡಲು ಕ್ರಮವಹಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಭರವಸೆ ನೀಡಿದ್ದರು.

### ಯಾವೆಲ್ಲ ಮಾತ್ರೆಗಳಿಲ್ಲ?

ಪ್ರಮುಖವಾಗಿ ಬ್ಯಾಕ್ಟೀರಿಯಾ ಸೋಂಕುಗಳಿಗೆ ಬಳಸುವ ಕ್ಯಾಪ್. ಅಮೋಕ್ಸ್ 250/500, ಮೆಟ್ರೊ–400, ಉದರ ಸಂಬಂಧಿ ಸಮಸ್ಯೆಗೆ ಬಳಸುವ ನಾಫ್ಲಾಕ್ಸ್ 400, ನೋವು ನಿವಾರಕ ಮಾತ್ರೆ ಪಿಸಿಎಂ 650, ಶ್ವಾಸಕೋಶ, ಕಣ್ಣು, ಚರ್ಮ ಸಂಬಂಧಿ ಸೋಂಕಿಗೆ ಬಳಸುವ ಡಾಕ್ಸಿ–100, ಎದೆಯುರಿ, ಅಜೀರ್ಣದಂತಹ ಸಮಸ್ಯೆಗೆ ನೀಡುವ ರಾಂಟಕ್–150, ಶೀತಕ್ಕೆ ನೀಡುವ ಸಿಟ್ರಜನ್ –10 ಎಂ.ಜಿ., ಸಾಲ್ಬುಟಮಾಲ್ 2ಎಂ.ಜಿ., ಉಸಿರಾಟ ಸಂಬಂಧಿ ಸಮಸ್ಯೆಗೆ ನೀಡುವ ಅಸೆಫೈಲಿನ್, ಎದೆಯುರಿಗೆ ನೀಡುವ ಒಮೆಜ್ 20 ಮಾತ್ರೆ ಕೊರತೆಯಿದೆ. ಲಭ್ಯವಿರುವ ಮಾತ್ರೆಗಳು ಸೀಮಿತ ದಾಸ್ತಾನು ಇದ್ದು, ಅಗತ್ಯಕ್ಕಿಂತ ಕಡಿಮೆ ಮಾತ್ರೆಗಳನ್ನು ನೀಡಲಾಗುತ್ತಿದೆ.

### ಅಂಕಿ ಅಂಶಗಳು

**146** ಜಿಬಿಎ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

**36** ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

### ‘ಸ್ಥಳೀಯ ಅನುದಾನದಲ್ಲಿ ಅಗತ್ಯ ಔಷಧ ಖರೀದಿ’

‘ಪರಿಶೀಲನೆ ವೇಳೆ ಆರೋಗ್ಯ ಕೇಂದ್ರಗಳಲ್ಲಿ ಔಷಧ ಕೊರತೆ ಗಮನಕ್ಕೆ ಬಂದಿಲ್ಲ’ ಎಂದು ಜಿಬಿಎ ವಿಶೇಷ ಆಯುಕ್ತ (ಆರೋಗ್ಯ) ವೆಂಕಟಾಚಲಪತಿ ಆರ್. ಹೇಳಿದರು.

‘ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜಿಬಿಎ ವ್ಯಾಪ್ತಿಗೆ ಬರಲಿವೆ. ನಮ್ಮ ವ್ಯಾಪ್ತಿಯಲ್ಲಿ ಸ್ಥಳೀಯ ಅನುದಾನದಲ್ಲಿ ಕೊರತೆ ಇರುವ ಅಗತ್ಯ ಔಷಧಗಳನ್ನು ಖರೀದಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒದಗಿಸುತ್ತಿದ್ದೇವೆ’ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ. ರವೀಂದ್ರನಾಥ ಎಂ. ಮೇಟಿ ತಿಳಿಸಿದರು.

### ಅನುಪಸ್ಥಿತಿಯಲ್ಲಿ ಸಮಸ್ಯೆ

ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಕಾರ್ಯನಿರ್ವಹಿಸಲಿವೆ. ಈ ಕೇಂದ್ರಗಳಲ್ಲಿ ತಲಾ ಒಬ್ಬರು ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಸಭೆ ಸೇರಿ ತುರ್ತು ಕಾರ್ಯದ ನಿಮಿತ್ತ ತೆರಳಿದಾಗ ಶುಶ್ರೂಷಕರೆ ರೋಗಿಗಳ ಸಮಸ್ಯೆ ಆಲಿಸಿ, ಔಷಧ ನೀಡುತ್ತಿದ್ದಾರೆ. ಕೆಲ ಸಂದರ್ಭದಲ್ಲಿ ವೈದ್ಯರನ್ನು ದೂರವಾಣಿ ಮೂಲಕ ಸಂಪರ್ಕಿಸುತ್ತಿದ್ದಾರೆ. ವೈದ್ಯರು ಕರ್ತವ್ಯಕ್ಕೆ ಗೈರಾದಲ್ಲಿ, ಸಮೀಪದ ನಮ್ಮ ಕ್ಲಿನಿಕ್ ವೈದ್ಯರನ್ನು ನಿಯೋಜಿಸಲಾಗುತ್ತಿದೆ. ಗಂಭೀರ ಮತ್ತು ತುರ್ತು ಪ್ರಕರಣಗಳು ಬಂದಲ್ಲಿ ಆಂಬುಲೆನ್ಸ್‌ಗೆ ಕರೆ ಮಾಡಿ, ವಿಕ್ಟೋರಿಯಾ ಸೇರಿ ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರು ಕಳಿಸುತ್ತಿದ್ದಾರೆ.

---

### ನಿಧನ ವಾರ್ತೆ

**ಲೀಲಾವತಿ**



**ರಾಜರಾಜೇಶ್ವರಿನಗರ:** ಹೇರೋಹಳ್ಳಿ ಸಿಂಡಿಕೇಟ್ ಬ್ಯಾಂಕ್ ಲೇಔಟ್‌ನ ನಿವಾಸಿ ಲೀಲಾವತಿ(83) ಮಂಗಳವಾರ ನಿಧನರಾದರು. ಅವರಿಗೆ ಪುತ್ರ, ಓಂ ಸೇವಾ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿ.ಎನ್. ಕೃಷ್ಣ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ ಸುಮನಹಳ್ಳಿ ಚಿತಾಗಾರದಲ್ಲಿ ನಡೆಯಲಿದೆ. ಸಂಪರ್ಕ: 9845035084.



### ಆದಿ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ

# ‘ಧರ್ಮ ರಕ್ಷಕ ಶಂಕರಾಚಾರ್ಯ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ (ಎಡದಿಂದ) ಬಿ.ಎಸ್ ಮಂಜುನಾಥ ಸ್ವಾಮಿ, ಪಾವಗಡ ಪ್ರಕಾಶರಾವ್, ಅಸಗೋಡು ಜಯಸಿಂಹ, ದಿನೇಶ್ ಗುಂಡೂರಾವ್ ಅವರು ಆದಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು — ಪ್ರಜಾವಾಣಿ ಚಿತ್ರ

**ಬೆಂಗಳೂರು:** ‘ಶಂಕರಾಚಾರ್ಯರು 1,300 ವರ್ಷಗಳ ಹಿಂದೆ ಕೈಗೊಂಡ ಕಾರ್ಯಗಳಿಂದ ಹಿಂದೂ ಧರ್ಮ ಉಳಿದಿದೆ. ಇಲ್ಲದೇ ಇದ್ದರೆ ನಶಿಸಿ ಹೋಗುತ್ತಿತ್ತು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾ ಕ್ಷೇತ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಆದಿ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದಕ್ಷಿಣದ ಕೇರಳದಲ್ಲಿ ಜನಿಸಿದರೂ ಶಂಕರರು ಉತ್ತರ ಭಾರತದಲ್ಲಿ ಪ್ರವಾಸ ಮಾಡಿ ನಾಲ್ಕು ಪೀಠ ಸ್ಥಾಪಿಸಿದರು. ಸೂಕ್ತ ರಸ್ತೆಗಳು, ಸಂಚಾರ ವ್ಯವಸ್ಥೆ ಇಲ್ಲದಿದ್ದರೂ ಆಗಲೇ ಕಾಲ್ನಡಿಗೆಯಲ್ಲಿ ದೇಶದಾದ್ಯಂತ ಪ್ರವಾಸ ಮಾಡಿ ಧರ್ಮ ಪ್ರಸಾರ ಕೈಗೊಂಡರು. ಶಂಕರಾಚಾರ್ಯರು ಎಲ್ಲರೊಂದಿಗೆ ಮುಖಾಮುಖಿಯಾಗುವ ಜತೆಗೆ ಎದುರಿಗಿದ್ದವರ ವಿಚಾರ ಗೌರವಿಸುತ್ತಿದ್ದರು. ಈ ಕಾರಣದಿಂದಲೇ ಅವರು ಈಗಲೂ ಪ್ರಸ್ತುತರಾಗಿದ್ದಾರೆ’ ಎಂದರು.

ಉಪನ್ಯಾಸ ನೀಡಿದ ಪಾವಗಡ ಪ್ರಕಾಶರಾವ್, ‘ಶಂಕರರು ಭಗವದ್ಗೀತೆ, ಉಪನಿಷತ್ ಹಾಗೂ ಬ್ರಹ್ಮಸೂತ್ರಗಳನ್ನು ಅಧ್ಯಯನ ಮಾಡಿ ಭಾಷ್ಯಗಳನ್ನು ಬರೆದರು. ತತ್ವ ಅನುಸಂಧಾನದ ಮೂಲಕ ಅವರು ನೀಡಿದ ಸಂದೇಶಗಳನ್ನು ಜನರಿಗೆ ಉಪನ್ಯಾಸಗಳ ಮೂಲಕ ತಿಳಿಸುವ ಪ್ರಯತ್ನ ಇನ್ನಷ್ಟು ಹೆಚ್ಚಬೇಕು’ ಎಂದು ಸಲಹೆ ನೀಡಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಮಾತನಾಡಿ, ‘ಶಂಕರರು ಬದುಕಿದ್ದು ಬರೀ 32 ವರ್ಷವಾದರೂ ಈಗಲೂ ಅವರ ವಿಚಾರಗಳ ಮಂಥನ ನಡೆಯುತ್ತಿದೆ. ಈ ಮೂಲಕ ನಮ್ಮ ನಡುವೆ ಅವರು ಜೀವಂತವಾಗಿದ್ದಾರೆ. ಅವರು ಭಾರತವನ್ನು ಭಾವನಾತ್ಮಕವಾಗಿ ಕಟ್ಟುವ ಕೆಲಸ ಮಾಡಿದರು’ ಎಂದರು.

ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್, ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ್, ಜ್ಯೋತಿಷಿ ದ್ವಾರಕನಾಥ, ಶೃಂಗೇರಿ ಮಠದ ಮಾಜಿ ಆಡಳಿತಾಧಿಕಾರಿ ವಿ.ಆರ್.ಗೌರಿಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್.ಮಂಜುನಾಥಸ್ವಾಮಿ, ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಉಪಸ್ಥಿತರಿದ್ದರು.

#### ‘ಮುಂದಿನ ವರ್ಷದಿಂದ ಶಂಕರ ಪ್ರಶಸ್ತಿ’

‘ಶಂಕರರ ಹೆಸರಿನಲ್ಲಿ ಸಾಧಕರೊಬ್ಬರಿಗೆ ಪ್ರಶಸ್ತಿ ನೀಡುವ ಕುರಿತು ಹಿಂದೆ ಘೋಷಣೆ ಮಾಡಲಾಗಿತ್ತು. ಆದರೆ, ಅದು ಈವರೆಗೂ ಜಾರಿಯಾಗಿಲ್ಲ. ಮುಖ್ಯಮಂತ್ರಿ ಅವರ ಅನುಮತಿ ಪಡೆದು ಮುಂದಿನ ವರ್ಷದಿಂದ ಪ್ರಶಸ್ತಿ ನೀಡಲಾಗುವುದು’ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

## ನೈಸ್ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ



**ನವದೆಹಲಿ:** ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಗಾಗಿ 17 ವರ್ಷಗಳ ಹಿಂದಿನ ಭೂಸ್ವಾಧೀನ ಅಧಿಸೂಚನೆಯನ್ನು ರದ್ದುಗೊಳಿಸಿದ ಹೈಕೋರ್ಟ್ ತೀರ್ಪಿಗೆ ತಡೆ ನೀಡಬೇಕೆಂದು ಕೋರಿ ನೈಸ್ ಲಿಮಿಟೆಡ್‌ನ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ಫೆಬ್ರುವರಿ 24ರಂದು ನೀಡಿದ್ದ ತೀರ್ಪಿನ ವಿರುದ್ಧ ನೈಸ್ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ವಿಪುಲ್ ಎಂ. ಪಾಂಚೋಲಿ ಅವರ ಪೀಠ ಮಂಗಳವಾರ ವಜಾಗೊಳಿಸಿತು.

ನೈಸ್ ಪರ ಹಿರಿಯ ವಕೀಲರಾದ ಮುಕುಲ್ ರೋಹಟಗಿ ಮತ್ತು ಆತ್ಮರಾಮ್ ನಾಡಕರ್ಣಿ ಅವರ ವಾದ ಆಲಿಸಿದ ಪೀಠವು, ‘ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ಮಧ್ಯಪ್ರವೇಶ ಮಾಡಲು ನಮಗೆ ಯಾವುದೇ ಉತ್ತಮ ಆಧಾರ ಮತ್ತು ಕಾರಣ ಕಂಡುಬಂದಿಲ್ಲ’ ಎಂದು ಸ್ಪಷ್ಟಪಡಿಸಿತು.

ಪ್ರತಿವಾದಿಗಳಾದ ರತ್ನಾ ಎಸ್.ರೆಡ್ಡಿ ಹಾಗೂ ಇತರರ ಪರವಾಗಿ ಹಿರಿಯ ವಕೀಲರಾದ ಶಶಿಧರ ಎಚ್. ಎನ್ ಮತ್ತು ಕಿರಣ್ ಸೂರಿ ವಾದ ಮಂಡಿಸಿದರು.

‘ಯೋಜನೆಗಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಲಘಟ್ಟಪುರದ ಒಂದು ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲು 17 ವರ್ಷಗಳ ಹಿಂದೆ ಅಧಿಸೂಚನೆ ಹೊರಡಿಸಲಾಗಿತ್ತು. ಅಂತಿಮ ಅಧಿಸೂಚನೆಯಾಗಿ 17 ವರ್ಷ ಕಳೆದರೂ ಪರಿಹಾರ ನೀಡಿಲ್ಲ. ಭೂಸ್ವಾಧೀನ ರದ್ದುಗೊಳಿಸಬೇಕು’ ಎಂದು ಯಲಚೇನಹಳ್ಳಿಯ ರತ್ನಾ ರೆಡ್ಡಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಒಂದು ಎಕರೆಗೆ ಸೀಮಿತವಾಗಿ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

### ‘ರಿಕ್ಕಿ ರೈ ವಿರುದ್ಧ ಆತುರದ ಕ್ರಮ ಬೇಡ’



ರಿಕ್ಕಿ ರೈ

**ಬೆಂಗಳೂರು:** ‘ಮೋಸ ಮಾಡಿ ದಾಖಲೆ ಸೃಷ್ಟಿಸಿಕೊಂಡು ಐಷಾರಾಮಿ ಲ್ಯಾಂಬೊರ್ಗಿನಿ ಕಾರಿಗೆ ನಕಲಿ ಫ್ಯಾನ್ಸಿ ನಂಬರ್ ಪ್ಲೇಟ್ ಅಳವಡಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಿಕ್ಕಿ ರೈ ವಿರುದ್ಧ ಆತುರದ ಕ್ರಮ ಜರುಗಿಸಬಾರದು’ ಎಂದು ಹೈಕೋರ್ಟ್ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ.

‘ನನ್ನ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ರಿಕ್ಕಿ ರೈ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ರಿಕ್ಕಿ ರೈ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಅವರ ವಾದ ಆಲಿಸಿದ ನ್ಯಾಯಪೀಠ, ‘ರಿಕ್ಕಿ ರೈ ತನಿಖೆಗೆ ಸಹಕರಿಸಬೇಕು. ತನಿಖೆಯ ನೆಪದಲ್ಲಿ ಪೊಲೀಸರು ರಿಕ್ಕಿ ರೈ ವಿರುದ್ಧ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ಆದೇಶಿಸಿರುವ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಪ್ರಕರಣದ ತನಿಖಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

**ಪ್ರಕರಣ:** ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ 2026ರ ಮಾರ್ಚ್ 21ರ ಮಧ್ಯರಾತ್ರಿ 2.40ರಲ್ಲಿ ಕೆಎ-05 ಎನ್‌ಆರ್ 0009 ಸಂಖ್ಯೆಯುಳ್ಳ ಲ್ಯಾಂಬೊರ್ಗಿನಿ ಕಾರನ್ನು ಶರವೇಗದಲ್ಲಿ ಓಡಿಸಿದ್ದ ವಿಡಿಯೊವನ್ನು ವ್ಯಕ್ತಿಯೊಬ್ಬರು ನಗರ ಪೊಲೀಸರಿಗೆ ಟ್ಯಾಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿದ್ದರು. ಇದರನ್ವಯ ಕಬ್ಬನ್ ಪಾರ್ಕ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ಯುವತಿಗಾಗಿ 9ನೇ ಮಹಡಿ ಏರಿದ ಯುವಕ

**ದೇವನಹಳ್ಳಿ:** ಪಟ್ಟಣದ ಹೊರವಲಯ ಖಾಸಗಿ ಅಪಾರ್ಟ್‌ಮೆಂಟ್ ಮೇಲೇರಿದ ಯುವಕನೊಬ್ಬ ಆತ್ಮಹತ್ಯೆ ಬೆದರಿಕೆ ಹಾಕಿದ ಘಟನೆ ಆತಂಕ ಸೃಷ್ಟಿಸಿತು.

ಪಟ್ಟಣದ ಅಂಬೇಡ್ಕರ್ ಕಾಲೊನಿ ನಿವಾಸಿ ಆನಂದ್, ಅಪಾರ್ಟ್‌ಮೆಂಟ್‌ನ 9ನೇ ಮಹಡಿಗೇರಿ, ಜಿಲ್ಲಾಧಿಕಾರಿ ಸ್ಥಳಕ್ಕೆ ಬರಬೇಕು ಎಂದು ಒತ್ತಾಯಿಸಿದ.

ಪೋಕ್ಸೊ ಪ್ರಕರಣದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜೈಲುವಾಸ ಅನುಭವಿಸಿದ್ದ ಯುವಕ, ‘ನನ್ನ ಮೇಲೆ ಹುಡುಗಿ ಮನೆಯವರು ಕೇಸ್ ಹಾಕಿದ್ದಾರೆ. ನನಗೆ ನ್ಯಾಯ ಬೇಕು. ನನ್ನ ಹುಡುಗಿ ಬೇಕು’ ಎಂದು ಕೂಗಿಕೊಂಡು ಅಳಲು ತೋಡಿಕೊಂಡ.

ಘಟನೆ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಯುವಕನನ್ನು ಮನವೊಲಿಸಲು ಪ್ರಯತ್ನಿಸಿದರು. ಬಿಸಿಲಿನಲ್ಲೇ ಕಟ್ಟಡದ ಮೇಲ್ಭಾಗದಲ್ಲಿ ನಿಂತುಕೊಂಡಿದ್ದ ಯುವಕ, 4 ಗಂಟೆಗೂ ಹೆಚ್ಚು ಕಾಲ ಕೆಳಗಿಳಿಯದ ಕಾರಣ ಅಪಾರ್ಟ್‌ಮೆಂಟ್ ಸುತ್ತಮುತ್ತ ಸಾವಿರಾರು ಜನರು ಜಮಾಯಿಸಿದ್ದರು.

ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಸುರಕ್ಷಿತವಾಗಿ ಯುವಕನನ್ನು ಕೆಳಗಿಳಿಸಲು ನಿರಂತರ ಪ್ರಯತ್ನಿಸಿದರು. ಕೊನೆಗೂ ಯುವಕನನ್ನು ಮನವೊಲಿಸಿ ಕೆಳಗಿಳಿಸುವಲ್ಲಿ ಯಶಸ್ವಿಯಾದರು.

## ವಧು–ವರರ ಸಮಾವೇಶ 24ಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದಿಂದ ಏಪ್ರಿಲ್ 24 ಶುಕ್ರವಾರದಂದು ಬೆಂಗಳೂರಿನ ಗುರುರಾಜ ಕಲ್ಯಾಣ ಮಂಟಪದಲ್ಲಿ ರಾಜ್ಯಮಟ್ಟದ ಮೂರನೇ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ. ನಂಜುಂಡಿ, ‘ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಅವರು ಸಮಾವೇಶ ಉದ್ಘಾಟಿಸಲಿದ್ದು, ಪತ್ರಕರ್ತ ಚನ್ನೇಗೌಡ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಸಮಾವೇಶದಲ್ಲಿ ಭಾಗವಹಿಸುವ ವಧು–ವರರಿಗೆ ಯಾವುದೇ ರೀತಿಯ ಶುಲ್ಕವಿಲ್ಲ’ ಎಂದು ತಿಳಿಸಿದರು.

### ನಗರದಲ್ಲಿ ಇಂದು

**ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ:** ಅತಿಥಿಗಳು: ಅರುಣ್ ಚಕ್ರವರ್ತಿ, ಕಮಲಾ ಬಾಯಿ ಬಿ., ರವಿಕುಮಾರ್ ನೀಹಾ, ಕೆ. ಮಂಜಪ್ಪನ್, ಹನುಮಂತ್ ಎ., ಸಂಜೀವ್ ಕೆ.ಪಿ., ಎ.ಎಸ್. ಶಂಕರನಾರಾಯಣ, ಡಿ. ಸಿದ್ದಲಿಂಗಯ್ಯ, ಜೆ. ರಘುನಾಥನ್, ಆಯೋಜನೆ: ಆಕಾಶವಾಣಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಆಕಾಶವಾಣಿ, ಲೋಕಭವನ ರಸ್ತೆ, ಬೆಳಿಗ್ಗೆ 10.30

**88ನೇ ಶ್ರೀರಾಮನವಮಿ ಸಂಗೀತೋತ್ಸವ:** ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಸ್ವೀಕರಿಸುವವರು: ಯು. ರಾಜೇಶ್, ಕರ್ನಾಟಕ ಸಂಗೀತ ಜುಗಲ್‌ಬಂದಿ: ಯು. ರಾಜೇಶ್ ಮತ್ತು ಹರೀಶ್ ಶಿವರಾಮಕೃಷ್ಣನ್, ಅರ್ಜುನ್ ಕುಮಾರ್, ಸಾಲೋಮನ್, ರಾಜೇಂದ್ರ ನಾಕೋಡ್, ಬಿ. ರಾಜಶೇಖರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

**ನವೀಕರಿಸಿದ ಗ್ರಂಥಾಲಯ ಹಾಗೂ ಮಾಧ್ಯಮ ಕೇಂದ್ರದ ಉದ್ಘಾಟನೆ:** ಥಿಯರಿ ಮಾತೂ, ಅತಿಥಿಗಳು: ಮಾರ್ಕ್ ಲಾಮಿ, ಶಾಲಿನಿ ರಜನೀಶ್, ಜೀನ್ ಫ್ರಾಂಸೋವಾ ಹಾನ್ಸ್, ಗ್ರೆಗರ್ ಟ್ರುಮ್ಮೆಲ್, ಎಮಿಲಿ ಜಕಮೆಂಟ್, ಆಯೋಜನೆ ಮತ್ತು ಸ್ಥಳ: ಅಲಿಯಾನ್ಸ್ ಫ್ರಾನ್ಸೆಸ್, ಸಂಜೆ 6.30

**ಬಾಬಾ ಸಾಹೇಬರಿಗೆ ಹಾಡಿನ ಹಣತೆ, ವಾರ್ಷಿಕ ಪ್ರಶಸ್ತಿ ಪ್ರದಾನ:** ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಗೊಲ್ಲಹಳ್ಳಿ ಶಿವಪ್ರಸಾದ್, ವೇಮಗಲ್ ನಾರಾಯಣಸ್ವಾಮಿ, ಅಶೋಕ್ ಎನ್. ಛಲವಾದಿ, ಹುಲಿಕುಂಟೆ ಮೂರ್ತಿ, ಪ್ರಶಸ್ತಿ ಸ್ವೀಕರಿಸುವವರು: ರತಿ ರಾವ್, ಸಿದ್ಧನಗೌಡ ಪಾಟೀಲ್, ಎನ್. ವೆಂಕಟೇಶ್, ಮಾವಳ್ಳಿ ಶಂಕರ್, ಲಕ್ಷ್ಮೀಪತಿ ಕೋಲಾರ, ಮಂಜುನಾಥ ಅದ್ದೆ, ಕೆ.ವಿ. ನೇತ್ರಾವತಿ, ಮಂಜುನಾಥ್ ಎಸ್., ಲವ ಕುಮಾರ್, ಆಯೋಜನೆ: ಅಂಕ ಸಾಂಸ್ಕೃತಿಕ ಸಂಸ್ಥೆ, ಚಿರಂತ ಕಲ್ಚರಲ್ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4ರಿಂದ



ಬಂಜಗೆರೆ ಜಯಪ್ರಕಾಶ್

**ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026:** ‘ನಾಗಸಂಪಿಗೆ’ ನಾಟಕ ಪ್ರದರ್ಶನ: ಪ್ರಸ್ತುತಿ: ಕಾಜಾಣ, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

# ಶೇ 6.7ರಷ್ಟೇ ದೋಷಾರೋಪ ಪಟ್ಟಿ

## ಸೈಬರ್ ಅಪರಾಧ: 61 ಸಾವಿರ ಪ್ರಕರಣ ದಾಖಲು, 3,746 ಪ್ರಕರಣಗಳ ತನಿಖೆ ಪೂರ್ಣ

• ಆದಿತ್ಯ ಕೆ.ಎ.

| ವರ್ಷ | ಸೈಬರ್ ಪ್ರಕರಣ | ದೋಷಾರೋಪ ಪಟ್ಟಿ ಸಲ್ಲಿಕೆ | ಆರೋಪಿಗಳ ಬಂಧನ |
|---|---|---|---|
| 2023 | 22,255 | 1,704 | 1,098 |
| 2024 | 22,483 | 1,339 | 1,036 |
| 2025 | 14,899 | 701 | 761 |
| 2026* | 2,007 | 2 | 17 |
| ಒಟ್ಟು | 61,644 | 3,746 | 2,912 |

*ಫೆಬ್ರುವರಿ ಅಂತ್ಯಕ್ಕೆ



**ಬೆಂಗಳೂರು:** ರಾಜ್ಯದ ಸೈಬರ್ ಅಪರಾಧ ಹಾಗೂ ಕಾನೂನು ಸುವ್ಯವಸ್ಥೆಯ ಠಾಣೆಗಳಲ್ಲಿ ಕಳೆದ ಮೂರು ವರ್ಷ ಎರಡು ತಿಂಗಳಲ್ಲಿ 61 ಸಾವಿರ ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿದ್ದರೂ, ಆ ಪೈಕಿ ಶೇ 6.7 ಪ್ರಕರಣಗಳಲ್ಲಷ್ಟೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳಿಗೆ ಸಾಧ್ಯವಾಗಿದೆ.

ಉಳಿದ, 57,898 ಪ್ರಕರಣಗಳ ತನಿಖೆ ವಿವಿಧ ಹಂತಗಳಲ್ಲಿದೆ. ಬಹುತೇಕ ಪ್ರಕರಣಗಳ ಅವಧಿ ಮುಕ್ತಾಯ ಆಗಿದ್ದರೂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ಸಾಧ್ಯವಾಗಿಲ್ಲ.

ಸೈಬರ್ ವಂಚನೆಗೆ ಒಳಗಾದವರು 'ಗೋಲ್ಡನ್ ಅವರ್'ನಲ್ಲಿ ದೂರು ನೀಡದಿರುವ ಕಾರಣಕ್ಕೆ ಪ್ರಕರಣಗಳ ತನಿಖೆ, ಆರೋಪಿಗಳ ಪತ್ತೆ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ಹಿನ್ನಡೆ ಆಗುತ್ತಿದೆ ಎಂದು ಸೈಬರ್ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೃತ್ಯ ನಡೆದ ಒಂದು ತಾಸಿನ ಒಳಗಾಗಿ ಪೊಲೀಸ್ ಠಾಣೆ ಅಥವಾ ಸಹಾಯವಾಣಿಯ ಮೂಲಕ ದೂರು ನೀಡಿದರೆ ತ್ವರಿತವಾಗಿ ತನಿಖೆ ನಡೆಸಲು ಸಾಧ್ಯವಾಗಲಿದೆ ಎಂಬುದಾಗಿ ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ಆದರೂ ಹಣ ಕಳೆದುಕೊಂಡವರು ಸಕಾಲದಲ್ಲಿ ದೂರು ನೀಡಲು ಹಿಂದೇಟು ಹಾಕುತ್ತಿದ್ದಾರೆ. ಅದು ತನಿಖೆಗೆ ಅಡ್ಡಿಯಾಗುತ್ತಿದೆ ಎಂದು ಅವರು ಹೇಳಿದರು.

2023ರಿಂದ 2026ರ ಫೆಬ್ರುವರಿ 28ರವರೆಗೆ ರಾಜ್ಯದಲ್ಲಿ 61,644 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಇದುವರೆಗೆ 3,746 ಪ್ರಕರಣಗಳಲ್ಲಷ್ಟೇ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಈ ವರ್ಷದ ಜನವರಿ, ಫೆಬ್ರುವರಿಯಲ್ಲಿ 2,007 ಪ್ರಕರಣ ದಾಖಲಾಗಿದ್ದು, ಇದುವರೆಗೆ ಎರಡು ಪ್ರಕರಣಗಳ ತನಿಖೆ ಮಾತ್ರ ಪೂರ್ಣಗೊಂಡಿದೆ.

**ಬಂಧನ ಇಳಿಕೆ:** ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿದ್ದರೂ ಕಳೆದ ಮೂರು ವರ್ಷದಲ್ಲಿ 2,912 ಮಂದಿಯನ್ನಷ್ಟೇ ಬಂಧಿಸಲಾಗಿದೆ. ಉಳಿದ ಪ್ರಕರಣಗಳಲ್ಲಿ ಆರೋಪಿಗಳ ಪತ್ತೆ ಸಾಧ್ಯವಾಗಿಲ್ಲ ಎಂದು ಮೂಲಗಳು ಹೇಳಿವೆ.

**ತನಿಖಾಧಿಕಾರಿಗಳಿಗೆ ತರಬೇತಿ:** 'ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರದಲ್ಲೇ ತನಿಖೆ ನಡೆಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪ್ರಕರಣಗಳು ಏರುಗತಿ ಕಂಡಮೇಲೆ ಠಾಣೆಗಳ ಸಂಖ್ಯೆಯನ್ನು 45ಕ್ಕೆ ಹೆಚ್ಚಿಸಲಾಗಿದೆ. ಕಾನೂನು ಸುವ್ಯವಸ್ಥೆ ಠಾಣೆಗಳಲ್ಲೂ ದೂರು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. 'ಸೈಬರ್ ಕಮಾಂಡ್ ಸೆಂಟರ್' ಸ್ಥಾಪಿಸಿ ಡಿಜಿಪಿ ದರ್ಜೆಯ ಅಧಿಕಾರಿ ನೇಮಿಸಲಾಗಿದೆ. ನಕಲಿ ಖಾತೆದಾರರ (ಮ್ಯೂಲ್ ಅಕೌಂಟ್) ಪತ್ತೆಮಾಡಿ ಮಧ್ಯವರ್ತಿಗಳನ್ನು ಬಂಧಿಸುವ ಕಾರ್ಯಾಚರಣೆಯಲ್ಲಿ ಕಮಾಂಡ್ ಸೆಂಟರ್‌ನ ಸಿಬ್ಬಂದಿ ತೊಡಗಿದ್ದಾರೆ. ತನಿಖಾಧಿಕಾರಿಗಳಿಗೆ ನಿರಂತರ ತರಬೇತಿ ನೀಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಗೋಲ್ಡನ್ ಅವರ್' ಎಂದರೆ ಸೈಬರ್ ವಂಚನೆಗೆ ಒಳಗಾದ ಹಣವು ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆಗೊಂಡು ಆರೋಪಿಯ ವಶಕ್ಕೆ ತಲುಪುವ ಸಮಯವಾಗಿದೆ. ಇದು ಪ್ರಕರಣದಿಂದ ಪ್ರಕರಣಕ್ಕೆ ಭಿನ್ನವಿದ್ದರೂ, ವಂಚನೆ ನಡೆದು ಒಂದು ತಾಸಿನಲ್ಲಿ ದೂರು ನೀಡಿದರೆ ಹಣವನ್ನು ಬ್ಯಾಂಕ್ ಖಾತೆಗಳಲ್ಲಿ ಫ್ರೀಜ್ (ವರ್ಗಾವಣೆ ಸ್ಥಗಿತ) ಮಾಡಲು ಸಾಧ್ಯವಾಗಲಿದೆ. ದೂರು ವಿಳಂಬ ಮಾಡಿದಾಗ ಹಣ ಆರೋಪಿಗಳ ಕೈಸೇರುತ್ತದೆ. ಅಂತಿಮವಾಗಿ ಹಣ ಯಾರ ಕೈಸೇರಿದೆ ಎಂಬುದನ್ನು ಪತ್ತೆಹಚ್ಚುವುದಕ್ಕೂ ಸಾಧ್ಯ ಆಗುವುದಿಲ್ಲ. ಅದೇ ಕಾರಣಕ್ಕೆ ಬಹುತೇಕ ಪ್ರಕರಣಗಳಲ್ಲಿ ತನಿಖೆಗೆ ಹಿನ್ನಡೆ ಆಗುತ್ತಿದೆ' ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

### ರಾಜ್ಯದ ದೂರುಗಳು ಇದ್ದರೆ ತನಿಖೆ

'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವಂಚಿಸುವ ಪ್ರಕರಣಗಳನ್ನು ಕೇಂದ್ರದ ಗೃಹ ಸಚಿವಾಲಯದ ಎನ್‌ಸಿಆರ್‌ಪಿಯಲ್ಲಿ(ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್) ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯಕ್ಕೆ ಸಂಬಂಧಿಸಿದ ದೂರುಗಳಿದ್ದರೆ ಪೋರ್ಟಲ್ ಮೂಲಕವೇ ಮಾಹಿತಿ ಪಡೆದುಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಠಾಣೆಯ ಮೂಲಗಳು ತಿಳಿಸಿವೆ.

# ಸ್ಪಾ, ಮನೆಯಲ್ಲಿ ವೇಶ್ಯಾವಾಟಿಕೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ಪಾ ಹಾಗೂ ಮನೆಯಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಆರೋಪದ ಅಡಿ ಮೂವರು ಮಹಿಳೆಯರು ಸೇರಿದಂತೆ ನಾಲ್ವರು ಆರೋಪಿಗಳನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಸ್ಥಳೀಯ ಹಾಗೂ ಹೊರರಾಜ್ಯದ ಆರು ಮಹಿಳೆಯರನ್ನು ಪೊಲೀಸರು ರಕ್ಷಿಸಿದ್ದಾರೆ.

ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾರತ್‌ಹಳ್ಳಿ ಹಾಗೂ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಸುಂಕದಕಟ್ಟೆ ಬಳಿಯ ಸ್ಪಾ ಹಾಗೂ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಮಂಜುನಾಥ ನಗರದ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ, ಮಹಿಳೆಯರನ್ನು ರಕ್ಷಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಆರೋಪಿಗಳು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಆರೋಪಿಗಳ ವಿರುದ್ಧ ಬ್ಯಾಡರಹಳ್ಳಿ, ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

### ₹10 ಸಾವಿರ ಲಂಚ: ಬಂಧನ

**ಬೆಂಗಳೂರು:** ಪಶು ವೈದ್ಯಾಧಿಕಾರಿಯೊಬ್ಬರ ಶೈಕ್ಷಣಿಕ ಪ್ರಮಾಣ ಪತ್ರಗಳ ಪರಿಶೀಲನಾ ವರದಿ ನೀಡಲು ₹10 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಹೆಬ್ಬಾಳದ ಪಶುವೈದ್ಯಕೀಯ ಆಯುಕ್ತರ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಮುದಾಸಿರ್ ಅಹಮದ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರದ ಪಶುನಿರೀಕ್ಷಕ ಮಲ್ಲಿಕಾರ್ಜುನ ಶಂಕರ ನಿಡೋಣಿ ಅವರು ಶೈಕ್ಷಣಿಕ ಪ್ರಮಾಣ ಪತ್ರಗಳ ಪರಿಶೀಲನಾ ವರದಿಗಾಗಿ ಅರ್ಜಿ ಸಲ್ಲಿಸಿದ್ದರು. ಅಂತಿಮ ವರದಿ ನೀಡಲು ಮುದಾಸಿರ್ ಅವರು ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಮಲ್ಲಿಕಾರ್ಜುನ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಕೋನ ವಂಶಿಕೃಷ್ಣ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಮಲ್ಲಿಕಾರ್ಜುನ ಅವರು ಮುದಾಸಿರ್ ಅವರಿಗೆ ಲಂಚದ ಹಣ ನೀಡಿದ್ದರು. ಈ ವೇಳೆ ದಾಳಿ ನಡೆಸಿ, ಅವರನ್ನು ಬಂಧಿಸಲಾಯಿತು. ಹಣವನ್ನು ವಶಕ್ಕೆ ಪಡೆದುಕೊಂಡಿದ್ದು, ತನಿಖೆ ಮುಂದುವರಿದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

# ಬಿಡಿಎ: ₹43 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಂಗಳವಾರ ಕಾರ್ಯಚರಣೆ ನಡೆಸಿ, ನಾಡಪ್ರಭು ಕೆಂಪೇಗೌಡ ಬಡಾವಣೆಯ ಬ್ಲಾಕ್-2ರಲ್ಲಿ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಂಗನಹಳ್ಳಿ ಗ್ರಾಮದ ಸರ್ವೆ ನಂ. 22/2 ರಲ್ಲಿ 2 ಎಕರೆ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್‌ಗಳನ್ನು ಜೆಸಿಬಿ ಯಂತ್ರ ಮೂಲಕ ತೆರವುಗೊಳಿಸಿದೆ. ಸುಮಾರು ₹43 ಕೋಟಿ ಮೌಲ್ಯದ ಆಸ್ತಿಯನ್ನು ವಶ ಪಡಿಸಿಕೊಂಡಿತು. ಕಾರ್ಯಾಚರಣೆ ವೇಳೆ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸರು ಇದ್ದರು.

# ಅಡಕತ್ತರಿಯಲ್ಲಿ ಮಹಾರಾಣಿ ಕ್ಲಸ್ಟರ್ ವಿ.ವಿ

## ಒಂದೂವರೆ ವರ್ಷದಲ್ಲಿ ಆರು ಮಂದಿ ಹಂಗಾಮಿ ಕುಲಪತಿಗಳು

• ಎ.ಎಂ.ಸುರೇಶ




**ಬೆಂಗಳೂರು:** ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ (ಎಂಸಿಯು) ಒಂದೂವರೆ ವರ್ಷದಿಂದ ಕಾಯಂ ಕುಲಪತಿಯ ನೇಮಕ ಆಗಿಲ್ಲ. 2024ರ ನವೆಂಬರ್‌ನಿಂದ ಇಲ್ಲಿಯವರೆಗೆ ಆರು ಮಂದಿ ಹಂಗಾಮಿ ಕುಲಪತಿಗಳ ನೇಮಕವಾಗಿದ್ದು, ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ ಗೊಂದಲದ ಗೂಡಾಗಿದೆ.

ಎಂಸಿಯು ಕುಲಪತಿಯಾಗಿದ್ದ ಪ್ರೊ.ಎಲ್. ಗೋಮತಿ ದೇವಿ ಅವರು 2024ರ ನವೆಂಬರ್ 8ರಂದು ನಿವೃತ್ತಿಯಾಗಿದ್ದು, ಆಗಿನಿಂದ ಹೊಸ ಕುಲಪತಿ ನೇಮಕವಾಗಿಲ್ಲ. ಅಲ್ಲದೆ ನೇಮಕ ಸಂಬಂಧ ಶೋಧನಾ ಸಮಿತಿ ರಚಿಸುವ ಪ್ರಕ್ರಿಯೆಗೂ ಚಾಲನೆ ದೊರೆತಿಲ್ಲ. ಈಗಿನ ಬೆಳವಣಿಗೆಗಳನ್ನು ನೋಡಿದರೆ ಸದ್ಯಕ್ಕೆ ಕುಲಪತಿ ನೇಮಕವಾಗುವ ಲಕ್ಷಣಗಳು ಕಾಣುತ್ತಿಲ್ಲ.

2024ರ ನವೆಂಬರ್‌ನಿಂದ ಈ ತಿಂಗಳ 16ರವರೆಗೆ ಪ್ರೊ.ಸಿ. ಉಷಾದೇವಿ, ಪ್ರೊ.ಬಿ.ಕೆ.ಮೀರಾ, ಪ್ರೊ.ಟಿ.ಎಂ.ಮಂಜುನಾಥ, ಪ್ರೊ. ಗೋವಿಂದಪ್ಪ, ಪ್ರೊ.ಆರ್.ಕೆ.ವಾಣಿಶ್ರೀ ಅವರು ಹಂಗಾಮಿ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಇದೇ 16ರಂದು ಕೆ.ವೈ.ನಾರಾಯಣಸ್ವಾಮಿ ಹಂಗಾಮಿ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡಿದ್ದು, ಇವರ ಅವಧಿ ಈ ವರ್ಷದ ಆಗಸ್ಟ್‌ವರೆಗೂ ಇದೆ.

‘ಒಂದೂವರೆ ವರ್ಷದಲ್ಲಿ ಆರು ಮಂದಿ ಹಂಗಾಮಿ ಕುಲಪತಿಗಳು ಆಡಳಿತ ನಡೆಸಿದರೆ ಹೇಗೆ? ಕೆಲವರು ಒಂದು ತಿಂಗಳು ಆಡಳಿತ ನಿರ್ವಹಿಸಿದ್ದಾರೆ. ಈ ರೀತಿ ಆದರೆ, ವಿಶ್ವವಿದ್ಯಾಲಯದ ಅಭಿವೃದ್ಧಿ ಸಾಧ್ಯವೇ? ದೈನಂದಿನ ಆಡಳಿತಕ್ಕೆ ತೊಂದರೆ ಇಲ್ಲದೆ ಇರಬಹುದು. ಆದರೆ, ಮುಂದಾಲೋಚನೆಯಿಂದ ದೀರ್ಘಕಾಲದ ಯೋಜನೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಆಗುವುದಿಲ್ಲ. ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆ ಅಲ್ಲ’ ಎಂದು ಪ್ರಾಧ್ಯಾಪಕರೊಬ್ಬರು ಬೇಸರ ವ್ಯಕ್ತಪಡಿಸಿದರು.

**ಸಿಗದ ಒಪ್ಪಿಗೆ:** ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದು ಏಳು ವರ್ಷವಾಗಿದೆ. ಆದರೆ, ಇದುವರೆಗೂ ನಿಯಮಗಳ ರಚನೆ ಸಂಬಂಧ ಆದೇಶವಾಗಿಲ್ಲ. ವಿಶ್ವವಿದ್ಯಾಲಯ ರೂಪಿಸಿರುವ ನಿಯಮಗಳಿಗೆ ಕಳೆದ ಸೆಪ್ಟೆಂಬರ್‌ನಲ್ಲಿ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ. ಆದರೆ, ಉನ್ನತ ಶಿಕ್ಷಣ ಇಲಾಖೆ ಇದುವರೆಗೂ ಈ ಕುರಿತು ಆದೇಶ ಹೊರಡಿಸಿಲ್ಲ ಎಂದು ವಿ.ವಿ ಸಿಬ್ಬಂದಿ ಅಸಮಾಧಾನ ವ್ಯಕ್ತಪಡಿಸಿದರು.

ನಿಯಮಗಳ ರಚನೆ ಆಗದ ಕಾರಣ ಇಲ್ಲಿರುವ ಸಿಬ್ಬಂದಿ ತಾಂತ್ರಿಕವಾಗಿ ಈಗಲೂ ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲೇ ಇದ್ದಾರೆ. ಆದರೆ, ಕೆಲಸ ಮಾತ್ರ ವಿಶ್ವವಿದ್ಯಾಲಯದಲ್ಲಿ ಮಾಡುತ್ತಿದ್ದಾರೆ. ಇದನ್ನೇ ಆಧರಿಸಿ ಕೆಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುವ ಮೂಲಕ 62 ವರ್ಷದವರೆಗೂ ಸೇವೆಯಲ್ಲಿ ಮುಂದುವರಿದಿದ್ದಾರೆ.

2019ರಲ್ಲಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದ್ದು, ಮಹಾರಾಣಿ ಕಾಲೇಜಿನಲ್ಲಿ ಇದ್ದ ಸಿಬ್ಬಂದಿಯನ್ನೇ ನಿಯೋಜನೆ ಮೂಲಕ ವಿಶ್ವವಿದ್ಯಾಲಯದಲ್ಲಿ ಮುಂದುವರಿಸಲಾಗಿದೆ. ಆದರೆ, ಸಂಬಳ ಮಾತ್ರ ಕಾಲೇಜು ಶಿಕ್ಷಣ ಇಲಾಖೆಯಿಂದ ನೀಡಲಾಗುತ್ತಿದೆ.

‘ವಿಶ್ವವಿದ್ಯಾಲಯದಲ್ಲಿ ಒಟ್ಟು 150 ಬೋಧಕ ಸಿಬ್ಬಂದಿ ಇದ್ದು, 90 ಮಂದಿ ವಿಶ್ವವಿದ್ಯಾಲಯದಲ್ಲೇ ಉಳಿಯುವುದಾಗಿ ಹಾಗೂ 60 ಮಂದಿ ಹೊರಗೆ ಹೋಗುವುದಾಗಿ ಲಿಖಿತವಾಗಿ ತಿಳಿಸಿದ್ದಾರೆ. 11 ಮಂದಿ ಬೋಧಕೇತರ ಸಿಬ್ಬಂದಿ ಇದ್ದು, ಅವರೆಲ್ಲರೂ ಹೊರಗೆ ಹೋಗುವುದಾಗಿ ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ಕಡತವನ್ನು ಕಳೆದ ಅಕ್ಟೋಬರ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಅನುಮೋದನೆ ನೀಡಿಲ್ಲ’ ಎಂದು ಗೊತ್ತಾಗಿದೆ.

**₹75 ಕೋಟಿ ವೆಚ್ಚ:** ಸಂಶೋಧನೆಗೆ ಹೆಚ್ಚಿನ ಒತ್ತು ನೀಡುವ ಉದ್ದೇಶದಿಂದ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದು ರೂಸಾ ಯೋಜನೆಯಡಿ ಈಗಾಗಲೇ ₹75 ಕೋಟಿ ವೆಚ್ಚ ಮಾಡಿ ಮೆಗಾ ಹಾಸ್ಟೆಲ್, ಹೊಸದಾಗಿ ಶೈಕ್ಷಣಿಕ ಬ್ಲಾಕ್ ನಿರ್ಮಿಸಲಾಗಿದೆ. ಇದು ಕೇಂದ್ರ ಸರ್ಕಾರದ ಅನುದಾನವಾಗಿದೆ. ಒಂದು ವೇಳೆ ವಿಶ್ವವಿದ್ಯಾಲಯವನ್ನು ವಿಲೀನ ಮಾಡಿದರೆ, ಈ ಅನುದಾನವನ್ನು ವಾಪಸ್ ನೀಡಬೇಕಾಗುತ್ತದೆ.

‘ವಿಶ್ವವಿದ್ಯಾಲಯವನ್ನು ಮುಚ್ಚುವ ಅಥವಾ ವಿಲೀನ ಮಾಡುವ ಬದಲು, ಈಗಿರುವಂತೆಯೇ ಉಳಿಸಿಕೊಂಡು ಸಂಶೋಧನೆಗೆ ಆದ್ಯತೆ ನೀಡಬೇಕು. ಮತ್ತೆ ಹಿಂದಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ. ಸರ್ಕಾರ ಆದಷ್ಟು ಬೇಗ ಈ ಕುರಿತು ತೀರ್ಮಾನ ತೆಗೆದುಕೊಳ್ಳುವ ಮೂಲಕ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳಿಗೆ ವೇಗ ನೀಡಬೇಕು’ ಎಂಬುದು ಪ್ರಾಧ್ಯಾಪಕರ ಒತ್ತಾಯವಾಗಿದೆ.

### ಮುಖ್ಯಾಂಶಗಳು

- ಎಲ್. ಗೋಮತಿ ದೇವಿ ಬಳಿಕ ಕಾಯಂ ಕುಲಪತಿ ನೇಮಕವಾಗಿಲ್ಲ
- ಗೊಂದಲದ ಗೂಡಾದ ಆಡಳಿತ ವ್ಯವಸ್ಥೆ

### ಇನ್ನೂ ನಿರ್ಧಾರ ತೆಗೆದುಕೊಳ್ಳದ ಸಮಿತಿ

ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಏಳು ವಿಶ್ವವಿದ್ಯಾಲಯಗಳು ಸೇರಿದಂತೆ ಹೊಸ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡುವ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಚಿವ ಸಂಪುಟದ ಉಪ ಸಮಿತಿ ಇನ್ನೂ ವರದಿ ನೀಡಿಲ್ಲ.

ಕಳೆದ ತಿಂಗಳು ನಡೆದ ಸಭೆಯಲ್ಲಿ ಜಿಲ್ಲೆಗೊಂದರಂತೆ ರಚನೆಯಾಗಿರುವ ಹೊಸ ವಿಶ್ವವಿದ್ಯಾಲಯಗಳ ವಿಲೀನಕ್ಕೆ ಒಲವು ವ್ಯಕ್ತವಾಗಿದ್ದರೂ, ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಈ ಮಧ್ಯೆ ನೃಪತುಂಗ ವಿಶ್ವವಿದ್ಯಾಲಯ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದೊಂದಿಗೆ ವಿಲೀನಗೊಳಿಸಿದರೆ ಹೇಗೆ? ಎಂಬ ಚರ್ಚೆ ನಡೆದಿದೆ.

ಈ ಕಾರಣದಿಂದಾಗಿಯೇ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ನೇಮಕ ಸಂಬಂಧ ಶೋಧನಾ ಸಮಿತಿ ರಚನೆಯಾಗಿಲ್ಲ. ಸಚಿವ ಸಂಪುಟದ ಉಪ ಸಮಿತಿ ವರದಿ ನೀಡಿದ ನಂತರವೇ ಈ ಬಗ್ಗೆ ತೀರ್ಮಾನಕ್ಕೆ ಬರಲಾಗುತ್ತದೆ ಎನ್ನಲಾಗಿದೆ.

### ನೃಪತುಂಗ ವಿ.ವಿ.ಯಲ್ಲೂ ಹಂಗಾಮಿ ಕುಲಪತಿ

ನೃಪತುಂಗ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಡಾ.ಶ್ರೀನಿವಾಸ ಬಳ್ಳಿ ಅವರು 2024ರ ನವೆಂಬರ್ 8ರಂದು ನಿವೃತ್ತಿಯಾಗಿದ್ದು, ಅಂದಿನಿಂದ ಹಂಗಾಮಿ ಕುಲಪತಿಯ ಆಡಳಿತ ಮುಂದುವರಿದಿದೆ. ಇಲ್ಲೂ ಕೂಡ ಕಾಯಂ ಕುಲಪತಿ ನೇಮಕ ಸಂಬಂಧ ಶೋಧನಾ ಸಮಿತಿ ರಚನೆಯಾಗಿಲ್ಲ. ವಿಶ್ವವಿದ್ಯಾಲಯವನ್ನು ಉಳಿಸಿಕೊಳ್ಳಬೇಕೋ, ವಿಲೀನಗೊಳಿಸಬೇಕೋ ಎಂಬ ಗೊಂದಲದಲ್ಲಿ ಸರ್ಕಾರ ಇದೆ. ಇದರಿಂದಾಗಿಯೇ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ ಎನ್ನಲಾಗಿದೆ.

2019ರಲ್ಲೇ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದ್ದರೂ, ಇದುವರೆಗೆ ನಿಯಮಗಳ ರಚನೆಯಾಗಿಲ್ಲ. ಇಲ್ಲಿರುವ ಸಿಬ್ಬಂದಿ ಈಗಲೂ ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲೇ ಇದ್ದಾರೆ. ಇವರಲ್ಲಿ ವಿಶ್ವವಿದ್ಯಾಲಯದಲ್ಲಿ ಉಳಿಯುವವರು ಯಾರು? ಹೊರಗೆ ಹೋಗುವವರು ಯಾರು? ಎಂಬುದು ಇನ್ನೂ ನಿರ್ಧಾರವಾಗಿಲ್ಲ.



ನಗರದ ಎನ್‌ಆರ್ ಕಾಲೊನಿಯ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ 90 ವರ್ಷಗಳ ಸ್ಮರಣಾರ್ಥ ವಿಶೇಷ ಲಕೋಟೆಯನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು. ಎಪಿಎಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿಷ್ಣು ಭರತ್ ಆಲಂಪಲ್ಲಿ, ಬೆಂಗಳೂರು ಕೇಂದ್ರ ಕಚೇರಿ ವಲಯದ ಅಂಚೆ ಸೇವೆಗಳ ನಿರ್ದೇಶಕಿ ವಿ. ತಾರಾ ಉಪಸ್ಥಿತರಿದ್ದರು

# ಹೆಚ್ಚುವರಿ ನೀರಿಗಾಗಿ ‘ಸುಪ್ರೀಂ’ಗೆ ಮೊರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾವೇರಿ ಕೊಳ್ಳದ ರೈತರ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ 70 ಟಿಎಂಸಿ ಅಡಿ ನೀರನ್ನು ರಾಜ್ಯಕ್ಕೆ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು. ಇದಕ್ಕಾಗಿ ಏ. 27ರಿಂದ 29ರವರೆಗೆ ಕಾವೇರಿ ನದಿ ಪಾತ್ರದಲ್ಲಿ ಪ್ರವಾಸ ಕೈಗೊಂಡು ರೈತರ ಅಭಿಪ್ರಾಯ ಪಡೆಯಲಾಗುವುದು ಎಂದು ಕಾವೇರಿ ನದಿ ರಕ್ಷಣಾ ಸಮಿತಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಎಚ್.ಕೆ. ರಾಮು, ‘ಈ ಬಾರಿ ಬಿಸಿಲು ಹೆಚ್ಚಾಗಿದೆ. ಮುಂಗಾರು ದುರ್ಬಲ ಆಗುವ ಮಾಹಿತಿ ಇದ್ದು, ಕಾವೇರಿ ಕೊಳ್ಳದಲ್ಲಿ ನೀರಿನ ಅಭಾವ ಆಗುವ ಸಾಧ್ಯತೆ ಇದೆ. 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಈಗ ರಾಜ್ಯಕ್ಕೆ 284.75 ಟಿಎಂಸಿ ಅಡಿ ನೀರು ನೀಡುತ್ತಿದ್ದು, ಇದು ಸಾಕಾಗುತ್ತಿಲ್ಲ. ಆದ್ದರಿಂದ ಹೆಚ್ಚುವರಿಯಾಗಿ ನೀರು ನೀಡುವಂತೆ ಅರ್ಜಿ ಸಲ್ಲಿಸಲಾಗುವುದು’ ಎಂದು ಹೇಳಿದರು.

‘ಇದರ ಭಾಗವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮೂರು ದಿನಗಳ ಪ್ರವಾಸ ಕೈಗೊಂಡು ಜಲಾಶಯಗಳಲ್ಲಿನ ನೀರಿನ ಸ್ಥಿತಿಗತಿ, ರೈತರ ಸಂಕಷ್ಟದ ನೈಜ ಮಾಹಿತಿ ಸಂಗ್ರಹಿಸಲಿದ್ದೇವೆ’ ಎಂದು ತಿಳಿಸಿದರು.

ಏ.27ರಂದು ಭಾಗಮಂಡಲ, ತಲಕಾವೇರಿ, ಹಾರಂಗಿ, ಹೇಮಾವತಿ ಜಲಾಶಯ ವೀಕ್ಷಿಸಲಾಗುತ್ತದೆ. ಏ.28ರಂದು ಕೆಆರ್‌ಎಸ್ ಜಲಾಶಯ ಪರಿಶೀಲಿಸಿ, ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್. ಗೋಪಾಲಗೌಡ ಅವರ ನೇತೃತ್ವದಲ್ಲಿ ಸಭೆ ನಡೆಸಲಾಗುವುದು. ಏ.29ರಂದು ಕಬಿನಿ, ನಂಜನಗೂಡು, ತಿ. ನರಸೀಪುರಕ್ಕೆ ತೆರಳಿ ಮೇಕೆದಾಟು ಬಳಿ ಸಭೆ ನಡೆಸಲಾಗುವುದು’ ಎಂದರು.

## ಜನಗಣತಿ: ಗೈರಾದವರ ಮೇಲೆ ಕಾನೂನು ಕ್ರಮ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಗಣತಿಗಾರರಿಂದ ನಡೆಯುತ್ತಿರುವ ಜನಗಣತಿ ಕಾರ್ಯದ ಪ್ರಗತಿ ನಿಧಾನವಾಗಿದ್ದು ತೃಪ್ತಿಕರವಾಗಿಲ್ಲ. ಒಟ್ಟು 23,500 ಗಣತಿದಾರರು ಮತ್ತು 2,900 ಮೇಲ್ವಿಚಾರಕರಿದ್ದು, ಇವರಲ್ಲಿ ಸುಮಾರು 6,000 ಮಂದಿ ಅನುಮತಿಯಿಲ್ಲದೆ ಗೈರಾಗಿದ್ದಾರೆ ಎಂದು ನಗರ ಪಾಲಿಕೆ ಆಯುಕ್ತರು ಮಾಹಿತಿ ನೀಡಿದ್ದಾರೆ.

‘ಕಾರಣ ಕೇಳಿ ನೋಟಿಸ್, ಎಸ್‌ಎಂಎಸ್ ಮತ್ತು ಕರೆಗಳ ಮೂಲಕ ಜನಗಣತಿ ಕಾರ್ಯಕ್ಕೆ ಗೈರಾದವರನ್ನು ಸಂಪರ್ಕಿಸಲಾಗುತ್ತಿದೆ. ತಕ್ಷಣ ಕರ್ತವ್ಯಕ್ಕೆ ಹಾಜರಾಗದವರ ವಿರುದ್ಧ ‘ಕೆಲಸ ಇಲ್ಲ–ವೇತನ ಇಲ್ಲ’ ನಿಯಮ, ಸೇವೆ ವ್ಯತ್ಯಯ ಆದೇಶಗಳು ಜಾರಿಗೊಳ್ಳಲಿವೆ. ಹೆಚ್ಚು ನಿರ್ಲಕ್ಷ್ಯ ತೋರಿದವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು ಎಂದು ಹೇಳಿದ್ದಾರೆ.

ಅನುಮತಿಯಿಲ್ಲದೆ ಗೈರಾಗಿರುವ ಎಲ್ಲಾ ಸಿಬ್ಬಂದಿ ತಕ್ಷಣ ಕರ್ತವ್ಯಕ್ಕೆ ಹಾಜರಾಗುವಂತೆ ಈ ಮೂಲಕ ಸೂಚಿಸಲಾಗಿದೆ. ಏಪ್ರಿಲ್ 24ರೊಳಗೆ ಹಾಜರಾಗದಿದ್ದರೆ ಕ್ರಮಕ್ಕೆ ಆದೇಶಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಸಕ್ಕೊಂದು ಲೆಕ್ಕ, ಬಿಲ್‌ಗೊಂದು ಲೆಕ್ಕ

• ತ್ಯಾಜ್ಯ ವಿಲೇವಾರಿ ನಿರ್ವಹಣೆಗೆ ನಿಗದಿಪಡಿಸಿದ ಆಟೊ, ಸಿಬ್ಬಂದಿ ಇಲ್ಲ
• 6 ಆಟೋಗಳಿಂದಷ್ಟೇ ಕಾರ್ಯನಿರ್ವಹಣೆ
• ಬ್ಲ್ಯಾಕ್ ಸ್ಪಾಟ್‌ಗಳಿಗಿಲ್ಲ ನಿಯಂತ್ರಣ

• ಆರ್. ಮಂಜುನಾಥ್

**ಬೆಂಗಳೂರು:** ಕಸ ಸಾಗಣೆ, ವಿಲೇವಾರಿಯಲ್ಲಿ ಗುತ್ತಿಗೆ ಕರಾರಿನಲ್ಲಿರುವ ಆಟೊ– ಸಿಬ್ಬಂದಿ ಸಂಖ್ಯೆ ವಾಸ್ತವದಲ್ಲಿ ಇರುವುದಿಲ್ಲ. ತ್ಯಾಜ್ಯ ನಿರ್ವಹಣೆಯಲ್ಲಿ ಒಂದು ಲೆಕ್ಕವಿದ್ದರೆ, ಬಿಲ್‌ಗಾಗಿ ನೀಡುವುದು ಮತ್ತೊಂದು ಲೆಕ್ಕ. ಇದರಿಂದ ನಿತ್ಯವೂ ನಗರದಲ್ಲಿ ಕಸ ವಿಲೇವಾರಿಯಲ್ಲಿ ತೊಡಕಾಗುತ್ತಿದೆ.

ಗುತ್ತಿಗೆದಾರರ ಕರಾರಿನಲ್ಲಿ 12 ಆಟೊಗಳನ್ನು ಒದಗಿಸಿ, ಅದಕ್ಕೆ ಅಗತ್ಯ ಸಿಬ್ಬಂದಿಯನ್ನು ನೀಡಬೇಕು ಎಂದಿರುತ್ತದೆ. ಆದರೆ, ಆರು ಆಟೊಗಳಷ್ಟೇ ಕಾರ್ಯನಿರ್ವಹಿಸುತ್ತವೆ. ಗೋವಿಂದರಾಜನಗರ, ವಿಜಯನಗರ, ಬಸವೇಶ್ವರ ನಗರ ಸೇರಿದಂತೆ ನಗರದ ಹಲವು ಭಾಗಗಳಲ್ಲಿ ಇಂತಹ ಸಮಸ್ಯೆ ಇರುವುದರಿಂದ ಕಸ ಪೂರ್ಣ ಪ್ರಮಾಣದಲ್ಲಿ ಸಾಗಣೆಯಾಗುತ್ತಿಲ್ಲ.

‘ಗುತ್ತಿಗೆದಾರರು ಎಷ್ಟು ಆಟೊಗಳನ್ನು, ಎಷ್ಟು ಸಿಬ್ಬಂದಿಯನ್ನು ಒದಗಿಸಿದ್ದಾರೆ ಎಂಬ ಲೆಕ್ಕ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿ ಎ ಸ್ ಡ ಬ್ಲ್ಯು ಎ ಂ ಎ ಲ್) ಅಧಿಕಾರಿಗಳಿಗೆ ಗೊತ್ತಿರುತ್ತದೆ. ಕೆಲವು ಗುತ್ತಿಗೆದಾರರು ನಿಗದಿತ ಸಂಖ್ಯೆಯಲ್ಲಿ ಆಟೊ–ಸಿಬ್ಬಂದಿ ಒದಗಿಸದಿದ್ದರೂ ಹಿರಿಯ ಅಧಿಕಾರಿಗಳ ಸ್ವಜನಹಿತಾಸಕ್ತಿಯಿಂದ ಯಾವುದೇ ರೀತಿಯ ದೂರು ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಕಸದ ಸಮಸ್ಯೆ ಉಲ್ಬಣವಾಗುತ್ತಿದೆ’ ಎಂದು ಗುತ್ತಿಗೆದಾರರೇ ದೂರುತ್ತಾರೆ.

‘ಆಟೊಗಳಲ್ಲಿ ಜಿಪಿಎಸ್ ವ್ಯವಸ್ಥೆ ಇರಬೇಕು ಎಂಬ ಕರಾರಿದೆ. ಆದರೆ, ನಗರದಲ್ಲಿ ಸಂಚರಿಸುವ ಕಸದ ಆಟೊಗಳು ಎಲ್ಲಿ ಬಿದ್ದುಹೋಗುತ್ತವೋ ಎಂಬಂತಿವೆ. ಮುಟ್ಟಿದರೆ ಚೂರಾಗುವ ಆತಂಕವಿದೆ. ಇಂತಹ ವ್ಯವಸ್ಥೆಯಲ್ಲಿ, ಜಿಪಿಎಸ್ ಇಲ್ಲದೆ, ಎಷ್ಟು ಆಟೊಗಳು ಕಾರ್ಯನಿರ್ವಹಿಸುತ್ತವೆ ಎಂದು ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಗುತ್ತಿಗೆದಾರರು ನೀಡಿದ ಲೆಕ್ಕವನ್ನು ಹಿರಿಯ ಅಧಿಕಾರಿಗಳು ಒಪ್ಪಿದರೆ, ಎಲ್ಲವೂ ಸುಲಭ. ಬಿಲ್ ಸಕಾಲಕ್ಕೆ ಪಾವತಿ ಆಗುತ್ತದೆ. ಹಿರಿಯ ಅಧಿಕಾರಿಗಳೊಂದಿಗೆ ‘ಚೆನ್ನಾಗಿ’ ಇರಲಿಲ್ಲ ಎಂದಾದರೆ ಗುತ್ತಿಗೆದಾರರಿಗೆ ಸಂಕಟ’ ಎಂಬುದು ಕೆಲವು ಗುತ್ತಿಗೆದಾರರ ಆರೋಪ.

‘ಹಿರಿಯ ಅಧಿಕಾರಿಗಳು ಹೇಳಿದಂತೆ ಕಾರ್ಯನಿರ್ವಹಿಸುತ್ತೇವೆ. ಬಿಲ್ ಮಾಡುವುದೆಲ್ಲ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ನೀಡಿರುವ ವಾಹನ–ಸಿಬ್ಬಂದಿಯಿಂದ ಸಾಧ್ಯವಾದಷ್ಟೂ ಕೆಲಸ ಮಾಡಿಸುತ್ತೇವೆ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ವಿಭಾಗ ಮಟ್ಟದ ಅಧಿಕಾರಿಗಳು ಹೇಳಿದರು.

‘ನಿಮ್ಮ ಪ್ರದೇಶದಲ್ಲಿ ಕಡಿಮೆ, ಬೇರೆ ಬಡಾವಣೆಗಳಲ್ಲಿ ಕಸದ ರಾಶಿ ಹೆಚ್ಚಿರುತ್ತದೆ. ಇಲ್ಲಿ ಕಡಿಮೆ ಇದೆ ಎಂದು ನೀವು ಹೆಮ್ಮೆಪಟ್ಟುಕೊಳ್ಳಬೇಕು’ ಎಂದು ಕಸ ಸಂಗ್ರಹಿಸುವ ಮೇಲ್ವಿಚಾರಕರು ಹೇಳುತ್ತಾರೆ. ನಿತ್ಯವೂ ಕಸ ಸಂಗ್ರಹಿಸದೆ ಇರುವುದರಿಂದ ರಸ್ತೆಗಳಲ್ಲಿ ಕಸ ತುಂಬಿರುತ್ತದೆ’ ಎಂದು ಜಯನಗರ ನಾಲ್ಕನೇ ಟಿ ಬ್ಲಾಕ್‌ನ ನಿವಾಸಿಯೊಬ್ಬರು ಹೇಳಿದರು.



ಚಾಮರಾಜಪೇಟೆಯ ವಿಠ್ಠಲ ನಗರದ ರಸ್ತೆಯಲ್ಲಿನ ಕಸದ ರಾಶಿ
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ

### ಕೆ.ಆರ್. ಮಾರುಕಟ್ಟೆಯಲ್ಲಿ ನಿತ್ಯವೂ ವ್ಯಥೆ

ಕೆ.ಆರ್. ಮಾರುಕಟ್ಟೆಯಲ್ಲಿ ನಿತ್ಯವೂ ಕಸ ವಿಲೇವಾರಿಯಾಗದೆ ನಾಗರಿಕರು ಹಾಗೂ ವ್ಯಾಪಾರಿಗಳಿಗೆ ಸಂಕಷ್ಟ ಎದುರಾಗಿದೆ. ದಿನಕ್ಕೆ ಎರಡು ಬಾರಿ ಕಸ ವಿಲೇವಾರಿ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಿದ್ದರೂ, ಕಸದ ರಾಶಿ ಮಾತ್ರ ಎಲ್ಲೆಂದರಲ್ಲಿ ಕಾಣಿಸುತ್ತದೆ. ಮಾರುಕಟ್ಟೆಯಿಂದ ಸಿಲ್ವರ್ ಜ್ಯುಬಿಲಿ ಪಾರ್ಕ್ ರಸ್ತೆಯ ಉದ್ದಕ್ಕೂ ಕಸದ ರಾಶಿ ಇರುತ್ತದೆ. ಅಕ್ಕಪಕ್ಕದ ವಾಣಿಜ್ಯ ಪ್ರದೇಶಗಳ ರಸ್ತೆಗಳಲ್ಲೂ ಕಸ ವಿಲೇವಾರಿ ಆಗುತ್ತಿಲ್ಲ. ‘ಬೆಳಿಗ್ಗೆ ಮಳಿಗೆ ತೆರೆಯಲು ಸಾಧ್ಯವಾಗದಷ್ಟು ಕಸ ರಸ್ತೆಯಲ್ಲಿ ತುಂಬಿರುತ್ತದೆ’ ಎಂದು ವ್ಯಾಪಾರಿಗಳು ದೂರಿದರು.

### ಸರ್ಕಾರದ ವೈಫಲ್ಯ: ಅಶೋಕ



ಆರ್. ಅಶೋಕ


‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ‘ಕನಸಿನ ಬ್ರ್ಯಾಂಡ್ ಬೆಂಗಳೂರು’, ಈಗ ‘ಕಸದ ಕೊಂಪೆಯ ಬೆಂಗಳೂರಾಗಿ’ ಬದಲಾಗಿದೆ. ಬ್ರ್ಯಾಂಡ್ ಹೆಸರಲ್ಲಿ ಅಭಿವೃದ್ಧಿಯ ಕಂಪು ಹರಡುವ ಕನಸು ತೋರಿಸಿದ ಕಾಂಗ್ರೆಸ್ ಸರ್ಕಾರ, ಕಸ ವಿಲೇವಾರಿಯಲ್ಲಿ ನಿರ್ಲಕ್ಷ್ಯ ತೋರಿ ಎಲ್ಲೆಡೆ ದುರ್ನಾತದ ಬ್ರ್ಯಾಂಡ್ ಹರಡಿದೆ. ಇದು ಸರ್ಕಾರದ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

‘ಬೆಂಗಳೂರಿನ ಜನರ ಆರೋಗ್ಯ ಅಪಾಯಕ್ಕೆ ಒಳಗಾದರೂ ಸರ್ಕಾರ ಮೌನ ವಹಿಸಿರುವುದು ಖಂಡನೀಯ. ನಗರದ ಅಭಿವೃದ್ಧಿ ಮಾಡುತ್ತೇವೆಂದು ಐದು ಭಾಗ ಮಾಡಿದ ಕಾಂಗ್ರೆಸ್, ಆಡಳಿತವನ್ನು ಸಂಪೂರ್ಣ ಹದಗೆಡಿಸಿಬಿಟ್ಟಿದೆ’ ಎಂದಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಏಪ್ರಿಲ್ 21ರಂದು ಪ್ರಕಟವಾದ ‘ವಿಲೇವಾರಿಯಲ್ಲಿ ನಿರ್ಲಕ್ಷ್ಯ: ನಗರದಲ್ಲಿ ಕಸದ ದುರ್ನಾತ’ ವಿಶೇಷ ವರದಿಯನ್ನು ಲಗತ್ತಿಸಿ, ಸಾಮಾಜಿಕ ಜಾಲತಾಣದಲ್ಲಿ ಅವರು ಪೋಸ್ಟ್ ಮಾಡಿದ್ದಾರೆ.



ಮಲ್ಲತ್ತಹಳ್ಳಿಯ ಜ್ಞಾನಭಾರತಿ ವಾರ್ಡ್‌ನ ಎಂ.ಪಿ. ಸ್ಪೋರ್ಟ್ಸ್ ಕ್ಲಬ್ ರಸ್ತೆಯ ಬದಿಯಲ್ಲಿ ರಾಶಿಗಟ್ಟಲೇ ತ್ಯಾಜ್ಯ ಬಿದ್ದಿದೆ



ಕುಮಾರಸ್ವಾಮಿ ಬಡಾವಣೆಯ ಎರಡನೇ ಹಂತದ ಒಂಬತ್ತನೇ ಮುಖ್ಯರಸ್ತೆಯ 16ನೇ ಕ್ರಾಸ್‌ನ ರಸ್ತೆಯಲ್ಲಿ ಕಸ ಹಾಕಲಾಗಿದೆ

## ನೋಡಿ, ಇಲ್ಲಿದೆ ಕಸ!

ನಿಮ್ಮ ಬಡಾವಣೆಯಲ್ಲಿ ಕಸ ಸಂಗ್ರಹವಾಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ ‘ಪ್ರಜಾವಾಣಿ’ಗೆ ಕಳುಹಿಸಿ.
9606038256




ಕಾಚರಕನಹಳ್ಳಿಯ ಮೊದಲನೇ ಹಂತದ ಎಚ್‌ಬಿಆರ್ ಲೇಔಟ್‌ನ ಸಿಎಂಆರ್ ಕಾಲೇಜಿನ ಸಮೀಪದಲ್ಲಿ ರಾಶಿಗಟ್ಟಲೇ ಕಸ ಬಿದ್ದಿದ್ದು, ಒಂದು ತಿಂಗಳಿನಿಂದ ವಿಲೇವಾರಿ ಮಾಡಿಲ್ಲ

---

ಚಿಟಿಕೆ ಸುದ್ದಿ

### ದಿವಾಕರ್‌ಗೆ ‘ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ’



ಎಸ್. ದಿವಾಕರ್

**ಬೆಂಗಳೂರು:** ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ ‘ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ’ಗೆ ಕತೆಗಾರ ಎಸ್. ದಿವಾಕರ್ ಅವರ ‘ವಾಸ್ತವ ಪ್ರತಿವಾಸ್ತವ’ ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ₹ 20 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಕೆ.ಆರ್. ಸಂಧ್ಯಾ ರೆಡ್ಡಿ ಮತ್ತು ಸಿ.ಕೆ. ಜಗದೀಶ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಇದೇ 28ರಂದು ಸಂಜೆ 5 ಗಂಟೆಗೆ ಬಿ.ಎಂ.ಶ್ರೀ. ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ವಿಮರ್ಶಕ ಬಸವರಾಜ ಕಲ್ಗುಡಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

### ಪುಸ್ತಕ ಸೊಗಸು ಬಹುಮಾನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಕನ್ನಡ ಪುಸ್ತಕ ಪ್ರಾಧಿಕಾರವು ‘ಕನ್ನಡ ಪುಸ್ತಕ ಸೊಗಸು ಬಹುಮಾನ’ಕ್ಕೆ ಪ್ರಕಾಶಕರು, ಮುದ್ರಕರು, ಕಲಾವಿದರು ಮತ್ತು ಲೇಖಕರಿಂದ ಅರ್ಜಿ ಆಹ್ವಾನಿಸಿದೆ.



2025ರ ಜನವರಿಯಿಂದ ಡಿಸೆಂಬರ್ ಅವಧಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಟವಾದ ವರ್ಷ ಸೇರಿದಂತೆ ಪೂರ್ಣ ವಿವರ ಹಾಗೂ ವಿಳಾಸದ ಮಾಹಿತಿಯೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ಮೇ 11ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿ ನಮೂನೆಗಳು ಪ್ರಾಧಿಕಾರದ ವೆಬ್‌ಸೈಟ್ https://kpp.karnataka.gov.inನಲ್ಲಿ ಲಭ್ಯ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

## ಭಕ್ತರ ರಕ್ಷಣೆಗೆ ಸಂವಿಧಾನ ಇಲ್ಲವೇ?: ಸುಪ್ರೀಂ ಕೋರ್ಟ್



**ನವದೆಹಲಿ (ಪಿಟಿಐ):** ‘ದೇವರ ವಿಗ್ರಹವನ್ನು ಮುಟ್ಟಲು ಅವಕಾಶ ಇಲ್ಲದ ಭಕ್ತರ ರಕ್ಷಣೆಗೆ ಸಂವಿಧಾನ ಬರುವುದಿಲ್ಲವೇ’ ಎಂದು ಶಬರಿಮಲೆ ದೇವಸ್ಥಾನದ ಮುಖ್ಯ ಅರ್ಚಕನನ್ನು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

‘ಭಕ್ತನೊಬ್ಬ ದೇವಸ್ಥಾನಕ್ಕೆ ಪೂಜೆಗೆ ಹೋಗುವಾಗ ದೇವರ ಗುಣಲಕ್ಷಣಕ್ಕೆ ವಿರುದ್ಧವಾಗಿರಲು ಸಾಧ್ಯವಿಲ್ಲ. ದೇವರ ದೈವಿಕ ಚೈತನ್ಯಕ್ಕೆ ಭಕ್ತನು ಶರಣಾಗುತ್ತಾನೆ’ ಎಂಬ ಶಬರಿಮಲೆ ದೇವಸ್ಥಾನದ ಮುಖ್ಯ ಅರ್ಚಕರ ಹೇಳಿಕೆಗೆ, ಸುಪ್ರೀಂ ಕೋರ್ಟ್ ಈ ರೀತಿ ಪ್ರತಿಕ್ರಿಯಿಸಿದೆ. ಶಬರಿಮಲೆ ಸೇರಿದಂತೆ ದೇಶದ ವಿವಿಧೆಡೆ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ನಡೆಸುತ್ತಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯ ಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ, ಬಿ.ವಿ ನಾಗರತ್ನ, ಎಂ.ಎಂ ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಅಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್.ಮಹಾದೇವನ್ ಅವರು ಈ ಪೀಠದಲ್ಲಿದ್ದಾರೆ.

ಶಬರಿಮಲೆ ದೇವಸ್ಥಾನದ ತಂತ್ರಿ ಪರವಾಗಿ ಹಾಜರಾದ ಹಿರಿಯ ವಕೀಲ ವಿ. ಗಿರಿ ಅವರು, ‘ಯಾವುದೇ ದೇವಸ್ಥಾನದಲ್ಲಿ ಪಾಲಿಸಿಕೊಂಡು ಬರುತ್ತಿರುವ ಆಚರಣೆಗಳ ಸ್ವರೂಪವು ಧರ್ಮದ ಅವಿಭಾಜ್ಯ ಅಂಗವಾಗಿದ್ದು, ಧಾರ್ಮಿಕ ಆಚರಣೆಯೇ ಆಗಿದೆ’ ಎಂದು ಪೀಠಕ್ಕೆ ಮನವಿ ಮಾಡಿದರು.

‘ಹಾಗಾಗಿ, ಇಂತಹ ಆಚರಣೆಗಳ ಮುಂದುವರಿಕೆ ಅತ್ಯಗತ್ಯ. ಇದು ಧರ್ಮದಲ್ಲಿ ನಂಬಿಕೆ ಹೊಂದಿರುವ ಯಾವುದೇ ಭಕ್ತನ ಪೂಜೆಯ ಹಕ್ಕಿನ ಭಾಗವೂ ಆಗಿದೆ’ ಎಂದರು.

ಇದರ ವಿರುದ್ಧ ಪ್ರಶ್ನೆ ಎತ್ತಿದ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ, ‘ನಾನು ದೇವಸ್ಥಾನಕ್ಕೆ ಹೋಗುವಾಗ ಅಲ್ಲಿ ದೇವರಿದ್ದಾನೆ, ದೇವರು ನನ್ನ ಸೃಷ್ಟಿಕರ್ತ ಎನ್ನುವುದು ನನ್ನ ಮೂಲ ನಂಬಿಕೆ ಆಗಿರುತ್ತದೆ. ದೇವರ ಮುಂದೆ ಹೋಗಿ ನಿಲ್ಲುವಾಗ ನನ್ನ ಹೃದಯದಲ್ಲಿ ಅಶುದ್ಧವಾದದ್ದು ಏನೂ ಇರುವುದಿಲ್ಲ, ಆದರೆ, ಹುಟ್ಟಿನಿಂದ, ನಿರ್ದಿಷ್ಟ ಸನ್ನಿವೇಶದಿಂದ ಅಥವಾ ವಂಶಪರಂಪರೆಯಿಂದ ದೇವರನ್ನು ಮುಟ್ಟಲು ಅವಕಾಶ ನಿರಾಕರಿಸಿದರೆ, ಆಗ ಅಂತಹ ಭಕ್ತನ ರಕ್ಷಣೆಗೆ ಸಂವಿಧಾನ ಬರುವುದಿಲ್ಲವೇ’ ಎಂದು ಪ್ರಶ್ನಿಸಿದರು. ‘ಸೃಷ್ಟಿಕರ್ತ ಮತ್ತು ಸೃಷ್ಟಿಯ ನಡುವೆ ವ್ಯತ್ಯಾಸ ಇರಲು ಸಾಧ್ಯವಿಲ್ಲ’ ಎಂದರು.

ಪ್ರಕರಣದ ವಿಚಾರಣೆ ಮುಂದುವರಿದಿದೆ. ಋತುಸ್ರಾವದ ವಯಸ್ಸಿನ ಮಹಿಳೆಯರಿಗೆ ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಹದಿನೆಂಟು ಮೆಟ್ಟಿಲುಗಳನ್ನು ಏರಿ, ದೇವಸ್ಥಾನ ಪ್ರವೇಶಿಸಲು ಹಕ್ಕಿದೆ ಎಂದು 2018ರಲ್ಲಿ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಬಹುಮತದ ತೀರ್ಪು ನೀಡಿತ್ತು. ಮಹಿಳಾ ಸಮಾನತೆಯ ದೃಷ್ಟಿಯಿಂದ ಮಹತ್ವದ ತೀರ್ಪು ಇದು.

## ಪಾಲಿಕೆಗಳ ಚುನಾವಣೆ ನಡೆಸಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಜೂನ್ 30ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ನಡೆಸಲು ಸಂಬಂಧಿತರಿಗೆ ತಕ್ಷಣವೇ ನಿರ್ದೇಶನ ನೀಡಿ’ ಎಂದು ಜೆಡಿಎಸ್ ಕಾನೂನು ಘಟಕದ ನಿಯೋಗವು ರಾಜ್ಯ ಚುನಾವಣಾ ಆಯುಕ್ತ ಸಿ.ಎಸ್.ಸಂಗ್ರೇಶಿ ಅವರಿಗೆ ಮನವಿ ಸಲ್ಲಿಸಿದೆ.

ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ ನೇತೃತ್ವದಲ್ಲಿ ಸಂಗ್ರೇಶಿ ಅವರನ್ನು ಭೇಟಿ ಮಾಡಿದ್ದ ನಿಯೋಗವು, ‘ಬಿಬಿಎಂಪಿಗೆ ಈ ಹಿಂದೆ ಚುನಾವಣೆ ನಡೆದದ್ದು 2015ರಲ್ಲಿ. ಆ ನಂತರ ರಾಜ್ಯ ಸರ್ಕಾರವು ಒಂದಲ್ಲಾ ಒಂದು ನೆಪವೊಡ್ಡಿ, ಚುನಾವಣೆಯನ್ನು ಮುಂದೂಡುತ್ತಲೇ ಬಂದಿದೆ. ಈಗ ಜನಗಣತಿಯ ಕಾರಣಕ್ಕೆ ಸಿಬ್ಬಂದಿ ಕೊರತೆ ಇದೆ. ಹೀಗಾಗಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎನ್ನುತ್ತಿದೆ. ಇದನ್ನು ಪರಿಗಣಿಸಬಾರದು’ ಎಂದು ಕೋರಿದೆ.

‘ಪಾಲಿಕೆಗಳ ಚುನಾವಣೆ ಸೆಪ್ಟೆಂಬರ್‌ಗೆ ಮುಂದೂಡುವಂತೆ ಜಿಬಿಎ ಸರ್ಕಾರಕ್ಕೆ ಪತ್ರ ಬರೆದಿದೆ. ಅದನ್ನು ಆಯೋಗವು ಪರಿಗಣಿಸಿದರೆ, ಸುಪ್ರೀಂ ಕೋರ್ಟ್‌ನ ನಿರ್ದೇಶನದ ಉಲ್ಲಂಘನೆ ಯಾಗುತ್ತದೆ. ಹೀಗಾಗಿ ಚುನಾವಣೆ ನಡೆಸುವಂತೆ ತಕ್ಷಣವೇ ನಿರ್ದೇಶನ ನೀಡಿ’ ಎಂದಿದ್ದಾರೆ.

## ಪರಿಕ್ರಮ ತಂಡಕ್ಕೆ ಸುಲಭ ಜಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಘಟಿತ ಪ್ರದರ್ಶನ ತೋರಿದ ಪರಿಕ್ರಮ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಎ ಡಿವಿಷನ್ ಲೀಗ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಮಂಗಳವಾರ 5–1ರಿಂದ ಶ್ರೀ ರೇಣುಕಾ ಎಫ್‌ಸಿ ತಂಡವನ್ನು ನಿರಾಯಾಸವಾಗಿ ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪರಿಕ್ರಮ ತಂಡದ ಜಮುನಾ ಮೊದಲ ನಿಮಿಷದಲ್ಲಿಯೇ ಗೋಲು ಹೊಡೆದು ಆರಂಭಿಕ ಮುನ್ನಡೆ ತಂದುಕೊಟ್ಟರು. ನಂತರ, ಸೋನಮ್ ದತ್ತ (6ನೇ ಹಾಗೂ 58ನೇ ನಿ.) ಮತ್ತು ಆರತಿ ಎಂ. (34ನೇ ಹಾಗೂ 70 + 3ನೇ ನಿ.) ತಲಾ ಎರಡು ಗೋಲು ಗಳಿಸಿ, ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ರೇಣುಕಾ ಎಫ್‌ಸಿ ತಂಡದ ಸಾಕ್ಷಿ ಗಣೇಶ್ ಚಿಟಗಿ (14ನೇ ನಿ.) ಒಂದು ಗೋಲು ದಾಖಲಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಟಿ.ಸ್ಟೆಫಿ (48ನೇ ನಿ.) ಅವರು ಗಳಿಸಿದ ನಿರ್ಣಾಯಕ ಗೋಲಿನ ಬಲದಿಂದ ಕೆಂಪ್ ಜೂನಿಯರ್ಸ್ ಫುಟ್‌ಬಾಲ್ ಕ್ಲಬ್ ತಂಡವು 1–0ಯಿಂದ ಪಾಸ್ ಎಫ್‌ಸಿ ಸ್ಪಾರ್ಕ್ಸ್ ತಂಡದ ವಿರುದ್ಧ ರೋಚಕ ಗೆಲುವು ದಾಖಲಿಸಿತು.

ದೆಹಲಿ ರೇಸ್

### ಅಶ್ವ ಕಾಂಚನ್‌ಜುಂಗ ಗೆಲ್ಲುವ ನಿರೀಕ್ಷೆ

ಅಶ್ವ ಶಕ್ತಿ ಪ್ಲೇಟ್ ಮೊದಲನೇ ಡಿವಿಷನ್ ಬುಧವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಕಾಂಚನ್‌ಜುಂಗ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:45ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

**1ನೇ ರೇಸ್:** ಸಲಾಮ್ ಭಾಯ್ 5, ವೆರೊನಿಕಾ 2, ಮಾಸ್ಟರ್ ಟೊರ್ನಾಡೊ 1
**2ನೇ ರೇಸ್:** ಅಶ್ವ ಕಾಂಚನ್‌ಜುಂಗ 4, ಎಲಿಮಿನೇಟರ್ 1, ಲಾಡ್ಜ್ ಕೀಪರ್ 5
**3ನೇ ರೇಸ್:** ರಿಂಕು ರೋಮಿಯೊ 5, ಗೋಲ್ಡನ್ ಸನ್ 4, ಅಶ್ವ ಯುಧ್ಧೀರ್ 1
**4ನೇ ರೇಸ್:** ಮಿಸ್ಟರ್ ಬೂಸ್ಟ್ 1, ಮೈಟಿ 5, ಪರ್ಸನಲ್ 3
**5ನೇ ರೇಸ್:** ಡಿವೈನ್ ರೈಟ್ 9, ಟ್ರೆಂಡಿಂಗ್ ಕ್ರ್ಯೂ 2, ಅಟೆನ್‌ಬೊರೊ 1
**6ನೇ ರೇಸ್:** ಹೀರ್ 3, ಲೇಡಿ ಡೇಂಜರ್ 7, ಅಶ್ವ ಡೆನಾಲಿ 4

**ಉತ್ತಮ ಬೆಟ್: ರಿಂಕು ರೋಮಿಯೊ**

| ಜಾಕ್‌ಪಾಟ್‌ಗೆ | ಟ್ರಿಬಲ್ |
|---|---|
| 2,3,4,5,6 | 4,5,6 |

### ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಇದೇ 24ರಿಂದ

**ಬೆಂಗಳೂರು:** ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು (ಕೆಎಸ್‌ಬಿಬಿಎ) ಇದೇ ಶುಕ್ರವಾರದಿಂದ (ಏಪ್ರಿಲ್ 24) ರಾಜ್ಯ ಮಟ್ಟದ ಸಬ್ ಜೂನಿಯರ್ ಬಾಲಕ ಮತ್ತು ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಅನ್ನು ಆಯೋಜಿಸಿದೆ.

ಲೀಗ್ ಕಮ್ ಸೂಪರ್ ಲೀಗ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಪಂದ್ಯಗಳು ನಡೆಯಲಿವೆ. ಗ್ರಾಮೀಣ ವಿಭಾಗದ ಸ್ಪರ್ಧೆ ದೇವಾಂಗ ಸಮಾಜದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆಯಲಿವೆ.

## ‘ಬ್ಲ್ಯಾಕ್ ಸ್ಪಾಟ್’ ನಿರ್ಮೂಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸದ ಬ್ಲ್ಯಾಕ್‌ಸ್ಪಾಟ್‌ಗಳನ್ನು ಪ್ರತಿದಿನ ಬೆಳಿಗ್ಗೆ 8ರ ಒಳಗೆ ಸ್ವಚ್ಛಗೊಳಿಸಬೇಕು. ತೆರವು ಕಾರ್ಯದ ಮೊದಲು ಹಾಗೂ ನಂತರದ ಛಾಯಾಚಿತ್ರಗಳು ಮತ್ತು ಸ್ಥಳದ ಮಾಹಿತಿಯನ್ನು ಕಚೇರಿಗೆ ಸಲ್ಲಿಸಬೇಕು ಎಂದು ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಸೂಚಿಸಿದರು.

ಅಧಿಕಾರಿಗಳೊಂದಿಗೆ ನಡೆದ ವಿಡಿಯೊ ಸಂವಾದದಲ್ಲಿ ನಗರ ಸ್ವಚ್ಛತೆ ಮತ್ತು ಘನತ್ಯಾಜ್ಯ ನಿರ್ವಹಣೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸೂಚನೆಗಳನ್ನು ನೀಡಿದರು.

ಎಲ್ಲಾ ವಲಯಗಳ ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೆ (ಎಜಿಎಂ) ನಗರದ ಸ್ವಚ್ಛತೆಗೆ ಮೊದಲ ಆದ್ಯತೆ ನೀಡುವಂತೆ ಸೂಚಿಸಲಾಯಿತು. ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿ ಪ್ರತಿದಿನವೂ ಸ್ವಚ್ಛತಾ ಕಾರ್ಯವನ್ನು ಕಡ್ಡಾಯವಾಗಿ ಕೈಗೊಳ್ಳಬೇಕು ಎಂದರು.

ಪೌರಕಾರ್ಮಿಕರ ಮೂಲಕ ನಡೆಯುವ ಬೀದಿ ಸ್ವಚ್ಛತಾ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಮೇಲ್ವಿಚಾರಕರಿಗೆ ಸ್ಪಷ್ಟ ಸೂಚನೆಗಳನ್ನು ನೀಡುವಂತೆ ಎಜಿಎಂಗಳಿಗೆ ತಿಳಿಸಲಾಯಿತು.

ಘನತ್ಯಾಜ್ಯ ನಿರ್ವಹಣೆಯಡಿಯಲ್ಲಿ, ನಿಯಮಾವಳಿ ಪ್ರಕಾರ ತ್ಯಾಜ್ಯ ವಿಂಗಡಣೆ ಕಡ್ಡಾಯವಾಗಿದ್ದು, ಹಿಂದಿನ ಸಭೆಗಳಲ್ಲಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವಲ್ಲಿ ದಾಸರಹಳ್ಳಿ ಮತ್ತು ಹೆಬ್ಬಾಳ ವಿಭಾಗಗಳನ್ನು ಹೊರತುಪಡಿಸಿ, ಕೆಲವು ವಿಭಾಗಗಳು ಹಿಂದುಳಿದಿರುವುದು ಗಮನಕ್ಕೆ ಬಂದಿದೆ. ಎಲ್ಲಾ ವಿಭಾಗಗಳು ನಿಗದಿತ ಗುರಿಯನ್ನು ಸಾಧಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು. ಪ್ರತಿ ತಿಂಗಳು ವಿಂಗಡಣೆಯಲ್ಲಿ ಆಗುವ ಪ್ರಗತಿಯನ್ನು ವರದಿ ರೂಪದಲ್ಲಿ ಸಲ್ಲಿಸುವುದು ಕಡ್ಡಾಯ ಎಂದರು.

### ಇನ್‌ಸ್ಪೆಕ್ಟರ್‌ಗೆ ಕಿರುಕುಳ ವರದಿ ನೀಡಲು ಸೂಚನೆ

**ಬೆಂಗಳೂರು:** ಡಿಸಿಆರ್‌ಇ ಇನ್‌ಸ್ಪೆಕ್ಟರ್‌ಗೆ ಮೇಲಧಿಕಾರಿಗಳ ಕಿರುಕುಳ ಆರೋಪ ಮತ್ತು ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಡಿಜಿಪಿಗೆ ಎಸ್.ಪಿ ಪತ್ರ ಬರೆದಿರುವ ಕುರಿತು ವರದಿ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇನ್‌ಸ್ಪೆಕ್ಟರ್ ಶ್ರೀನಿವಾಸ್ ಸಾಕಷ್ಟು ಆರೋಪಗಳನ್ನು ಮಾಡಿದ್ದಾರೆ. ಎಸ್.ಪಿ ಕಾಶಿನಾಥ್ ಪತ್ರ ಬರೆದಿದ್ದಾರೆ. ಈ ಎರಡು ಪ್ರಕರಣಗಳ ಕುರಿತು ವರದಿ ಕೇಳಿದ್ದೇನೆ. ವರದಿ ಬಳಿಕ ಸತ್ಯಾಸತ್ಯತೆಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

‘ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶಾಸಕ ಎನ್.ಎ.ಹ್ಯಾರೀಸ್ ಅವರ ಮಕ್ಕಳ ನಿವಾಸಗಳ ಮೇಲೆ ದಾಳಿ ನಡೆಸಿದ್ದು ಏಕೆ ಗೊತ್ತಿಲ್ಲ. ಏನೆಲ್ಲ ಸಿಕ್ಕಿದೆ ಎಂಬುದನ್ನು ಇಡಿ ಅಧಿಕಾರಿಗಳು ಮಾಹಿತಿ ನೀಡಬೇಕು. ಬಿಟ್‌ಕಾಯಿನ್ ಹಗರಣದ ಕುರಿತು ರಾಜ್ಯದಲ್ಲಿ ಎಸ್‌ಐಟಿ ರಚನೆ ಮಾಡಲಾಗಿತ್ತು. ತನಿಖೆ ಕೊನೆ ಹಂತದಲ್ಲಿದೆ. ಪ್ರಕರಣ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯಾಪ್ತಿ ಹೊಂದಿದೆ. ಅಂತಿಮ ವರದಿಗಾಗಿ ಕಾಯುತ್ತಿದ್ದೇವೆ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

### ಜಲಮಂಡಳಿ ಅದಾಲತ್ ನಾಳೆ

**ಬೆಂಗಳೂರು:** ಬೆಂಗಳೂರು ಜಲಮಂಡಳಿಯು ಉಪವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಏ.23ರಂದು ಹಮ್ಮಿಕೊಂಡಿದೆ.

ಆಗ್ನೇಯ 3 ಉಪ ವಿಭಾಗದ ಸಭೆ ಕೂಡ್ಲು ಜಿಎಲ್ ಆರ್ ಲೇಔಟ್, ಆಗ್ನೇಯ–6 ಬಿಟಿಎಂ 2ನೇ ಹಂತ, ಪಶ್ಚಿಮ 1–3 ರಾಜಾಜಿನಗರ, ವಾಯುವ್ಯ–5 ಹೆಸರಘಟ್ಟ ಎಂಇಐ ಲೇಔಟ್, ಉತ್ತರ 2–3 ಯಲಹಂಕ, ದಕ್ಷಿಣ 1–3 ಅಂಜನಾಪುರ, ನೈರುತ್ಯ 3 ಬಸವನಗುಡಿ, ನೈರುತ್ಯ 6 ಲಿಂಗಧೀರನಹಳ್ಳಿ, ಪೂರ್ವ ಉಪವಿಭಾಗ 2–4ರ ಅದಾಲತ್ ಕಸ್ತೂರಿನಗರದಲ್ಲಿ ನಡೆಯಲಿದೆ.

ದೂರು ನೀಡಲು ಸಹಾಯವಾಣಿ 1916 ಸಂಪರ್ಕಿಸಲು ಕೋರಲಾಗಿದೆ.

### ‘ಕೈ’ ವಿರುದ್ಧ ಹೋರಾಟ

**ಬೆಂಗಳೂರು:** ‘ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತು ಇಂಡಿಯಾ ಕೂಟದ ವಿರುದ್ಧ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಏ.25ರಂದು ಆಕ್ರೋಶ ಯಾತ್ರೆ ಮತ್ತು ಸಭೆಗಳನ್ನು ಆಯೋಜಿಸಲಾಗುವುದು’ ಎಂದು ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷೆ ಸಿ. ಮಂಜುಳಾ ತಿಳಿಸಿದ್ದಾರೆ.

ಇದೇ 27ರಿಂದ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ಬಿಜೆಪಿಯ 300 ಸಂಘಟನಾತ್ಮಕ ಮಂಡಲಗಳಲ್ಲಿ ಹೋರಾಟ ನಡೆಯಲಿದ್ದು, ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಬೃಹತ್ ರ‍್ಯಾಲಿ ನಡೆಸುವ ಕುರಿತು ಚರ್ಚೆ ನಡೆಯುತ್ತಿದೆ’ ಎಂದು ತಿಳಿಸಿದ್ದಾರೆ.

### ನರಸಿಂಹ ಜಯಂತಿ ಮಹೋತ್ಸವ 26ರಿಂದ

**ಬೆಂಗಳೂರು:** ತ್ಯಾಗರಾಜನಗರದ ಶ್ರೀಅಭಯ ಲಕ್ಷ್ಮೀ ನರಸಿಂಹ ಮತ್ತು ಶ್ರೀಪಟ್ಟಾಭಿರಾಮ ದೇವಸ್ಥಾನದಲ್ಲಿ ಏಪ್ರಿಲ್ 26 ರಿಂದ ಮೇ 1ರವರೆಗೆ ನರಸಿಂಹ ಜಯಂತಿ ಮಹೋತ್ಸವ ನಡೆಯಲಿದೆ.

ಏ.26ರಂದು ಶ್ರೀ ಲಕ್ಷ್ಮಿನರಸಿಂಹ ಮತ್ತು ಶ್ರೀನಿವಾಸ ಕಲ್ಯಾಣೋತ್ಸವ, 27ರಂದು ಬೆಳಿಗ್ಗೆ 9ಕ್ಕೆ ಸುದರ್ಶನ ಹೋಮ,28ರಂದು ಬೆಳಿಗ್ಗೆ 9 ರಿಂದ ಶ್ರೀನರಸಿಂಹ ತಾರಕ ಹೋಮ, ಮಧ್ಯಾಹ್ನ 3 ರಿಂದ ರಾಹುಕಾಲದ ಹೋಮ,ಏಪ್ರಿಲ್ 29ರಂದು ಬೆಳಿಗ್ಗೆ 9ಕ್ಕೆ ಅಶ್ವತ್ಥಕುಬೇರ ಲಕ್ಷ್ಮೀನರಸಿಂಹ ದೇವರಿಗೆ ಮಹಾ ಅಭಿಷೇಕ , ನಾಣ್ಯ ಅಭಿಷೇಕ, 30ಕ್ಕೆ ಬ್ರಹ್ಮರಥೋತ್ಸವ ನಡೆಯಲಿದೆ ಎಂದು ಪ್ರಧಾನ ಅರ್ಚಕ ವಾದಿರಾಜ್ ಆಚಾರ್ ತಿಳಿಸಿದ್ದಾರೆ.

ಚಾಮರಾಜನಗರದಲ್ಲಿ ನಡೆದಿದ್ದ ಅವಘಡ • 25 ಮಂದಿಗೆ ನೇಮಕಾತಿ ಆದೇಶ

## ಆಕ್ಸಿಜನ್ ದುರಂತ; ಸಂತ್ರಸ್ತರಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

**ಗುಂಡ್ಲುಪೇಟೆ (ಚಾಮರಾಜನಗರ):** ಐದು ವರ್ಷಗಳ ಹಿಂದೆ ಇಲ್ಲಿನ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬಗಳ 25 ಮಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪತ್ರ ವಿತರಿಸಿದರು.

ತಾಲ್ಲೂಕಿನ 110 ಕೆರೆಗಳನ್ನು ತುಂಬಿಸುವ ಯೋಜನೆಗೆ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ನೇಮಕಾತಿ ಪತ್ರ ನೀಡಿದ ಮುಖ್ಯಮಂತ್ರಿ, ‘ರಾಜ್ಯ ಸರ್ಕಾರ ನುಡಿದಂತೆ ನಡೆದಿದೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ದುರಂತ ನಡೆದಾಗ ಇದ್ದ ಅಂದಿನ ಬಿಜೆಪಿ ಸರ್ಕಾರ ಸಂತ್ರಸ್ತರ ನೋವಿಗೆ ಸ್ಪಂದಿಸಲಿಲ್ಲ. ಆದರೆ, ಕಾಂಗ್ರೆಸ್ ಕೊಟ್ಟ ಮಾತಿನಂತೆ ಸಂಪುಟದಲ್ಲಿ ತೀರ್ಮಾನ ಕೈಗೊಂಡು 25 ಮಂದಿಗೆ ಸರ್ಕಾರಿ ಉದ್ಯೋಗ ನೀಡಿದೆ ಎಂದರು.

‘ಕೋವಿಡ್ ಕಾಲಘಟ್ಟದಲ್ಲಿ ಲಕ್ಷಾಂತರ ಮಂದಿ ಮೃತಪಟ್ಟಿದ್ದು, ಎಲ್ಲ ಸಾವುಗಳಿಗೆ ನ್ಯಾಯ ಕೊಡಲು ಸಾಧ್ಯವಾಗದಿದ್ದರೂ ಆಕ್ಸಿಜನ್ ಕೊರತೆ ದುರಂತದಲ್ಲಿ ಮಡಿದವರ ಕುಟುಂಬಗಳಿಗೆ ನ್ಯಾಯ ದೊರಕಿಸಿ ಕೊಟ್ಟಿರುವ ತೃಪ್ತಿ ಇದೆ’ ಎಂದರು.

> **ಹೋರಾಟಕ್ಕೆ ಪ್ರತಿಫಲ ಸಿಕ್ಕಿದೆ. ಸರ್ಕಾರಿ ಉದ್ಯೋಗ ದೊರೆತಿರುವುದು ಹೊಸ ಜೀವನ ಸಿಕ್ಕಂತಾಗಿದೆ. ಮಕ್ಕಳಿಗೆ ಶಿಕ್ಷಣ, ಗೌರವಯುತ ಜೀವನ ನಡೆಸಬಹುದು ಎಂಬ ಭರವಸೆ ಮೂಡಿದೆ**
> **ಜ್ಯೋತಿ ಬಿಸಲವಾಡಿ,** ಸಂತ್ರಸ್ತೆ

**ಯಾವ ಹುದ್ದೆಗಳು?:** ಸಂತ್ರಸ್ತರ ವಿದ್ಯಾರ್ಹತೆ ಆಧಾರದಲ್ಲಿ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಬೋಧನಾ ಆಸ್ಪತ್ರೆಯಲ್ಲಿ (ಸಿಮ್ಸ್) 17 ಮಂದಿಗೆ ‘ಡಿ’ ದರ್ಜೆ, 6 ಮಂದಿಗೆ ಎಫ್‌ಡಿಎ ಹಾಗೂ ಇಬ್ಬರಿಗೆ ಸ್ಟಾಫ್ ನರ್ಸ್ ಹುದ್ದೆ ನೀಡಲಾಗಿದೆ. ಸರ್ಕಾರಿ ಹುದ್ದೆಗೆ ತಕ್ಕ ವಿದ್ಯಾರ್ಹತೆ ಇಲ್ಲದ ಐವರಿಗೆ ಹೊರಗುತ್ತಿಗೆ ನೌಕರಿ ನೀಡಲಾಗಿದೆ.

2021ರ ಮೇ 2ರಂದು ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕ ದೊರೆಯದೆ 34 ಮಂದಿ ಮೃತಪಟ್ಟಿದ್ದರು. ದುರ್ಘಟನೆ ನಡೆದಾಗ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಉದ್ಯೋಗ ನೀಡುವ ಭರವಸೆ ರಾಹುಲ್ ಗಾಂಧಿ ಹಾಗೂ ಡಿ.ಕೆ.ಶಿವಕುಮಾರ್ ನೀಡಿದ್ದರು.



ಆಕ್ಸಿಜನ್ ದುರಂತದಲ್ಲಿ ಮಡಿದವರ ಕುಟುಂಬ ಸದಸ್ಯರಿಗೆ ಸರ್ಕಾರಿ ಹುದ್ದೆಗಳ ನೇಮಕಾತಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಂಡ್ಲುಪೇಟೆಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ವಿತರಿಸಿದರು


### ‘ಕಾಂಗ್ರೆಸ್ ಗುರಿಯಾಗಿಸಿ ಇ.ಡಿ ದಾಳಿ’

‘ಕೇಂದ್ರ ಸರ್ಕಾರ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಇ.ಡಿ ದಾಳಿ ನಡೆಸುತ್ತಿದೆ. ಬಿಜೆಪಿ ನಾಯಕರ ಮನೆಯ ಮೇಲೆ ದಾಳಿ ಮಾಡುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

‘ಅಂದು ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳನ್ನು ವಿರೋಧಿಸಿದವರೇ, ಇಂದು ಅವುಗಳನ್ನು ಅನುಸರಿಸಿದ್ದಾರೆ. ಅವರಿಗೆ ಗ್ಯಾರಂಟಿಗಳು ಬಡವರ ಕಾರ್ಯಕ್ರಮ ಎಂಬ ಅರಿವು ಬಂದಂತಿದೆ’ ಎಂದರು.

ಮಹಿಳೆಯರಿಗೆ ಮೀಸಲಾತಿ ಮಸೂದೆ ಉಲ್ಲೇಖಿಸಿ, ಎನ್‌ಡಿಎ ರಾಜಕೀಯ ಲಾಭಕ್ಕಾಗಿ ಮಹಿಳಾ ಮೀಸಲಾತಿ ಜೊತೆಗೆ ಕ್ಷೇತ್ರ ಮರು ವಿಂಗಡಣೆ ಮಸೂದೆ ಸೇರಿಸಿ ಮಂಡಿಸಿದೆ. ಕ್ಷೇತ್ರ ಮರು ವಿಂಗಡಣೆಗೆ ಕಾಂಗ್ರೆಸ್ ವಿರೋಧವಿದೆಯೇ ಹೊರತು ಮಹಿಳಾ ಮೀಸಲಾತಿಗೆ ಅಲ್ಲ ಎಂದು ಸಿದ್ದರಾಮಯ್ಯ ಹೇಳಿದರು. ಅವಘಡಗಳಲ್ಲಿ ಮೃತಪಟ್ಟವರಿಗೆ ಪರಿಹಾರ ನೀಡುವಲ್ಲಿ ತಾರತಮ್ಯ ಆಗುತ್ತಿದೆ ಎಂಬ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ ಆರೋಪಕ್ಕೆ, ‘ಶಾಸಕರು ಮನವಿ ಮಾಡಿದರೆ, ದುರ್ಘಟನೆ ಗಮನಕ್ಕೆ ಬಂದರೆ ನೀಡುತ್ತೇನೆ’ ಎಂದರು.

# ಅಂಗಾಂಗ ಮುದ್ರಣ
# ವೈದ್ಯಕೀಯ ಕ್ಷೇತ್ರದ ಕ್ರಾಂತಿ



ಈ ತಂತ್ರವನ್ನು ಬಳಸಿ ಈಗಾಗಲೇ ಚರ್ಮ, ಮೃದ್ವಸ್ಥಿ, ಮೂಳೆ, ಹೃದಯ ಹಾಗೂ ಯಕೃತ್ತಿನ ಭಾಗಗಳನ್ನು ಮುದ್ರಿಸಲಾಗಿದೆ. ಹೀಗೆ ತಯಾರಿಸಿದ ಚರ್ಮದ ಭಾಗಗಳು ಸುಟ್ಟಗಾಯ ಹಾಗೂ ದೀರ್ಘಕಾಲದ ಗಾಯಗಳಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಯಶಸ್ಸನ್ನು ನೀಡಿವೆ

• ಎಸ್.ಎನ್.ಹೆಗಡೆ

ಇತ್ತೀಚಿನ ದಿನಗಳಲ್ಲಿ ಅಂಗಾಂಗ ವೈಫಲ್ಯದಿಂದ ಉಂಟಾಗುವ ಸಾವಿನ ಪ್ರಮಾಣ ಶೇ 15ರಿಂದ 20ರಷ್ಟಾಗಿದೆ. ಈ ಸಾವಿನ ಪ್ರಮಾಣವನ್ನು ಕಡಿಮೆ ಮಾಡುವ ಒಂದೇ ಮಾರ್ಗ ಅಂಗಾಂಗ ದಾನ. ಒಂದೇ ವ್ಯಕ್ತಿಯಲ್ಲಿ ಎರಡು ಅಂಗಗಳಿದ್ದರೆ (ಉದಾ: ಮೂತ್ರಪಿಂಡ) ಒಂದನ್ನು ಬದುಕಿದ್ದಾಗಲೇ ದಾನ ಮಾಡಬಹುದು; ಇಲ್ಲವಾದರೆ ಯಾವುದೇ ವ್ಯಕ್ತಿಯ ಮರಣದ ಅನಂತರ ಆ ವ್ಯಕ್ತಿಯ ಸಂಬಂಧಿಕರು ಒಪ್ಪಿದರೆ ಕೆಲವೇ ಗಂಟೆಗಳಲ್ಲಿ ಅಂಗಾಂಗವನ್ನು ಬೇರ್ಪಡಿಸಿ ವೈಫಲ್ಯದಿಂದ ಬಳಲುತ್ತಿರುವ ವ್ಯಕ್ತಿಗೆ ಕಸಿ ಮಾಡಬೇಕು.

ಇತ್ತೀಚಿನ ದಾಖಲೆಗಳ ಪ್ರಕಾರ ಕರ್ನಾಟಕ ರಾಜ್ಯವೊಂದರಲ್ಲಿಯೇ ಸುಮಾರು 5500 ಮಂದಿ ಒಂದಲ್ಲ ಒಂದು ಅಂಗಾಂಗ ಕಸಿಗಾಗಿ ಕಾಯುತ್ತಿದ್ದಾರಂತೆ! ಅವರಲ್ಲಿ ಬಹುಪಾಲು (ಸುಮಾರು 4700 ಮಂದಿ) ಮೂತ್ರಪಿಂಡಕ್ಕೆ ಕಾಯುತ್ತಿದ್ದಾರೆ! ಪ್ರಪಂಚದಾದ್ಯಂತ ಕಸಿಗಾಗಿ ಅಂಗಾಂಗವನ್ನು ನಿರೀಕ್ಷಿಸುತ್ತಿರುವ ವ್ಯಕ್ತಿಗಳ ಸಂಖ್ಯೆ 378000 ಎಂದು ಅಂದಾಜಿಸಲಾಗಿದೆ. ಸಾಂಪ್ರದಾಯಿಕ ಕಸಿ, ಜೀವ ಉಳಿಸುವ ಚಿಕಿತ್ಸೆಯಾದರೂ, ಅದು ಫಲಕಾರಿಯಾಗುವುದು ದಾನಿಗಳ ಲಭ್ಯತೆ ಮತ್ತು ಸಂಕೀರ್ಣ ಅಂಗಾಂಶ ಹೊಂದಾಣಿಕೆಯ ಸಾಧ್ಯತೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ.

ಸಾವಿಗೀಡಾಗುವವರೆಲ್ಲರ ಬಂಧುಗಳು ಶವದ ಅಂಗಾಂಗದಾನಕ್ಕೆ ಒಪ್ಪುವುದಿಲ್ಲ. ಅದರಿಂದ ಇಷ್ಟು ಪ್ರಮಾಣದಲ್ಲಿ ಕಸಿಗಾಗಿ ಅಂಗಾಂಗಗಳನ್ನು ಹೊಂದಿಸುವುದು ಈಗ ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯುವವರಿಗೆ ಒಂದು ಸವಾಲಾಗಿದೆ. ಪ್ರತಿ ವರ್ಷ ಅಂಗಾಂಗ ಕಸಿಗಾಗಿ ಕಾಯುತ್ತಿರುವವರಲ್ಲಿ ಸಾವಿರಾರು ರೋಗಿಗಳು ಅಂಗಾಂಗ ದೊರೆಯದೆ ಸಾವಿಗೀಡಾಗುತ್ತಿದ್ದಾರೆ. ಈ ಸಮಸ್ಯೆಯನ್ನು ಎದುರಿಸಲು ವಿಜ್ಞಾನಿಗಳು ಮತ್ತು ಎಂಜಿನಿಯರುಗಳು ಕೂಡಿ 'ಅಂಗಾಂಗ ಮುದ್ರಣ' ಅಥವಾ 'ಆರ್ಗನ್ ಪ್ರಿಂಟಿಂಗ್' ಎಂಬ ಹೊಸ ವಿಧಾನವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ! ಇದು 'ಪುನರುತ್ಪಾದಕ ಔಷಧವಿಜ್ಞಾನ' ('ರಿಜನರೇಟೀವ್ ಮೆಡಿಸಿನ್') ಕ್ಷೇತ್ರದ ಒಂದು ಶಾಖೆಯಾಗಿದ್ದು, ಪ್ರಯೋಗಶಾಲೆಯಲ್ಲಿ ಜೀವಂತ ಅಂಗಾಂಗಗಳನ್ನು ತಯಾರಿಸುವ ಉದ್ದೇಶವನ್ನು ಹೊಂದಿದೆ.

ಅಂಗಾಂಗ ಮುದ್ರಣವನ್ನು ಜೀವವಿಜ್ಞಾನ ಹಾಗೂ ಎಂಜಿನಿಯರಿಂಗ್ ತಂತ್ರಜ್ಞಾನ ಎರಡನ್ನೂ ಸೇರಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ. ವ್ಯಕ್ತಿಯ ಬೇಡಿಕೆಯ ಮೇರೆಗೆ ನಿರ್ದಿಷ್ಟ ಕ್ರಿಯಾಶೀಲ ಅಂಗವನ್ನು ಉತ್ಪಾದಿಸುವುದು ಈ ತಂತ್ರದ ಉದ್ದೇಶ. ಇದೀಗ ಬೆಳೆಯುತ್ತಿರುವ ಈ ತಂತ್ರವು ಯಶಸ್ವಿಯಾದರೆ ಮಾನವಸಮಾಜದ ಮೇಲೆ ಆಳವಾದ ಪರಿಣಾಮ ಬೀರುತ್ತದೆ.

ಅಂಗಾಂಗ ಮುದ್ರಣವು ಮೂರು ಆಯಾಮದ ಜೈವಿಕ ಮುದ್ರಣ ತಂತ್ರವನ್ನು ಆಧರಿಸಿದೆ. ಮೊದಲು ಎಂಆರ್‌ಐ ಅಥವಾ ಸಿಟಿ ಸ್ಕ್ಯಾನ್‌ಗಳಂತಹ ವೈದ್ಯಕೀಯ ಚಿತ್ರೀಕರಣ ತಂತ್ರಗಳ ಮೂಲಕ ಅಗತ್ಯವಾದ ಅಂಗದ ಡಿಜಿಟಲ್ ಮಾದರಿಯನ್ನು ತಯಾರಿಸಲಾಗುತ್ತದೆ. ಈ ಮಾದರಿಯನ್ನು ಮೂಲಾಧಾರವನ್ನಾಗಿ ಇಟ್ಟುಕೊಂಡು ಅದಕ್ಕೆ ತಕ್ಕಂತೆ ಅಂಗವನ್ನು ರಚಿಸಲಾಗುತ್ತದೆ. ಪ್ಲಾಸ್ಟಿಕ್ ಅಥವಾ ಲೋಹದ ಮೂರು ಆಯಾಮದ ವಸ್ತುಗಳ ಪ್ರತಿಗಳನ್ನು ತಯಾರಿಸಿದಂತೆ ಕೆಲವು ಜೈವಿಕ ವಸ್ತುಗಳನ್ನು ಸಂಯೋಜಿಸಿ ಜೀವಂತ ಕೋಶಗಳನ್ನು ತಯಾರಿಸಿ ಅವುಗಳನ್ನು ಪದರ ಪದರವಾಗಿ ಜೋಡಿಸುವುದು ಇದರ ಮೂಲತತ್ತ್ವ. ಕೆಲವು ಹೈಡ್ರೊಜೆಲ್‌ಗಳನ್ನು ಬಳಸಿ ಜೀವಕೋಶಗಳ ನಡುವೆ ಇರುವ ಬಾಹ್ಯಕೋಶೀಯ ಮಾತೃಕೆಯನ್ನು ತಯಾರಿಸುವುದು ಮೊದಲ ಹಂತ. ಈ ಮಾತೃಕೆ ಜೀವಕೋಶಗಳನ್ನು ಒಂದಕ್ಕೊಂದು ಬಂಧಿಸಿ ಯಾವುದೇ ಅಂಗಕ್ಕೆ ರಚನಾತ್ಮಕ ಬೆಂಬಲವನ್ನು ನೀಡುತ್ತದೆ.

ಪ್ರತಿಯೊಂದು ಜೀವಿಯಲ್ಲಿಯೂ ವಿಭೇದನೆಗೊಳ್ಳದೆ ಇನ್ನೂ ಬೆಳೆಯುತ್ತಿರುವ ಭ್ರೂಣಕೋಶಗಳಂತೆಯೇ ಇರುವ ಜೀವಕೋಶಗಳಿರುತ್ತವೆ. ಇವನ್ನು 'ಕಾಂಡಕೋಶಗಳು' ಎನ್ನುತ್ತಾರೆ. ಇವುಗಳಿಗೆ ಪ್ರಚೋದನೆ ಸಿಕ್ಕರೆ ಯಾವುದೇ ಬಗೆಯ ಜೀವಕೋಶಗಳಾಗಿ ಅಂಗಾಂಗಗಳಾಗಿ ವಿಭೇದನೆಗೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಮುಂದಿನ ಹಂತದಲ್ಲಿ ರೋಗಿಯ ಶರೀರದಿಂದ ಕಾಂಡಕೋಶಗಳನ್ನು ಪ್ರತ್ಯೇಕಿಸಿ, ಅವುಗಳನ್ನು ಪ್ರಯೋಗಾಲಯದಲ್ಲಿ ಕೃತಕ ಆಹಾರ ಮಾಧ್ಯಮದಲ್ಲಿ ಬೆಳೆಸಲಾಗುತ್ತದೆ. ಅನಂತರ ಈ ಜೀವಕೋಶಗಳು ಒಂದರ ಮೇಲೆ ಇನ್ನೊಂದರಂತೆ ಪದರಪದರವಾಗಿ ಬೆಳೆಯುವಂತೆ ಪ್ರಚೋದಿಸಲಾಗುವುದು. ಹೀಗೆ ಪದರ ಪದರವಾಗಿ ಬೆಳೆಯುವುದನ್ನು 'ಬಯೋಪ್ರಿಂಟಿಂಗ್' ಅಥವಾ 'ಜೈವಿಕ ಮುದ್ರಣ' ಎನ್ನುತ್ತಾರೆ. ಈ ಕೋಶಪದರಗಳನ್ನು ಜೈವಿಕ ರಿಯಾಕ್ಟರ್‌ಗಳಲ್ಲಿ ಇಟ್ಟು ಅದರ ಬೆಳವಣಿಗೆ ಮತ್ತು ಕಾರ್ಯವನ್ನು ಉತ್ತೇಜಿಸಲಾಗುತ್ತದೆ. ಅವು ಬೆಳೆಯಲು ಹಾಗೂ ಕಾರ್ಯ ನಿರ್ವಹಿಸಲು ಅಗತ್ಯವಾದ ಪೋಷಕಾಂಶಗಳು, ಆಮ್ಲಜನಕ ಹಾಗೂ ಜೀವರಾಸಾಯನಿಕ ವಸ್ತುಗಳನ್ನು ಜೈವಿಕ ರಿಯಾಕ್ಟರ್‌ಗಳಲ್ಲಿ ಸೇರಿಸಲಾಗುತ್ತದೆ. ಈ ವಸ್ತುಗಳಿಂದ ಜೀವಕೋಶಗಳು ಬೆಳವಣಿಗೆಗೆ ಅಗತ್ಯವಾದ ಜೀವರಾಸಾಯನಿಕ ಸಂಕೇತಗಳನ್ನು ಪಡೆಯುತ್ತವೆ.

ಈ ಜೀವಕೋಶಗಳಿಗೆ ಅಗತ್ಯವಾದ ಅಂಗಾಂಶಗಳನ್ನು ರೂಪಿಸಲು ಪ್ರಚೋದನೆ ನೀಡುವುದು ಈ ತಂತ್ರದ ಪ್ರಮುಖ ಹಂತ. 2006ರಲ್ಲಿ ಶಿನ್ಯಾ ಯಮನಕ ಎಂಬ ವಿಜ್ಞಾನಿಯ ಶೋಧಗಳು ಕಾಂಡಕೋಶಗಳಿಗೆ ಅಂಗಾಂಶ/ಅಂಗಗಳನ್ನು ರಚಿಸಲು ಪುನರ್‍ಪ್ರಚೋದನೆ ನೀಡುವ ತಂತ್ರವನ್ನು ಅಭಿವೃದ್ಧಿಪಡಿಸಲು ಅವಕಾಶ ಮಾಡಿಕೊಟ್ಟವು. ಯಮನಕ ಅವರ ಶೋಧಗಳನ್ನು ಬಳಸಿ ಪುನರ್ ಪ್ರಚೋದನೆಯನ್ನು ಪಡೆದ ಜೀವಕೋಶಗಳನ್ನು ಮಾತ್ರಕೆಯಲ್ಲಿ ಸೇರಿಸಲಾಗುತ್ತದೆ. ಈ ಜೀವಕೋಶಗಳನ್ನು ಪ್ರಯೋಗಾಲಯದಲ್ಲಿ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳನ್ನೊಳಗೊಂಡ ಕೃತಕ ಆಹಾರ ಮಾಧ್ಯಮದಲ್ಲಿ ಬೆಳೆಸಿ ಅಂಗಾಂಶ-ಅಂಗಗಳು ಬೆಳೆಯುವಂತೆ ಮಾಡುವುದು. ಹೀಗೆ ಬೆಳೆದ ಅಂಗದ ಕಾರ್ಯಕ್ಷಮತೆಯನ್ನು ಪರೀಕ್ಷಿಸಿ ರೋಗಿಯ ಶರೀರದಲ್ಲಿ ಅಳವಡಿಸುವುದು ಅಂತಿಮ ಹಂತ.

ಈ ತಂತ್ರವನ್ನು ಬಳಸಿ ಈಗಾಗಲೇ ಚರ್ಮ, ಮೃದ್ವಸ್ಥಿ, ಮೂಳೆ, ಹೃದಯ ಹಾಗೂ ಯಕೃತ್ತಿನ ಭಾಗಗಳನ್ನು ಮುದ್ರಿಸಲಾಗಿದೆ. ಹೀಗೆ ತಯಾರಿಸಿದ ಚರ್ಮದ ಭಾಗಗಳು ಸುಟ್ಟಗಾಯ ಹಾಗೂ ದೀರ್ಘಕಾಲದ ಗಾಯಗಳಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಯಶಸ್ಸನ್ನು ನೀಡಿವೆ. ಉಳಿದ ಅಂಗಗಳ ಕಸಿ ಮಾಡಲು ರೋಗಿಯ ನಾಳೀಯ ವ್ಯವಸ್ಥೆಗೆ ಈ ಮುದ್ರಿತ ಅಂಗಗಳು ಹೊಂದಿಕೊಳ್ಳುವಂತಿರಬೇಕು. ರೋಗಿಯ ಶರೀರದ ನಾಳೀಯ ವ್ಯವಸ್ಥೆ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ ಸ್ಥಿತಿಗೆ ಕೊಂಡೊಯ್ಯುವ ಪ್ರಯತ್ನಗಳು ಈಗ ನಡೆಯುತ್ತಿವೆ.

ಸದ್ಯದ ಸ್ಥಿತಿಯಲ್ಲಿ ಹೀಗೆ ಮುದ್ರಿಸಿದ ಹೃದಯ, ಯಕೃತ್, ಮೂತ್ರಪಿಂಡ ಮುಂತಾದ ಅಂಗಗಳನ್ನು ಹೊಸದಾಗಿ ಆವಿಷ್ಕರಿಸಿದ ಔಷಧಗಳನ್ನು ಪರೀಕ್ಷಿಸಲು ಬಳಸಲಾಗುತ್ತಿದೆ. ಈಗ ನಡೆಯುತ್ತಿರುವ ಚಿಕಿತ್ಸಾತ್ಮಕ ಪರೀಕ್ಷೆಗಳು ಫಲಕಾರಿಯಾದರೆ ಮುಂದೊಂದು ದಿನ ಅಂಗಕಸಿಗೆ ದಾನಿಯನ್ನು ಹುಡುಕುವ ಅವಶ್ಯಕತೆ ಇರುವುದಿಲ್ಲ!



# ಜಿನೋಮ್ ಇಂಡಿಯಾ
# ವೈಯಕ್ತಿಕ ಚಿಕಿತ್ಸಾ ಪದ್ಧತಿ

• ಸುಧೀರ ಎಚ್.ಎಸ್.

ಭಾರತೀಯರ ಆರೋಗ್ಯ ಮತ್ತು ಅನುವಂಶೀಯತೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಗಿದೆ. ನಮ್ಮ ದೇಶದ ವೈವಿಧ್ಯಮಯ ಜನಸಮುದಾಯಗಳ 'ಡಿಎನ್‌ಎ' (DNA) ಸಂರಚನೆಯನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಕೈಗೊಳ್ಳಲಾದ 'ಜಿನೋಮ್ ಇಂಡಿಯಾ' (GenomeIndia) ಯೋಜನೆಯು ಅತ್ಯಂತ ಮಹತ್ವದ ಮೈಲಿಗಲ್ಲನ್ನು ತಲುಪಿದೆ. ಈ ಬೃಹತ್ ಸಂಶೋಧನೆಯ ಮೂಲಕ ಭಾರತೀಯರಲ್ಲಿ ಮಾತ್ರ ಕಂಡುಬರುವ ಸುಮಾರು 4.4 ಕೋಟಿ ಹೊಸ ಜೀನ್ ಬದಲಾವಣೆಗಳನ್ನು ಅಥವಾ 'ಜೆನೆಟಿಕ್ ವೇರಿಯಂಟ್'ಗಳನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಈ ಸಂಶೋಧನೆಯು ಭವಿಷ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ದೇಹಪ್ರಕೃತಿಗೆ ಅನುಗುಣವಾಗಿ ಚಿಕಿತ್ಸೆ ನೀಡುವ 'ಪ್ರೆಸಿಷನ್ ಮೆಡಿಸಿನ್' ಅಥವಾ ನಿಖರ ವೈದ್ಯಕೀಯ ಪದ್ಧತಿಗೆ ಬಲವಾದ ಅಡಿಪಾಯವನ್ನು ಹಾಕಿದೆ.

ಸಾಮಾನ್ಯವಾಗಿ ಆಧುನಿಕ ವೈದ್ಯಕೀಯ ಶಾಸ್ತ್ರವು ಯುರೋಪಿಯನ್ ದೇಶಗಳ ಜನರ ಡಿಎನ್‌ಎ ಮಾಹಿತಿಯನ್ನು ಆಧರಿಸಿ ರೂಪಿತವಾಗಿರುತ್ತದೆ. ಆದರೆ, ಭಾರತೀಯರ ದೇಹದ ಜೈವಿಕ ರಚನೆಯು ಯುರೋಪಿಯನ್ನರಿಗಿಂತ ಭಿನ್ನವಾಗಿದೆ. ಇದರಿಂದಾಗಿ, ವಿದೇಶಗಳಲ್ಲಿ ಯಶಸ್ವಿಯಾದ ಔಷಧಗಳು ಅಥವಾ ಚಿಕಿತ್ಸಾ ಪದ್ಧತಿಗಳು ಭಾರತೀಯರಿಗೆ ಅಷ್ಟೇ ಪರಿಣಾಮಕಾರಿಯಾಗಿ ಕೆಲಸ ಮಾಡದಿರಬಹುದು ಅಥವಾ ಕೆಲವು ಅಡ್ಡ ಪರಿಣಾಮಗಳನ್ನೂ ಉಂಟುಮಾಡಬಹುದು. ಈ ಕೊರತೆಯನ್ನು ನೀಗಿಸಲು ಭಾರತ ಸರ್ಕಾರದ ಬಯೋಟೆಕ್ನಾಲಜಿ ಇಲಾಖೆಯ ಧನಸಹಾಯದೊಂದಿಗೆ 2021ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ (IISc) ಸೇರಿದಂತೆ ದೇಶದ 20 ಪ್ರಮುಖ ಸಂಸ್ಥೆಗಳ ವಿಜ್ಞಾನಿಗಳು ಈ ತಂಡದಲ್ಲಿದ್ದಾರೆ.

ನಮ್ಮ ಕರ್ನಾಟಕವೂ ಸೇರಿದಂತೆ ದೇಶದಾದ್ಯಂತ ಇರುವ 83 ವಿವಿಧ ಜನಸಮುದಾಯಗಳ ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ವ್ಯಕ್ತಿಗಳ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಅದರಲ್ಲಿ ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು ಸಂಪೂರ್ಣ ಜೀನ್ ಸಂರಚನೆಯನ್ನು (Whole Genome Sequencing) ವಿಶ್ಲೇಷಿಸಲಾಗಿದೆ. 'ಜೀನ್' ಎನ್ನುವುದು ನಮ್ಮ ದೇಹದ ಬೆಳವಣಿಗೆ ಮತ್ತು ಕಾರ್ಯವೈಖರಿಯನ್ನು ನಿರ್ಧರಿಸುವ ಒಂದು ಬ್ಲೂಪ್ರಿಂಟ್ ಅಥವಾ ನಕಾಶೆ ಇದ್ದಂತೆ. ಈ ನಕಾಶೆಯಲ್ಲಿನ ಸಣ್ಣ ಬದಲಾವಣೆಗಳು ನಮಗೆ ಬರುವ ಕಾಯಿಲೆಗಳು ಮತ್ತು ನಾವು ತೆಗೆದುಕೊಳ್ಳುವ ಔಷಧಗಳು ನಮ್ಮ ದೇಹದ ಮೇಲೆ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ನಿರ್ಧರಿಸುತ್ತವೆ.

ಈ ಸಂಶೋಧನೆಯಲ್ಲಿ ಪತ್ತೆಯಾದ ಅತ್ಯಂತ ಆಶ್ಚರ್ಯಕರ ವಿಷಯವೆಂದರೆ ಭಾರತೀಯರ ಜೀನ್ ವೈವಿಧ್ಯ. ಜಗತ್ತಿನ ಇತರ ಭಾಗಗಳಲ್ಲಿ ಅಪರೂಪವಾಗಿರುವ ಕೆಲವು ರೋಗಕಾರಕ ಜೀನ್ ಬದಲಾವಣೆಗಳು ಭಾರತದ ಕೆಲವು ನಿರ್ದಿಷ್ಟ ಸಮುದಾಯಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಇದಕ್ಕೆ ಮುಖ್ಯ ಕಾರಣ ನಮ್ಮ ದೇಶದಲ್ಲಿ ಶತಮಾನಗಳಿಂದ ನಡೆದುಕೊಂಡು ಬಂದಿರುವ 'ಸ್ವಜಾತಿ ವಿವಾಹ' ಅಥವಾ 'ಎಂಡೋಗಮಿ' ಪದ್ಧತಿ. ಒಂದು ಸಣ್ಣ ಗುಂಪಿನೊಳಗೆ ಮದುವೆ ಸಂಬಂಧಗಳು ನಡೆಯುವುದರಿಂದ, ಆ ಗುಂಪಿನ ವಿಶಿಷ್ಟ ಜೀನ್ ಗುಣಲಕ್ಷಣಗಳು ತಲೆಮಾರುಗಳಿಂದ ಹಾಗೆಯೇ ಉಳಿದುಕೊಂಡು ಬಂದಿವೆ. ಇದನ್ನು ವಿಜ್ಞಾನದ ಭಾಷೆಯಲ್ಲಿ 'ಫೌಂಡರ್ ಎಫೆಕ್ಟ್' ಎಂದು ಕರೆಯಲಾಗುತ್ತದೆ.

ಕರ್ನಾಟಕದಂತಹ ವೈವಿಧ್ಯಮಯ ರಾಜ್ಯಗಳಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ಮತ್ತು ವಿಶಿಷ್ಟ ಸಂಸ್ಕೃತಿಯ ಜನಸಮುದಾಯಗಳಿವೆ. ಈ ಸಂಶೋಧನೆಯ ಪ್ರಕಾರ, ಇಂತಹ ಸಮುದಾಯಗಳಲ್ಲಿ ಹೃದಯಸಂಬಂಧಿ ಕಾಯಿಲೆಗಳು, ಶ್ರವಣದೋಷ, ದೃಷ್ಟಿಮಾಂದ್ಯತೆ ಮತ್ತು ಕೊಬ್ಬಿನಂಶದ ಚಯಾಪಚಯ ಕ್ರಿಯೆಗೆ (Lipid Metabolism) ಸಂಬಂಧಿಸಿದ ಸಮಸ್ಯೆಗಳು ಕಂಡುಬರುವ ಸಾಧ್ಯತೆ ಹೆಚ್ಚಿದೆ. ಈ ಆರೋಗ್ಯ ಅಪಾಯಗಳು ದೇಶಾದ್ಯಂತ ಸಮಾನವಾಗಿ ಹರಡಿಲ್ಲ; ಬದಲಾಗಿ ಆಯಾ ಸಮುದಾಯಗಳ ಜೀನ್ ಸಂರಚನೆಗೆ ಅನುಗುಣವಾಗಿ ಬದಲಾಗುತ್ತವೆ.

ಇದಲ್ಲದೆ, ನಾವು ದಿನನಿತ್ಯ ಬಳಸುವ ಕೆಲವು ಸಾಮಾನ್ಯ ಔಷಧಗಳ ಮೇಲೆ ಈ ಜೀನ್ ಬದಲಾವಣೆಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದು ಸಹ ಬೆಳಕಿಗೆ ಬಂದಿದೆ. ಉದಾಹರಣೆಗೆ, ರಕ್ತ ಹೆಪ್ಪುಗಟ್ಟುವುದನ್ನು ತಡೆಯುವ ಔಷಧಗಳು, ಖಿನ್ನತೆ ನಿವಾರಕಗಳು ಮತ್ತು ಕ್ಯಾನ್ಸರ್ ಚಿಕಿತ್ಸೆಯ ಔಷಧಗಳನ್ನು ನಮ್ಮ ದೇಹವು ಹೇಗೆ ಜೀರ್ಣಿಸಿಕೊಳ್ಳುತ್ತದೆ ಎಂಬುದು ನಮ್ಮ ಜೀನ್‌ಗಳ ಮೇಲೆ ಅವಲಂಬಿತವಾಗಿರುತ್ತದೆ. ಯುರೋಪಿಯನ್ ಮಾದರಿಯನ್ನು ಅನುಸರಿಸಿ ಭಾರತೀಯರಿಗೆ ಔಷಧದ ಪ್ರಮಾಣ ನಿಗದಿಪಡಿಸುವುದು ಕೆಲವೊಮ್ಮೆ ಅಪಾಯಕಾರಿಯಾಗಬಹುದು ಎಂದು ಈ ಅಧ್ಯಯನ ಎಚ್ಚರಿಸಿದೆ.

ಈ ಸವಾಲನ್ನು ಎದುರಿಸಲು ವಿಜ್ಞಾನಿಗಳು 'ಜಿನೋಮ್ ಇಂಡಿಯಾ ಇಂಪ್ಯೂಟೇಶನ್ ಪ್ಯಾನೆಲ್' ಎಂಬ ವಿಶೇಷ ಡಿಜಿಟಲ್ ಸಾಧನವನ್ನು ಸಿದ್ಧಪಡಿಸಿದ್ದಾರೆ. ಇದು ದಕ್ಷಿಣ ಏಷ್ಯಾದ ಜನರ ಜೀನ್ ಮಾಹಿತಿಯನ್ನು ನಿಖರವಾಗಿ ವಿಶ್ಲೇಷಿಸಲು ಸಹಾಯ ಮಾಡುತ್ತದೆ. ಜಾಗತಿಕ ಮಟ್ಟದಲ್ಲಿ ಲಭ್ಯವಿರುವ ಇತರ ಸಾಧನಗಳಿಗಿಂತ ಇದು ಭಾರತೀಯರ ಆರೋಗ್ಯಸ್ಥಿತಿಯನ್ನು ಪತ್ತೆಹಚ್ಚುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ಸಾಬೀತಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, 'ಜಿನೋಮ್ ಇಂಡಿಯಾ' ಯೋಜನೆಯು ಕೇವಲ ಒಂದು ವೈಜ್ಞಾನಿಕ ಸಾಧನೆಯಲ್ಲ, ಇದು ಭಾರತೀಯರ ಭವಿಷ್ಯದ ಆರೋಗ್ಯ ರಕ್ಷಣೆಯ ದಿಕ್ಸೂಚಿಯಾಗಿದೆ. ಇದರಿಂದಾಗಿ ವೈದ್ಯರು ಇನ್ನು ಮುಂದೆ 'ಎಲ್ಲರಿಗೂ ಒಂದೇ ಚಿಕಿತ್ಸೆ' ಎನ್ನುವ ಬದಲು, ರೋಗಿಯ ಜೀನ್ ಮಾಹಿತಿಯನ್ನು ನೋಡಿ ಅವರಿಗೆ ಸರಿಹೊಂದುವ ಔಷಧ ಮತ್ತು ಪ್ರಮಾಣವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಇದು ಚಿಕಿತ್ಸೆಯ ವೆಚ್ಚವನ್ನು ಕಡಿಮೆ ಮಾಡುವುದಲ್ಲದೆ, ಪ್ರಾಣಹಾನಿಯನ್ನು ತಪ್ಪಿಸಲು ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಈ ಸಂಶೋಧನೆಯ ವ್ಯಾಪ್ತಿಯನ್ನು ಇನ್ನೂ ಹೆಚ್ಚು ಜನರಿಗೆ ವಿಸ್ತರಿಸುವ ಗುರಿಯನ್ನು ವಿಜ್ಞಾನಿಗಳು ಹೊಂದಿದ್ದಾರೆ.

## 'ನೀಟ್' ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

## 'ಸಿಇಟಿ' ದಿಕ್ಸೂಚಿ

### PHYSICS

**20) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is**

(a) $\theta$ (b) $2\frac{\theta}{3}$

(c) $3\frac{\theta}{2}$ (d) $9\frac{\theta}{4}$

**Ans:- (a)**

**Expln-** We know the specific rotation,

$$S = \frac{\theta}{l.c} = \frac{\theta.V}{l.m}$$

Where θ = rotation produced,
l = length of the tube
M = mass of sugar dissolved,
V = volume of sugar solution

$$\Rightarrow \theta = \frac{S.l.M}{V}$$

For first case, $\theta = \frac{S l m}{V}$ .........(i)

For second case, $\theta_1 = \frac{S l_1 m_1}{V_1}$ .........(ii)

here, $l = 0.2\,m$ and $l_1 = 0.3\,m$

also, $V_1 = V + \frac{V}{2} = 1.5\,V = \frac{3}{2}V$

On dividing Eq. (ii) by Eq. (i), we get

$$\frac{\theta_1}{\theta} = \frac{\frac{S l_1 m}{V_1}}{\frac{S l m}{V}} = \frac{l_1}{l} \times \frac{V}{V_1} = \frac{l_1}{l} \times \frac{2V}{3V} = \frac{0.3}{0.2} \times \frac{2}{3} = 1$$

$$\Rightarrow \theta_1 = \theta$$

**21) Two tangent galvanometers, which are identical except in their number of turns, are connected in parallel. The ratio of their resistances of the coils is 1 : 3. If the deflections in the two tangent galvanometers are $30^0$ and $60^0$ respectively, then the ratio of their number of turns is**

(a) 1:3 (b) 3:1
(c) 1:2 (d) 1:6

**Ans:- (a)**

**Expln-** we know that the current passing through galvanometer coil is

$$I = K\tan\theta \text{ where, } K = \frac{2rB_H}{n\mu_0}$$

$\therefore$ Here, $I_1 = K_1\tan\theta_1$ and $I_2 = K_2\tan\theta_2$

$$(\text{or})\ \frac{I_1}{I_2} = \frac{K_1\tan\theta_1}{K_2\tan\theta_2} = \frac{\frac{2r\,B_H}{n_1\mu_0}\tan\theta_2}{\frac{2r\,B_H}{n_2\mu_0}\tan\theta_2}$$

$$\Rightarrow \frac{R_1}{R_2} = \frac{n_2\tan 30^0}{n_1\tan 60^0}$$

$$\Rightarrow \frac{3}{1} = \frac{n_2}{n_1}.\frac{\sqrt{3}}{\sqrt{3}} \qquad \left(\because I = \frac{V}{R}\right)$$

$$\Rightarrow \frac{n_1}{n_2} = \frac{1}{3}$$

**22) Radii of curvature of a converging lens are in the ratio 1:2. Its focal length is 6 cm and refractive index is 1.5. Then its radii of curvature are ........... respectively.**

(a) 9 cm and 18 cm (b) 6 cm and 12 cm
(c) 3 cm and 6 cm (d) 4.5 cm and 9 cm

**Ans:- (d)**

Expln– Given, $\frac{R_1}{R_2} = \frac{1}{2}$, $f = 6\,cm$ & $\mu = 1.5$

Let $R_1 = R$ and $R_2 = 2R$

We know the focal length of converging lens By using relation $\frac{1}{f} = (\mu - 1)\left[\frac{1}{R_1} + \frac{1}{R_2}\right]$

Substituting all the values, we get R = 4.5 cm

$\therefore R_1 = 4.5$ cm and $R_2 = 2 \times 4.5 = 9$ cm

**23) Two mental spheres of radii 0.01 m and 0.02 m are given a charge of 15 mC and 45 mC respectively. They are then connected by a wire. The final charge on the first sphere is ......... $\times 10^{-3}$C.**

(a) 40 (b) 30
(c) 20 (d) 10

**Ans:- (c)**

**Expln-** When two metal spheres are joined by a wire, charge flows from one at higher potential to the other at lower potential, till they acquire the same potential. $\therefore V_1 = V_2$

$$\frac{q_1}{4\pi\varepsilon_0 r_1} = \frac{q_2}{4\pi\varepsilon_0 r_2}$$

$$\Rightarrow \frac{r_1}{r_2} = \frac{q_1}{q_2} = \frac{15\,mC}{45\,mC} = \frac{1}{3}$$

Final charge on first sphere,

$$q_1 = \frac{1}{3}(q_1 + q_2) = \frac{1}{3} \times 60 = 20\,mC$$

24) **Consider the diameter of a spherical object being measured with the help of a Vernier callipers. Suppose its 10 Vernier Scale Divisions (V.S.D.) are equal to its 9 Main Scale Divisions (M.S.D.). The least division in the M.S. is 0.1 cm and the zero of V.S. is at x = 0.1 cm when the jaws of Vernier callipers are closed.**

**If the main scale reading for the diameter is M = 5 cm and the number of coinciding vernier division is 8, the measured diameter after zero error correction, is**

(a) 5.00 cm (b) 5.18 cm
(c) 5.08 cm (d) 4.98 cm **Ans (d)**

**Expln:-** Least count = 1MSD – 1VSD

$$= 1\,MSD - \frac{9}{10}MSD = \frac{1}{10}MSD$$

$$= \frac{1}{10} \times 0.1\,cm = 0.01\,cm$$

Zero error = +0.1cm
Main scale reading = 5 cm
Vernier scale reading = 8 × 0.01 = 0.08 cm
Final measurement of diameter=5+0.08–0.14.98 cm

### CHEMISTRY

*MULTIPLE CHOICE QUESTIONS*

**71) Which of the following solids is not an electrical conductor?**

i) Mg (s) ii) TiO (s) (....Contd)
iii) $I_2$ (s) iv) $H_2O$ (s)

**Ans Code:-**
a) (i) only b) (ii) only
c) (iii) and (iv) only d) (ii), (iii) and (iv)

**Ans:-c**


**72) Bond angle in $PH_4^+$ is more than that of $PH_3$. This is because:**

a) $PH_3$ has a planar trigonal structure
b) Hybridisation of P changes when $PH_3$ is converted to $PH_4^+$
c) Lone pair-bond pair repulsion exists in $PH_3$
d) $PH_4^+$ has a square planar structure


**Ans: (c)**

**Expln:-** The hydrides of group 15, 16 below the 3rd period, follows Drago's rule. The rule states that due to a large energy difference between the atomic orbitals, these compounds do not exhibit hybridization. Thus, $PH_3$ will not exhibit hybridization and here the bond formation takes place due to the overlap of pure p-orbitals and s-orbitals. $PH_3$ has a lone pair on the central P atom, which is absent in $PH_4^+$. Thus in $PH_3$, there will be bond pair – lone pair repulsion and this is the reason why the bond angle in $PH_3$ is less than that of $PH_4^+$.

**73)**




**Soln: (a)**




**74) If 3.01 × $10^{20}$ molecules are removed from 98 mg of $H_2SO_4$, then the number of moles of $H_2SO_4$ left are**

a) $0.1 \times 10^{-3}$ mol b) $0.5 \times 10^{-3}$ mol
c) $1.66 \times 10^{-3}$ mol d) $9.95 \times 10^{-2}$ mol

**Ans: (b)**

**Expln:-** Number of moles of $H_2SO_4$ left = N / Na
Now, finding N For 98 gm of $H_2SO_4$ the molecules are $6.02 \times 10^{20}$

$H_2SO_4$ left = $6.02 \times 10^{20} - 3.01 \times 10^{20} = 3.01 \times 10^{20}$

Number of moles of $H_2SO_4$ left = N / NA
$= 3.01 \times 10^{20} / 6.02 \times 10^{23}$
$= 0.5 \times 10^{-3}$ mol

**75) The correct set of quantum number for the unpaired electrons of the chlorine atom is**

a) 2, 0, 0, + 1 / 2 b) 2, 1, – 1 , + 1 / 2
c) 3, 1 , 1, ± 1 / 2 d) 3, 0, 0, ± 1 / 2

**Ans: (c)**

**Expln:-** For finding out unpaired electron of chlorine atom we have to find electronic configuration $Cl = 1S^2\,2S^2\,2P^6\,3S^2\,3P^5$

n = 3, l = 1, m = 1, s = ± 1 / 2

76) $A_{(g)} \xrightarrow{\Delta} P_{(g)} + Q_{(g)} + R_{(g)}$, Follows first order kinetics with **a half-life of 69.3s at $500^0$C. Starting from the gas 'A' enclosed in a container at $500^0$C and at a pressure of 0.4 atm, the total pressure of the system after 230 s will be....................**

(a) 1.15 atm (b) 1.32 atm
(c) 1.22 atm (d) 1.12 atm

**Ans: d:**

$t_{1/2} = 69.3s$, t = 230 s, a = 0.4 atm

For first order reaction,

$$k = \frac{0.693}{t_{1/2}} = \frac{0.693}{69.3} = 0.01s^{-1}$$

$$k = \frac{2.303}{t}\log\frac{a}{a-x} = \frac{2.303}{230}\log\frac{0.4}{0.4-x}$$

$$0.01 = \frac{2.303}{230}\log\frac{.4}{0.4-x} = 0.01\log\frac{0.4}{0.4-x}$$

$$\frac{0.01}{0.01} = \log\frac{0.4}{0.4-x} \Rightarrow 1 = \text{loog}\frac{.4}{0.4-x}$$

$$\text{Anti}\log\text{ of }1 = \frac{0.4}{0.4-x} \Rightarrow 10 = \frac{0.4}{0.4-x}$$

$$x = 0.36$$

for the given reaction,

| | $A_{(g)}$ $\xrightarrow{\Delta}$ | $P_{(g)}$ + | $Q_{(g)}$ + | $R_{(g)}$ |
|---|---|---|---|---|
| Initial | 0.4 | 0 | 0 | 0 |
| Final | 0.4–0.36 | 0.36 | 0.36 | 0.36 |

Total pressure
= (0.4 – 0.36) + (3 × 0.36) = 1.12 atm

**77) Graphite is a good conductor of electricity due to the presence of ................**

a) long pair of electrons
b) cations
c) free valence electrons
d) anions

**Ans:-C**

**78) Which of the following oxides behave as conductor or insulator depending upon temperature?**

a) TiO b) $SiO_2$
c) $TiO_3$ d) MgO

**Ans:- C**

# ಸಿಇಟಿ: ಸಿ.ಸಿ.ಟಿ.ವಿ ಕ್ಯಾಮೆರಾ ನಿಗಾ

## ನಾಳೆಯಿಂದ ಪರೀಕ್ಷೆ ಆರಂಭ, 3.30 ಲಕ್ಷ ಅಭ್ಯರ್ಥಿಗಳು ನೋಂದಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಏ.23 ಮತ್ತು 24ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸುತ್ತಿದ್ದು, ಪರೀಕ್ಷಾ ಅಕ್ರಮಗಳ ತಡೆಗೆ 745 ಪರೀಕ್ಷಾ ಕೇಂದ್ರಗಳಲ್ಲಿ 15,265 ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ.

ಏ.23 ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ ಏ.24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿವೆ. ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏ.22ರಂದು ಕನ್ನಡ ಭಾಷಾ ಪರೀಕ್ಷೆ ಬೆಂಗಳೂರು, ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಒಟ್ಟು ಐದು ಕೇಂದ್ರಗಳಲ್ಲಿ ಆಯೋಜಿಸಲಾಗಿದೆ.

‘ಪರೀಕ್ಷಾ ಅಕ್ರಮಗಳನ್ನು ತಡೆಯಲು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮೇಲುಸ್ತುವಾರಿ ನಡೆಸಲಿದ್ದಾರೆ. ಸೂಕ್ಷ್ಮ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಿದ್ದು, ಅಕ್ರಮಗಳಿಗೆ ಅವಕಾಶ ಇಲ್ಲದಂತೆ ನಿಗಾ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬೆಂಗಳೂರಿನ 163 ಕೇಂದ್ರಗಳಲ್ಲಿ ಅತಿ ಹೆಚ್ಚು ಅಂದರೆ 77,604 ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಕೆಇಎ ಕಚೇರಿಯಲ್ಲಿ ನಿಯಂತ್ರಣ ಕೇಂದ್ರ ಸ್ಥಾಪಿಸಲಾಗಿದೆ’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ.

**ಎರಡು ಗಂಟೆ ಮೊದಲು ತಪಾಸಣೆ:** ಅಭ್ಯರ್ಥಿಗಳನ್ನು ತಪಾಸಣೆ ಮಾಡಿಯೇ ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ. ಕನಿಷ್ಠ 2 ಗಂಟೆ ಮುಂಚಿತವಾಗಿ ಅವರು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ಅಭ್ಯರ್ಥಿಯ ಮುಖ ಚಹರೆ ಮತ್ತು ಕ್ಯೂಆರ್ ಕೋಡ್ ವ್ಯವಸ್ಥೆ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗುತ್ತದೆ. ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಪಡೆಯುವಾಗಲೂ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಲಾಗುತ್ತದೆ. ನಕಲಿ ಅಭ್ಯರ್ಥಿಗಳಿಗೆ ಕಡಿವಾಣ ಹಾಕಲಾಗಿದೆ. ಅಂಗವಿಕಲ ಅಭ್ಯರ್ಥಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ಶ್ರವಣ ಸಾಧನ ಬಳಸಿಕೊಂಡು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತದೆ ಎಂದಿದ್ದಾರೆ.

### ಅಂಕಿ ಅಂಶಗಳು

**3,30,479** ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳು

**1,44,380** ಬಾಲಕರು

**1,86,099** ಬಾಲಕಿಯರು

**970** ಅಂಗವಿಕಲ ಅಭ್ಯರ್ಥಿಗಳು

**745** ಪರೀಕ್ಷಾ ಕೇಂದ್ರಗಳು

### ವಸ್ತ್ರ ಸಂಹಿತೆ



- ಬಾಲಕರು, ಬಾಲಕಿಯರು ಅರ್ಧ ತೋಳಿನ ಬಟ್ಟೆ ಧರಿಸಬೇಕು
- ಬಾಲಕರು ಕಡಿಮೆ ಜೇಬುಗಳಿರುವ ಸರಳ ಪ್ಯಾಂಟ್ ಧರಿಸಬೇಕು. ಕುರ್ತಾ, ಪೈಜಾಮ, ಜೀನ್ಸ್ ಪ್ಯಾಂಟ್‌ಗಳಿಗೆ ಅವಕಾಶ ಇಲ್ಲ

### ಯಾವುದೆಲ್ಲ ನಿಷೇಧ

ಶೂ, ಮೊಬೈಲ್, ಬ್ಲೂಟೂತ್, ಇಯರ್ ಫೋನ್, ಮೈಕ್ರೊ ಫೋನ್ ಮತ್ತಿತರ ಎಲೆಕ್ಟ್ರಾನಿಕ್ ಸಾಮಗ್ರಿ

### ಪಿಯು ಪರೀಕ್ಷೆ–2 ಅಂಕ ಪರಿಗಣನೆ

ದ್ವಿತೀಯ ಪಿಯು ಮೊದಲ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿರುವ ಅಥವಾ ಅನುತ್ತೀರ್ಣರಾದವರೂ ಸಿಇಟಿ ಬರೆಯಬಹುದು. ಪಿಯು ಪರೀಕ್ಷೆ–2ರ ಅಂಕಗಳನ್ನು ಸಿಇಟಿಗೆ ಪರಿಗಣಿಸಲಾಗುವುದು ಎಂದು ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

ಪರೀಕ್ಷೆ–2ರಲ್ಲಿ ಫಲಿತಾಂಶ ಉತ್ತಮ ಮಾಡಿಕೊಳ್ಳಲು, ತೇರ್ಗಡೆಯಾಗಲು ಅವಕಾಶ ಇರುವ ಕಾರಣ ಯಾರೂ ಸಿಇಟಿ ಬರೆಯುವುದನ್ನು ತಪ್ಪಿಸಿಕೊಳ್ಳಬಾರದು. ಶುಲ್ಕ ಪಾವತಿಸಿರುವ ಎಲ್ಲರೂ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆ ಬರೆಯಬೇಕು ಎಂದು ಸಲಹೆ ನೀಡಿದ್ದಾರೆ.

### ತಪ್ಪಿಲ್ಲದೆ ಒಎಂಆರ್ ಭರ್ತಿ

ಒಎಂಆರ್ ಶೀಟ್‌ನಲ್ಲಿ ಅಭ್ಯರ್ಥಿಗಳು ಸ್ವವಿವರಗಳನ್ನು ತಪ್ಪಿಲ್ಲದೆ ದಾಖಲಿಸಬೇಕು. ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಪ್ರಶ್ನೆ ಪತ್ರಿಕೆಯ ವರ್ಷನ್ ಕೋಡ್ ಮತ್ತು ಪ್ರಶ್ನೆ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸಿ, ಸಂಬಂಧಿಸಿದ ವೃತ್ತಗಳನ್ನು ಶೇಡ್ ಮಾಡಬೇಕು ಎಂದು ಪ್ರಸನ್ನ ಹೇಳಿದ್ದಾರೆ.

ಹಿಂದೆ ಈ ಮಾಹಿತಿ ಕೂಡ ಸರಿಯಾಗಿ ಭರ್ತಿ ಮಾಡದಿರುವ ಕಾರಣ ಫಲಿತಾಂಶ ಪ್ರಕಟಣೆಗೂ ಸಮಸ್ಯೆ ಆಗಿತ್ತು. ಹೀಗಾಗಿ ಅಭ್ಯರ್ಥಿಗಳು ಎಚ್ಚರವಹಿಸಬೇಕು. ಅಭ್ಯಾಸ ಮಾಡಲಿ ಎನ್ನುವ ಕಾರಣಕ್ಕೆ ಕರಡು ಒಎಂಆರ್ ಶೀಟ್ ಕೂಡ ಪ್ರವೇಶ ಪತ್ರದ ಜತೆ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಅದನ್ನು ಅಭ್ಯಾಸ ಮಾಡುವ ಮೂಲಕ ಅನಗತ್ಯ ತಪ್ಪುಗಳನ್ನು ತಡೆಯಬೇಕು ಎಂದು ಸಲಹೆ ನೀಡಿದ್ದಾರೆ.

# 4.67 ಕೋಟಿ ಮತದಾರರ ವಿವರ ಹೋಲಿಕೆ ಪೂರ್ಣ

• ಜಯಸಿಂಹ ಆರ್.

**ಬೆಂಗಳೂರು:** ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಪೂರ್ವಭಾವಿಯಾಗಿ ರಾಜ್ಯದಲ್ಲಿ ಈವರೆಗೆ 4.67 ಕೋಟಿ ಮತದಾರರ ವಿವರಗಳನ್ನು ಹೋಲಿಸಿ ನೋಡಲಾಗಿದೆ (ಮ್ಯಾಪಿಂಗ್). ಇನ್ನೂ ಸುಮಾರು 90 ಲಕ್ಷ ಮತದಾರರ ವಿವರ ಮ್ಯಾಪಿಂಗ್ ಪ್ರಕ್ರಿಯೆ ಬಾಕಿ ಇದೆ.

2025ರ ಮತದಾರರ ಪಟ್ಟಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 5.57 ಕೋಟಿ ಮತದಾರರಿದ್ದಾರೆ. ಎಸ್‌ಐಆರ್ ಪೂರ್ವಭಾವಿ ಪ್ರಕ್ರಿಯೆಯಲ್ಲಿ ಶೇ 84.08ರಷ್ಟು ಮತದಾರರ ವಿವರದ ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ.

‘ಈ ಪ್ರಕ್ರಿಯೆಯ ಭಾಗವಾಗಿ 2025ರ ಮತದಾರರ ಪಟ್ಟಿಯಲ್ಲಿ ಇರುವವರ ವಿವರಗಳನ್ನು 2002ರ ಮತದಾರರ ಪಟ್ಟಿಯಲ್ಲಿ ವಿವರಗಳೊಂದಿಗೆ ಹೋಲಿಸಿ ನೋಡಲಾಗಿದೆ. 2002ರ ಮತದಾರರ ಪಟ್ಟಿಯಲ್ಲಿ 3.24 ಕೋಟಿ ಮತದಾರರು ಇದ್ದರು. 2025ರ ಪಟ್ಟಿಯಲ್ಲಿ ಇರುವವರ ಪೈಕಿ, 2002ರ ಮತದಾರರ ಪಟ್ಟಿಯಲ್ಲಿ 2.24 ಕೋಟಿ ಮತದಾರರ ವಿವರಗಳು ದೊರೆತಿವೆ’ ಎಂದು ಜಿಬಿಎ ಪಾಲಿಕೆಗಳ ವ್ಯಾಪ್ತಿಯಲ್ಲಿ ಮ್ಯಾಪಿಂಗ್ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಿರುವ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘2025ರ ಮತದಾರರ ಪಟ್ಟಿಯಲ್ಲಿ ಇರುವವರ ಪೋಷಕರ ವಿವರಗಳನ್ನು ಎರಡನೇ ಹಂತದಲ್ಲಿ ಪರಿಶೀಲಿಸಲಾಗಿದೆ. ಈ ಹಂತದ ನಂತರ 2.43 ಕೋಟಿ ಮತದಾರರ ವಿವರಗಳನ್ನು ಮ್ಯಾಪಿಂಗ್ ಮಾಡಲಾಗಿದೆ. ಈಗ ಒಂದೇ ತೆರನಾದ ಹೆಸರು, ಪೋಷಕರ ಹೆಸರು ಮತ್ತು ಜನ್ಮದಿನಾಂಕ ಇರುವವರ ವಿವರಗಳನ್ನು ಪರಿಶೀಲಿಸಲಾಗುತ್ತಿದೆ. ಅವೆಲ್ಲಾ ಒಬ್ಬರಿಗೇ ಸೇರಿದ ಮತದಾರರ ಚೀಟಿಯೇ ಅಥವಾ ಬೇರೆ–ಬೇರೆ ವ್ಯಕ್ತಿಗಳಿಗೆ ಸೇರಿದ ಮತದಾರರ ಚೀಟಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ’ ಎಂದು ವಿವರಿಸಿದರು.

**ನೋಟಿಸ್ ನೀಡಿಲ್ಲ:** ಮತದಾರರ ವಿವರಗಳನ್ನು ಪರಸ್ಪರ ಹೋಲಿಸಿ ನೋಡಿ, ಮ್ಯಾಪಿಂಗ್ ಮಾಡುವ ಹೊಣೆಯನ್ನು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ವಹಿಸಲಾಗಿದೆ. ಅವರೇ ಆ ಕೆಲಸವನ್ನು ಮಾಡುತ್ತಿದ್ದಾರೆ. ಈ ಸಲುವಾಗಿ ಯಾವ ಮತದಾರರಿಗೂ ನೋಟಿಸ್ ನೀಡಿಲ್ಲ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಮೂಲಗಳು ಹೇಳಿವೆ.

### ಜನಗಣತಿಯಿಂದ ವಿಳಂಬ..?



ಜನಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸುವವರಿಗೆ ತರಬೇತಿ ಮತ್ತು ಈಗ ಮನೆಗಣತಿ ಕಾರ್ಯ ಆರಂಭವಾಗಿರುವ ಕಾರಣಕ್ಕೆ ಎಸ್‌ಐಆರ್ ಪೂರ್ವಭಾವಿ ಮ್ಯಾಪಿಂಗ್ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದರು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಅಧಿಕಾರಿ ಮತ್ತು ಸಿಬ್ಬಂದಿಯೇ ಜನಗಣತಿಗೂ ನಿಯೋಜನೆ ಮಾಡಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಾಲಿಕೆಗಳ ವ್ಯಾಪ್ತಿಯ ಹಲವು ವಾರ್ಡ್‌ಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಏಪ್ರಿಲ್ ಮೊದಲ ವಾರದಿಂದಲೇ ಎಸ್‌ಐಆರ್ ಪೂರ್ವಭಾವಿ ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿಲ್ಲ. ಮತಗಟ್ಟೆ ಮಟ್ಟದ ಅಧಿಕಾರಿಗಳನ್ನೂ (ಬಿಎಲ್‌ಒ) ಜನಗಣತಿ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದ್ದು, ಈ ಸಿಬ್ಬಂದಿ ಮನೆಗಣತಿ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಅಧಿಕಾರಿ ವಿವರಿಸಿದರು.

ಎಸ್‌ಐಆರ್ ಪೂರ್ವಭಾವಿ ಮ್ಯಾಪಿಂಗ್‌ನ ದತ್ತಾಂಶಗಳೂ ಈ ಅಂಶವನ್ನು ಪುಷ್ಟೀಕರಿಸುತ್ತವೆ. ಮಾರ್ಚ್ 26ರ ಗುರುವಾರದ ವೇಳೆಗೆ 4.46 ಕೋಟಿ ಮತದಾರರ (ಶೇ 80ರಷ್ಟು) ವಿವರದ ಮ್ಯಾಪಿಂಗ್ ಪೂರ್ಣಗೊಂಡಿತ್ತು. ಏಪ್ರಿಲ್ 2ರ ವೇಳೆಗೆ 4.62 ಕೋಟಿ (ಶೇ 83ರಷ್ಟು) ಮತದಾರರ ಮ್ಯಾಪಿಂಗ್ ಕೆಲಸ ಮುಗಿಸಲಾಗಿತ್ತು. ಆದರೆ ನಂತರದ ಸುಮಾರು 16 ದಿನಗಳಲ್ಲಿ ಇನ್ನೂ ಸುಮಾರು 5 ಲಕ್ಷ ಮತದಾರರ ವಿವರಗಳನ್ನಷ್ಟೇ ಮ್ಯಾಪಿಂಗ್ ಮಾಡಲು ಸಾಧ್ಯವಾಗಿದೆ.

‘ಏಪ್ರಿಲ್ ತಿಂಗಳಿನಲ್ಲಿ ಸಾಲು ಸಾಲು ರಜೆ ಬಂದಿದ್ದು ಮತ್ತು ಒಂದೇ ಸ್ವರೂಪದ ವಿವರ ಇರುವ ಹಲವು ಮತದಾರರ ಚೀಟಿಗಳನ್ನು ಪರಸ್ಪರ ಹೋಲಿಸುವ ಕೆಲಸ ನಡೆಯುತ್ತಿರುವ ಕಾರಣದಿಂದ ತುಸು ವಿಳಂಬವಾಗುತ್ತಿದೆ’ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

### ಪ್ರತಿರೋಧ ಸಮಾವೇಶ

‘ಎಸ್‌ಐಆರ್ ಮೂಲಕ ದೇಶದ ಮತದಾರರ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಅದನ್ನು ಖಂಡಿಸಿ ಇದೇ 23ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿರೋಧ ಸಮಾವೇಶ ಆಯೋಜಿಸಲಾಗಿದೆ’ ಎಂದು ಎಸ್‌ಐಆರ್ ವಿರೋಧಿ ಒಕ್ಕೂಟದ ಜೆ.ಎಂ.ವೀರಸಂಗಯ್ಯ ತಿಳಿಸಿದರು.

ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿರುವ ಅವರು, ‘ ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ವಿರೋಧಿ ಹೋರಾಟ ನಡೆಸುತ್ತಿರುವ ‘ವೋಟರ್ ಅಧಿಕಾರ್ ಮಂಚ್’ನ ಶೇಕ್ ಫರೀದ್‌ಉಲ್ಲಾ ಇಸ್ಲಾಂ ಅವರು 23ರ ಪ್ರತಿರೋಧ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ’ ಎಂದಿದ್ದಾರೆ. ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಕಾಂಗ್ರೆಸ್, ಸಿಪಿಎಂ ಮತ್ತು ಸಿಪಿಐ ಪಕ್ಷದ ನಾಯಕರು ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

### ಚಿಟಿಕೆ ಸುದ್ದಿ

## ಜೆಇಇ ಮೇನ್ಸ್ ಅಂಗವಿಕಲರ ಕೋಟಾ ವಿಶ್ವರಾಜ ಪ್ರಥಮ



ವಿಶ್ವರಾಜ

**ಭಾಲ್ಕಿ (ಬೀದರ್ ಜಿಲ್ಲೆ):** ತಾಲ್ಲೂಕಿನ ಕರಡ್ಯಾಳದ ಶ್ರೀಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ವಿಶ್ವರಾಜ ಅಶೋಕ ಮರಪಳ್ಳಿ ಅವರು ಜೆಇಇ ಮೇನ್ಸ್ ಪರೀಕ್ಷೆಯಲ್ಲಿ 90.09 ಪರ್ಸೆಂಟೈಲ್ ಪಡೆದು ಅಂಗವಿಕಲರ ಕೋಟಾದಲ್ಲಿ ರಾಷ್ಟ್ರ ಮಟ್ಟದಲ್ಲಿ ಮೊದಲ ರ್‍ಯಾಂಕ್ ಗಳಿಸಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

‘ಉಪನ್ಯಾಸಕರ ಪರಿಣಾಮಕಾರಿ ಪಾಠ ಬೋಧನೆ, ಮಾರ್ಗದರ್ಶನದಿಂದ ಅಂಕ ಗಳಿಸಲು ಸಾಧ್ಯವಾಗಿದೆ. ಐಐಟಿ ಸೇರುವ ಗುರಿ ಇದೆ’ ಎಂದು ವಿಶ್ವರಾಜ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ಇವರು ಹುಮನಾಬಾದ್ ತಾಲ್ಲೂಕಿನ ಕಬೀರಾಬಾದ್ ವಾಡಿ ಗ್ರಾಮದವರು.

## ಅಮಾನತು ಆದೇಶ ವಾಪಸ್: ಜಾರಕಿಹೊಳಿ ಸುಳಿವು

**ಪಿರಿಯಾಪಟ್ಟಣ:** ‘ದಾವಣಗೆರೆ ಉಪ ಚುನಾವಣೆ ಫಲಿತಾಂಶದ ಬಳಿಕ ಮುಸ್ಲಿಂ ಮುಖಂಡರ ಅಮಾನತು ಆದೇಶವನ್ನು ಹಿಂಪಡೆಯುವ ಸಾಧ್ಯತೆ ಇದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ತಾಲ್ಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ‘ಜಬ್ಬಾರ್ ಸೇರಿ ಅಲ್ಪಸಂಖ್ಯಾತ ನಾಯಕರ ವಿರುದ್ಧ ಕೈಗೊಂಡಿರುವ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರಲಿದೆ’ ಎಂದು ಅಭಿಪ್ರಾಯಪಟ್ಟರು.

‘ಹಿಂದೆಯೂ ಹೀಗೆ ಅಮಾನತು ಆಗಿದ್ದವರು ಪಕ್ಷಕ್ಕೆ ಮರಳಿದ್ದಾರೆ. ಜಬ್ಬಾರ್ ಬಿಟ್ಟು ಉಳಿದ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಉಪ ಚುನಾವಣೆ ವೇಳೆ ಪಕ್ಷ ವಿರೋಧಿ ಚಟುವಟಿಕೆ ನಡೆದಿದೆಯೋ ಇಲ್ಲವೋ ಎಂದು ಫಲಿತಾಂಶದ ಬಳಿಕ ಚರ್ಚಿಸುತ್ತೇವೆ’ ಎಂದರು.

‘ಎಸ್‌ಡಿಪಿಐಗೆ ಕಾಂಗ್ರೆಸ್‌ನ ಕೆಲವು ಮುಖಂಡರಿಂದಲೇ ಹಣದ ನೆರವು ನೀಡಲಾಗಿದೆ’ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ ‘ಈ ಬಗ್ಗೆ ಮಾಹಿತಿ ಇಲ್ಲ’ ಎಂದರು.

## ವಿದ್ಯುತ್ ಸ್ಪರ್ಶ: ಇಬ್ಬರು ಕಾರ್ಮಿಕರು ಸಾವು

**ಸವದತ್ತಿ (ಬೆಳಗಾವಿ ಜಿಲ್ಲೆ):** ತಾಲ್ಲೂಕಿನ ನವಿಲುತೀರ್ಥ ಜಲಾಶಯ ವ್ಯಾಪ್ತಿಯಲ್ಲಿ ಮಂಗಳವಾರ ಕಲ್ಲು ಗಣಿಗಾರಿಕೆ ವೇಳೆ ಹಿಟಾಚಿ ಯಂತ್ರಕ್ಕೆ ವಿದ್ಯುತ್ ಸ್ಪರ್ಶವಾಗಿ ಕಾರ್ಮಿಕರಾದ ಜಾರ್ಖಂಡದ ರವಿಕುಮಾರಸಿಂಗ್ ದೂಪಲಾಲಸಿಂಗ್ ಸಿಂಗ್ (18) ಮತ್ತು ಸುಭಾಸಕುಮಾರ ರೂಪೇನ್‌ಸಿಂಗ್ ಸಿಂಗ್ (18) ಮೃತಪಟ್ಟಿದ್ದಾರೆ.

‘ಗಣಿಗಾರಿಕೆ ಪ್ರದೇಶದಲ್ಲಿ 11 ಕೆ.ವಿ ವಿದ್ಯುತ್ ಪ್ರವಹಿಸುವ ತಂತಿ ಎಳೆಯಲಾಗಿದೆ. ಸಮೀಪವೇ ಹಿಟಾಚಿ ಬಳಸಲಾಗುತ್ತಿತ್ತು. ತಂತಿಯ ವಿದ್ಯುತ್, ಯಂತ್ರಕ್ಕೆ ತಾಗಿ ಮೃತಪಟ್ಟಿದ್ದಾರೆ. ಇಬ್ಬರೂ 15 ದಿನದ ಹಿಂದೆ ಕೆಲಸ ಹುಡುಕಿಕೊಂಡು ಬಂದಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

### ಸತ್ಯ ತಿಳಿಯಲು ತನಿಖೆ: ಕಾಂಗ್ರೆಸ್ ಹಿರಿಯ ಶಾಸಕ ಕೆ.ಎನ್‌.ರಾಜಣ್ಣ ಹೇಳಿಕೆ

# ಸಿ.ಎಂ ಮೌನ: ಮಾಟ – ಮಂತ್ರ ಶಂಕೆ

ಪ್ರಜಾವಾಣಿ ವಾರ್ತೆ



ಕೆ.ಎನ್‌.ರಾಜಣ್ಣ

**ಬೆಂಗಳೂರು:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ತೆಗೆದುಕೊಂಡ ಕ್ರಮದ ಪರ–ವಿರುದ್ಧ ವಾಕ್ಸಮರ ಮತ್ತೆ ಮುಂದುವರಿದಿದೆ.

ತಮ್ಮ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಅವರು ಸ್ಥಾನ ತ್ಯಜಿಸಬೇಕಾಗಿ ಬಂದರೂ ಈ ಕುರಿತು ಪ್ರಶ್ನಿಸದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೌನವನ್ನು ಕಾಂಗ್ರೆಸ್‌ನ ಹಿರಿಯ ಶಾಸಕ ಕೆ.ಎನ್.ರಾಜಣ್ಣ ಪ್ರಶ್ನಿಸಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಏಕೆ ಇಷ್ಟೊಂದು ಅಸಹಾಯಕರಾಗಿದ್ದಾರೆ ಎನ್ನುವುದು ಗೊತ್ತಿಲ್ಲ. ಯಾರಾದರೂ ಅವರಿಗೆ ಮಾಟ–ಮಂತ್ರ ಮಾಡಿಸಿರಬಹುದು. ಈ ಕುರಿತು ತನಿಖೆ ಮಾಡಿಸಲು ಚಿಂತನೆ ನಡೆಸಿದ್ದೇನೆ’ ಎಂದರು.

‘ನಾನು ಅಥವಾ ಸಿದ್ದರಾಮಯ್ಯ ಮಾಟ–ಮಂತ್ರದಲ್ಲಿ ನಂಬಿಕೆ ಇಟ್ಟಿಲ್ಲ. ನನ್ನ ಮೇಲೆಯೂ ಹಿಂದೆ ಒಮ್ಮೆ ಮಾಟ–ಮಂತ್ರ ಮಾಡಿದ್ದರು. ಚುನಾವಣೆಗೆ ನಿಂತಾಗೆಲ್ಲಾ ಮನೆ ಸುತ್ತ ಹಳದಿ ನೀರು, ಏನೇನೋ ಹಾಕಿ ಹೋಗ್ತಿದ್ರು. ಸಿದ್ದರಾಮಯ್ಯ ಅವರ ಮೌನ ನೋಡಿದರೆ ಯಾರಾದರೂ ಮಾಟ ಮಾಡಿಸಿರಬಹುದಾ ಎಂಬ ಅನುಮಾನ ಬರುತ್ತದೆ’ ಎಂದರು.

ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂಬ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಜಮೀರ್ ಅಹಮದ್, ‘ಸಿದ್ದರಾಮಯ್ಯ ಈಗ ಮೌನವಾಗಿರಬಹುದು. ಸಮಯ ಬಂದಾಗ ಮಾತನಾಡುತ್ತಾರೆ’ ಎಂದರು.

### ‘ಪ್ರಚಾರ ನಡೆಸದವರ ವಿರುದ್ಧವೂ ಕ್ರಮ ಅಗತ್ಯ’

ದಾವಣಗೆರೆ ಉಪಚುನಾವಣೆ ನಂತರದ ಬೆಳವಣಿಗೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಮುಸ್ಲಿಂ ವಿರೋಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಇಂತಹ ಆರೋಪ ಮಾಡಿದ, ಪಕ್ಷದ ಪರವಾಗಿ ಕೆಲಸ ಮಾಡದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷರಾದ ಮೆಹಬೂಬ್ ಸೌದಾಗರ್, ವೈ.ಸೈಯದ್ ಅಹಮದ್, ಮುಜಾಮಿಲ್ ಹುಸೈನ್, ಒಬೇದುಲ್ಲಾ ಶರೀಫ್ ಸೇರಿದಂತೆ ಹಲವು ಪದಾಧಿಕಾರಿಗಳು ಒತ್ತಾಯಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ನಡೆಸದ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ಇಂತಹ ಧೋರಣೆಯನ್ನು ಪಕ್ಷದ ನಾಯಕರು ಸಹಿಸಬಾರದು ಎಂದರು.

ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡುವಂತೆ ಕೋರಿದ್ದು ತಪ್ಪಲ್ಲ. ಆದರೆ, ಯೋಗ್ಯ ಮುಸ್ಲಿಂ ನಾಯಕರಿಗೆ ಟಿಕೆಟ್ ನೀಡುವಂತೆ ಕೇಳುವಲ್ಲಿ ಕೆಲವರು ವಿಫಲರಾದರು. ಅಬ್ದುಲ್ ಜಬ್ಬಾರ್ ಒಬ್ಬರನ್ನೇ ಮುಂದಿಟ್ಟುಕೊಂಡು ಟಿಕೆಟ್‌ಗೆ ಬೇಡಿಕೆ ಇಟ್ಟರು. ಯೋಗ್ಯ ಅಭ್ಯರ್ಥಿಗಳನ್ನು ಕಡೆಗಣಿಸಿದರು. ಕೊನೆಗೆ ಸಮರ್ಥ್ ಮಲ್ಲಿಕಾರ್ಜುನ ಅವರನ್ನು ಕಣಕ್ಕಿಳಿಸಲು ಪಕ್ಷ ತೀರ್ಮಾನಿಸಿದಾಗ ಎಲ್ಲ ವೈಮನಸ್ಸು ಬದಿಗಿಟ್ಟು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕಿತ್ತು. ಹಾಗೆ ಮಾಡದೆ ಕೆಲವರು ಪಕ್ಷವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ಮಾಡಿದರು ಎಂದು ದೂರಿದರು.

ಕೆಲ ಗುಂಪುಗಳು ಮುಸ್ಲಿಂ ಮತದಾರರನ್ನೇ ವಿಭಜನೆ ಮಾಡಿ, ಕಾಂಗ್ರೆಸ್ ಬೆಂಬಲಿಗರನ್ನು ಗೊಂದಲಕ್ಕೊಳಪಡಿಸುವ ಕೆಲಸ ಮಾಡಿದರು. ಪರೋಕ್ಷವಾಗಿ ಬಿಜೆಪಿಗೆ ಅನುಕೂಲವಾಗಿದೆ. ಹಾಗಾಗಿ, ಅಬ್ದುಲ್ ಜಬ್ಬಾರ್, ನಸೀರ್ ಅಹಮದ್ ಅವರ ಅಮಾನತು ಸರಿಯಾದ ನಿರ್ಧಾರ. ಒತ್ತಡ ತಂತ್ರಕ್ಕೆ ಪಕ್ಷದ ಹೈಕಮಾಂಡ್ ನಾಯಕರು ಮಣಿಯಬಾರದು ಎಂದರು.

### ‘ಹೇಳಿಕೆಯನ್ನು ಪಡೆಯಬೇಕಿತ್ತು’

ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹಮದ್ ವಿರುದ್ಧ ಕ್ರಮ ಕೈಗೊಳ್ಳುವ ಮೊದಲು ಕಾರಣ ಕೇಳಿ ನೋಟಿಸ್ ನೀಡಬೇಕಿತ್ತು ಎಂದು ವಸತಿ ಸಚಿವ ಜಮೀರ್ ಅಹಮದ್ ಹೇಳಿದರು.

ಆರೋಪ ಮಾಡಿದವರಿಂದ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಕ್ಕೆ ದಾಖಲೆ ಕೇಳಬೇಕಿತ್ತು ಎಂದರು.

**ಜೆಡಿಎಸ್ ಸೇರುತ್ತೇನೆ ಎಂಬುದು ಊಹಾಪೋಹ. ಕಾಂಗ್ರೆಸ್ ನನಗೇನೂ ಕಡಿಮೆ ಮಾಡಿಲ್ಲ**

**ಜಮೀರ್ ಅಹಮದ್,** ವಸತಿ ಸಚಿವ

# ಕೈ-ಕಾಲು ಕಟ್ಟಿ ಪ್ರಿಯಕರನ ಸುಟ್ಟಳು...

ಪ್ರಜಾವಾಣಿ ವಾರ್ತೆ



ಕಿರಣ್

**ಬೆಂಗಳೂರು:** ‘ವಿದೇಶಿ ಶೈಲಿ’ಯಲ್ಲಿ ಪ್ರೇಮ ನಿವೇದನೆ ಮಾಡುತ್ತೇನೆ ಎಂದು ನಂಬಿಸಿ ಕೈ–ಕಾಲು ಕಟ್ಟಿ ಪ್ರಿಯಕರನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿ ಕೊಲೆ ಮಾಡಿರುವ ಘಟನೆ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂಜನಾ ನಗರದಲ್ಲಿ ಮಂಗಳವಾರ ಮಧ್ಯಾಹ್ನ 2 ಗಂಟೆಯ ಸುಮಾರಿಗೆ ನಡೆದಿದೆ.

ಕಿರಣ್ (27) ಸಜೀವ ದಹನವಾದ ಯುವಕ. ಕೃತ್ಯ ಎಸಗಿದ ಮಾಗಡಿ ಮುಖ್ಯ ರಸ್ತೆಯ ಅಂಜನಾ ನಗರದ ನಿವಾಸಿ ಪ್ರೇಮಾ (27) ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ರಾಜಾಜಿ ನಗರದ ವಿ.ಐ ಸ್ಟೋರ್‌ನಲ್ಲಿ (ಟೆಲಿಕಾಂ ಸೇವಾ ಪೂರೈಕೆ ಸಂಸ್ಥೆ) ಕಿರಣ್ ಹಾಗೂ ಪ್ರೇಮಾ ಕೆಲಸ ಮಾಡುತ್ತಿದ್ದರು. ಇಬ್ಬರೂ ಪರಿಚಯವಾದ ಬಳಿಕ ಪ್ರೀತಿಸುತ್ತಿದ್ದರು.

‘ಮನೆಯಲ್ಲಿ ಯಾರೂ ಇಲ್ಲದ ವೇಳೆ ಕೃತ್ಯ ಎಸಗಲಾಗಿದೆ. ಪ್ರೇಮಿಗಳ ನಡುವೆ ಯಾವ ಕಾರಣಕ್ಕೆ ಗಲಾಟೆ ನಡೆದು, ಕೃತ್ಯ ಎಸಗಲಾಗಿದೆ, ಕೃತ್ಯದ ಹಿಂದೆ ಬೇರೆ ಯಾರಾದರೂ ಇದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಕಿರಣ್ ಇತ್ತೀಚೆಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂಬುದಾಗಿ ಭಾವಿಸಿದ್ದ ಯುವತಿ ಸೀಮೆಎಣ್ಣೆ ಸುರಿದು ಕೊಲೆ ಮಾಡಿದ್ದಾಳೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ಕಿರಣ್ ಅವರೇ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪೊಲೀಸರು ಶಂಕಿಸಿದ್ದರು. ತನಿಖೆ ಮುಂದುವರಿಸಿದಾಗ ಯುವತಿ ಕೃತ್ಯ ಬಯಲಾಯಿತು ಎಂದು ಮೂಲಗಳು ಹೇಳಿವೆ.

**ಮನೆಗೆ ಕರೆಸಿಕೊಂಡಿದ್ದ ಯುವತಿ:** ‘ಪ್ರೇಮಾ ಅವರ ತಾಯಿ ಹಾಗೂ ಸಹೋದರ ಮಂಗಳವಾರ ಬೆಳಿಗ್ಗೆಯೇ ಕೆಲಸಕ್ಕೆ ತೆರಳಿದ್ದರು. ಆಗ, ಕಿರಣ್‌ಗೆ ಕರೆ ಮಾಡಿದ್ದ ಯುವತಿ ಮನೆಗೆ ಬರುವಂತೆ ಕೋರಿಕೊಂಡಿದ್ದರು. ಕೆಲಸದ ನಿಮಿತ್ತ ನೆಲಮಂಗಲದತ್ತ ತೆರಳುತ್ತಿದ್ದ ಕಿರಣ್, ಯುವತಿಯ ಕೋರಿಕೆಯಂತೆ ಅಂಜನಾ ನಗರಕ್ಕೆ ವಾಪಸ್ ಬಂದಿದ್ದರು. ಮನೆಗೆ ಬಂದ ಪ್ರಿಯಕರನಿಗೆ ‘ವಿದೇಶಿ ಶೈಲಿ’ಯಲ್ಲಿ ಪ್ರೇಮ ನಿವೇದನೆ ಮಾಡುವುದಾಗಿ ನಂಬಿಸಿ ಕಣ್ಣಿಗೆ ಬಟ್ಟೆ ಹಾಗೂ ಕಾಲಿಗೆ ಹಗ್ಗ ಕಟ್ಟಿದ್ದರು. ಯಾಕಿಷ್ಟು ಬಿಗಿಯಾಗಿ ಹಗ್ಗ ಕಟ್ಟುತ್ತೀಯಾ ಎಂಬುದಾಗಿ ಕಿರಣ್ ಪ್ರಶ್ನಿಸಿದ್ದರು. ಆಗಲೂ ಇದು ವಿದೇಶಿ ಮಾದರಿ ಎಂಬುದಾಗಿ ಹೇಳಿ ಯುವತಿ ನಂಬಿಸಿದ್ದರು’ ಎಂದು ಮೂಲಗಳು ಹೇಳಿವೆ.

**ಮನೆಗೆ ಸೀಮೆಎಣ್ಣೆ ತಂದಿಟ್ಟುಕೊಂಡಿದ್ದ ಯುವತಿ:** ಪ್ರಿಯಕರನ ಕೊಲೆ ಮಾಡುವ ಉದ್ದೇಶದಿಂದ ಯುವತಿ ಮೊದಲೇ ಸೀಮೆಎಣ್ಣೆ ಖರೀದಿಸಿ ಮನೆಗೆ ತಂದಿಟ್ಟುಕೊಂಡಿದ್ದರು. ಹಗ್ಗ ಬಿಗಿದ ಮೇಲೆ ಪ್ರಿಯಕರನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದಾರೆ. ಯುವಕ ನರಳಾಡುತ್ತಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ಯುವತಿ ಚಿತ್ರೀಕರಿಸಿಕೊಂಡಿದ್ದಾರೆ. ಯುವತಿಯ ಮೊಬೈಲ್ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಪ್ರೀತಿಯಲ್ಲಿ ವೈಮನಸ್ಸು ಮೂಡಿತ್ತೇ? ಇದು ಪೂರ್ವನಿಯೋಜಿತ ಸಂಚೇ ಎಂಬುದರ ಕುರಿತು ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು. ಘಟನಾ ಸ್ಥಳಕ್ಕೆ ಎಸಿಪಿ ಅಶೋಕ್ ಮತ್ತು ಇನ್‌ಸ್ಪೆಕ್ಟರ್ ಭಾಸ್ಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಮುಖ್ಯಾಂಶಗಳು

- ಕಣ್ಣೆದುರೇ ಸುಟ್ಟು ಕರಕಲಾದ ಯುವಕ
- ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದ ಯುವತಿ
- ವಿದೇಶಿ ಶೈಲಿ ಪ್ರೇಮ ನಿವೇದನೆ ನೆಪ

### ಹೇಳಿಕೆಯಲ್ಲಿ ಗೊಂದಲ, ಕೃತ್ಯ ಬಯಲು

‘ನಾನು ಶೌಚಾಲಯಕ್ಕೆ ತೆರಳಿದ್ದೆ. ಆಗ ಜೋರು ಶಬ್ದ ಕೇಳಿಸಿತು. ಹೊರಗೆ ಬಂದೆ. ಅಷ್ಟರಲ್ಲಿ ಕಿರಣ್ ಬೆಂಕಿ ಹಚ್ಚಿಕೊಂಡಿದ್ದರು’ ಎಂಬುದಾಗಿ ಯುವತಿ ಹೇಳಿಕೆ ನೀಡಿದ್ದರು. ಯುವತಿಯ ಹೇಳಿಕೆಯಲ್ಲಿ ಗೊಂದಲ ಇತ್ತು. ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿದಾಗ ಕಿರಣ್ ಬೈಕ್‌ನಲ್ಲಿ ಬಂದಾಗ ಅವರ ಕೈಯಲ್ಲಿ ಯಾವುದೇ ಕ್ಯಾನ್ ಇರಲಿಲ್ಲ ಎಂಬುದು ಗೊತ್ತಾಯಿತು. ತಕ್ಷಣವೇ ಯುವತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

### ಕಾನೂನುಬದ್ಧ ಪ್ರಕ್ರಿಯೆ ಪಾಲನೆ ಅಗತ್ಯ: ಹೈಕೋರ್ಟ್

# ಬೇಕಾಬಿಟ್ಟಿ ರಕ್ತ ಸಂಗ್ರಹಿಸಬಾರದು



ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಾನೂನು ಬದ್ಧವಾಗಿ ಬಂಧನ ಮಾಡದ ಹೊರತು ಯಾವುದೇ ವ್ಯಕ್ತಿಯ ರಕ್ತದ ಮಾದರಿಯನ್ನು ಸಂಗ್ರಹಿಸಲು ಅವಕಾಶವಿಲ್ಲ. ಒಂದು ವೇಳೆ ವ್ಯಕ್ತಿಯ ಬಂಧನಕ್ಕೂ ಮುನ್ನ ಸಂಗ್ರಹಿಸಿದ್ದರೆ ಅಂತಹ ರಕ್ತದ ಮಾದರಿಯನ್ನು ಸಾಕ್ಷ್ಯವನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

‘ನನ್ನ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಮತ್ತು ಸೆಷನ್ಸ್ ವಿಶೇಷ ಕೋರ್ಟ್‌ನಲ್ಲಿರುವ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಕೆ.ಆರ್.ಪುರದ ಎಮನ್ ಅಬ್ಬಾಸ್ ಟೋಪಿವಾಲ (28) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಆರೋಪಿಯ ಬಂಧನ ಕಾನೂನು ಬಾಹಿರ ಎಂದು ಕಂಡುಬಂದಲ್ಲಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ–2023ರ ಕಲಂ 51ರ ಅಡಿಯಲ್ಲಿ ನಡೆಸಲಾಗುವ ಯಾವುದೇ ವೈದ್ಯಕೀಯ ಪರೀಕ್ಷೆ, ರಕ್ತದ ಮಾದರಿಗಳನ್ನು ಹೊರತೆಗೆಯುವುದು ದೋಷಪೂರಿತವಾಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಕಾನೂನುಬದ್ಧ ಬಂಧನಕ್ಕೆ ಅಗತ್ಯವಾದ ಕ್ರಮಗಳು, ವಿಶೇಷವಾಗಿ ಬಂಧನದ ಕಾರಣಗಳನ್ನು ತಿಳಿಸುವುದು ಕಡ್ಡಾಯ. ಆದ್ದರಿಂದ, ಈ ಪ್ರಕರಣದಲ್ಲಿ ಅರ್ಜಿದಾರರ ಬಂಧನ ಕಾನೂನು ಬಾಹಿರವಾಗಿದೆ ಮತ್ತು ಅವರ ಮೇಲೆ ನಡೆಸಿರುವ ವೈದ್ಯಕೀಯ ಪರೀಕ್ಷೆ ರದ್ದಾಗಲಿದೆ’ ಎಂದು ತಿಳಿಸಿದೆ.

‘ಈ ಪ್ರಕರಣದಲ್ಲಿ ಆರೋಪಿ ಮಾದಕ ವಸ್ತು ಸೇವನೆ ಮಾಡಿರುವುದಾಗಿ ಆರೋಪಿಸಲಾಗಿದೆ. ಆದರೆ, ರಕ್ತದ ಮಾದರಿ ಸಂಗ್ರಹ ಕಾನೂನು ಬಾಹಿರವಾಗಿದೆ. ಇದರ ಆಧಾರದಲ್ಲಿ ಸಿದ್ಧವಾದ ವೈದ್ಯಕೀಯ ಮತ್ತು ಫೋರೆನ್ಸಿಕ್ (ವಿಧಿ ವಿಜ್ಞಾನ ಪ್ರಯೋಗಾಲಯ) ವರದಿಗಳು ರದ್ದಾಗಲಿವೆ. ಆದ್ದರಿಂದ, ಇಂತಹ ಸಾಕ್ಷ್ಯಗಳ ಆಧಾರದಲ್ಲಿ ಪ್ರಾಸಿಕ್ಯೂಷನ್ ಪ್ರಕ್ರಿಯೆ ಮುಂದುವರೆಯುವುದು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದೆ.

### ಮಾದಕ ದ್ರವ್ಯ ಸೇವನೆ ಆರೋಪ

ಬೆಂಗಳೂರಿನ ಪೂರ್ವಭಾಗದ ಕೆ.ಆರ್.ಪುರ ನಿವಾಸಿಯಾಗಿರುವ ಅರ್ಜಿದಾರರು ದೇವನಹಳ್ಳಿಯ ಕನ್ನಮಂಗಲ ರಸ್ತೆಯಲ್ಲಿದ್ದ ಎಲ್ವೋಮಾ ಹೌಸ್‌ನಲ್ಲಿ ಜನ್ಮದಿನ ಆಚರಿಸಿಕೊಂಡಿದ್ದರು.

‘ಹೆಚ್ಚಿನ ಸಂಖ್ಯೆಯ ಜನರು ಪಾಲ್ಗೊಂಡಿದ್ದ ಈ ಆಚರಣೆಗೆ ಅನುಮತಿ ಪಡೆದಿರಲಿಲ್ಲ’ ಎಂದು ಆಕ್ಷೇಪಿಸಿ ದೇವನಹಳ್ಳಿ ಪೊಲೀಸರು, ಅರ್ಜಿದಾರರೂ ಸೇರಿದಂತೆ ಒಟ್ಟು 12 ಮಂದಿಯ ವಿರುದ್ಧ ಸ್ವಯಂಪ್ರೇರಿತವಾಗಿ; ಮಾದಕ ದ್ರವ್ಯ ನಿಗ್ರಹ ಕಾಯ್ದೆ–1985ರ (ಎನ್‌ಡಿಪಿಎಸ್) ಕಲಂ 20(ಬಿ), 22(ಎ), 27(ಬಿ), 25 ಮತ್ತು ಭಾರತೀಯ ನಾಗರಿಕ ಸಂಹಿತಾ–2023ರ ಕಲಂ 292, 296, 3(5)ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

ಆರೋಪಿಗಳನ್ನು ವಶಕ್ಕೆ ಪಡೆದು ಅವರ ರಕ್ತದ ಮಾದರಿಗಳನ್ನು ಸಂಗ್ರಹಿಸಿಕೊಂಡು ಬಿಡುಗಡೆ ಮಾಡಿದ್ದರು. ಇವರಲ್ಲಿ 12ನೇ ಆರೋಪಿಯಾಗಿರುವ ಅರ್ಜಿದಾರರರು ತಮ್ಮ ವಿರುದ್ಧದ ಆರೋಪ ಕೈಬಿಡುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

‘ಬಂಧನದ ಕಾರಣಗಳನ್ನು ತಿಳಿಸಿಲ್ಲ. ಬಂಧನಕ್ಕೂ ಮುನ್ನ ಮೆಮೊ ಕೂಡಾ ನೀಡಿಲ್ಲ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್‌ಎಸ್) ಕಲಂ 51ರ ಪ್ರಕಾರ ಕಾನೂನುಬದ್ಧ ಬಂಧನದ ನಂತರವೇ ವೈದ್ಯಕೀಯ ಪರೀಕ್ಷೆ ನಡೆಸಬೇಕು. ಆದರೆ, ಅದಕ್ಕೂ ಮುನ್ನವೇ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಇದು ಕಾನೂನಿಗೆ ವಿರುದ್ಧವಾಗಿದೆ’ ಎಂದು ಅರ್ಜಿದಾರರ ಪರ ವಕೀಲರು ಆಕ್ಷೇಪಿಸಿದ್ದರು.

ಪ್ರಾಸಿಕ್ಯೂಷನ್ ಪರ ವಕೀಲರು, ‘ಅರ್ಜಿದಾರರ ಹೇಳಿಕೆ ಪಡೆದೇ ಎಫ್‌ಐಆರ್ ದಾಖಲಿಸಲಾಗಿದೆ. ವೈದ್ಯಕೀಯ ಪರೀಕ್ಷೆಯ ನಂತರ ಬಿಡುಗಡೆ ಮಾಡಲಾಗಿದೆ. ರಕ್ತ ಮತ್ತು ಮೂತ್ರದ ಮಾದರಿಗಳನ್ನು ಫೋರೆನ್ಸಿಕ್ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ಪೀಠಕ್ಕೆ ವಿವರಿಸಿದ್ದರು.

**ಬಂಧನ ಕಾನೂನು ಬಾಹಿರವಾಗಿದ್ದರೆ, ನಂತರದ ಪ್ರಾಸಿಕ್ಯೂಷನ್ ಪ್ರಕ್ರಿಯೆಯೇ ಸಂಪೂರ್ಣವಾಗಿ ದುರ್ಬಲಗೊಳ್ಳುತ್ತದೆ. ಹಾಗಾಗಿ, ರಕ್ತದ ಮಾದರಿ, ವೈದ್ಯಕೀಯ ಪರೀಕ್ಷೆ ಎಂಬುದು ಕಾನೂನುಬದ್ಧ ಬಂಧನದ ನಂತರವೇ ಕಾರ್ಯಗತ ಆಗಬೇಕು**

**ನ್ಯಾ.ಎಂ.ನಾಗಪ್ರಸನ್ನ**

# ‘ಭಯ ಸೃಷ್ಟಿಸಲು ಆಡಳಿತದ ದುರ್ಬಳಕೆ’

## ಪ್ರಧಾನಿ ಮೋದಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

ಚೆನ್ನೈ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಆಡಳಿತ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ರಾಜಕೀಯ ಪಕ್ಷಗಳು ಮತ್ತು ಜನರಲ್ಲಿ ಭಯ ಸೃಷ್ಟಿಸುತ್ತಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಇಲ್ಲಿ ವಾಗ್ದಾಳಿ ನಡೆಸಿದರು.

ಎಐಎಡಿಎಂಕೆ ಜೊತೆಗಿನ ಬಿಜೆಪಿ ಮೈತ್ರಿಯನ್ನು ಖಂಡಿಸುವ ಭರದಲ್ಲಿ ಎಐಸಿಸಿ ಅಧ್ಯಕ್ಷರು ಪ್ರಧಾನಿಯನ್ನು ‘ಭಯೋತ್ಪಾದಕ’ ಎಂದರು.


ಪತ್ರಿಕಾಗೋಷ್ಠಿಯಲ್ಲಿದ್ದ ಪತ್ರಕರ್ತರು ‘ಭಯೋತ್ಪಾದಕ’ ಪದ ಬಳಕೆ ಕುರಿತಂತೆ ಸ್ಪಷ್ಟನೆ ಬಯಸಿದಾಗ, ‘ಪ್ರಧಾನಿಯು ದೇಶದ ಪ್ರಜಾಪ್ರಭುತ್ವ ರಚನೆಯನ್ನೇ ‘ಭಯಭೀತಗೊಳಿಸುತ್ತಿದ್ದಾರೆ’ ಎಂದು ಖರ್ಗೆ ಹೇಳಿದರು.

‘ಪ್ರಧಾನಿಯು ಜನರನ್ನು ಮತ್ತು ರಾಜಕೀಯ ಪಕ್ಷಗಳನ್ನು ಭಯಭೀತಗೊಳಿಸುತ್ತಿದ್ದಾರೆ. ಅವರನ್ನು ಅಕ್ಷರಶಃ ಅರ್ಥದಲ್ಲಿ ‘ಭಯೋತ್ಪಾದಕ’ ಎಂದು ನಾನು ಹೇಳಿಲ್ಲ. ಜನರನ್ನು ಭಯಪಡಿಸುತ್ತಿದ್ದಾರೆ ಎಂದಿದ್ದೇನೆ’ ಎಂದು ಸ್ಪಷ್ಟಪಡಿಸಿದರು.

‘ಚುನಾವಣಾ ಆಯೋಗವು ಬಿಜೆಪಿಯ ವಿಸ್ತರಣಾ ಕಚೇರಿಯಾಗಿದೆ’ ಎಂದು ದೂರಿದ ಖರ್ಗೆ, ‘ಚುನಾವಣಾ ಪ್ರಚಾರದ ಅಂತಿಮ ಹಂತದಲ್ಲಿ ಪ್ರಧಾನಿಯು ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ’ ಎಂದು ಆರೋಪಿಸಿದರು.

ಮಹಿಳಾ ಮೀಸಲಾತಿ ಮಸೂದೆಯನ್ನು 2023ರಲ್ಲೇ ಸರ್ವಾನುಮತದಿಂದ ಅಂಗೀಕರಿಸಿದ್ದರೂ, ಪ್ರತಿಪಕ್ಷಗಳು ಸೋಲಿಸಿವೆ ಎಂದು ಹೇಳುವ ಮೂಲಕ ಪ್ರಧಾನಿಯು ಸಾರ್ವಜನಿಕರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು.

‘ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವ ಉದ್ದೇಶವಿದ್ದರೆ, ಈಗಿರುವ 543 ಲೋಕಸಭಾ ಸ್ಥಾನಗಳಲ್ಲೇ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬಹುದು. ಆದರೆ ಯಾಕೆ ಕೊಡುತ್ತಿಲ್ಲ?’ ಎಂದು ಪ್ರಶ್ನಿಸಿದರು.



ಚೆನ್ನೈನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್– ಡಿಎಂಕೆ ಮೈತ್ರಿಕೂಟದ ಅಭ್ಯರ್ಥಿ ಪರ ಮಂಗಳವಾರ ಮತ ಯಾಚಿಸಿದರು ಪಿಟಿಐ ಚಿತ್ರ

### ದ್ರೋಹಿಗಳಿಗೆ ನಾನು ಅಪಾಯಕಾರಿ: ಮುಖ್ಯಮಂತ್ರಿ ಸ್ಟಾಲಿನ್

‘ತಮಿಳುನಾಡಿಗೆ ದ್ರೋಹ ಬಗೆಯುವವರು ಮತ್ತು ಅಭಿವೃದ್ಧಿಗೆ ಅಡ್ಡಗಾಲಾಗುವವರಿಗೆ ನಾನು ಅಪಾಯಕಾರಿ ಆಗುವೆ’ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

‘ಈ ವಿಷಯದಲ್ಲಿ ಅಪ್ಪನಿಗಿಂತ (ಕರುಣಾನಿಧಿ) ಒಂದು ಹೆಜ್ಜೆ ಮುಂದಿರುವುದಾಗಿ ಕೆಲವರು ಹೇಳುತ್ತಾರೆ. ಇದು ನನಗೆ ಹೆಮ್ಮೆಯ ವಿಷಯವಲ್ಲವೇ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

‘ತಮಿಳುನಾಡಿಗೆ ಯಾವಾಗಲೂ ದ್ರೋಹ ಎಸಗುವ ಕೇಂದ್ರ ಸರ್ಕಾರದ ವಿರುದ್ಧ ನಾನು ಹೋರಾಡಿದ್ದೇನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ. ಸಾಮಾಜಿಕ ನ್ಯಾಯದೊಂದಿಗೆ ಅಭಿವೃದ್ಧಿಯೂ ನನ್ನ ಮೊದಲ ಆದ್ಯತೆ’ ಎಂದಿದ್ದಾರೆ.

ಪ್ರಜಾಮತ ಜನತಂತ್ರದ ಹಬ್ಬ ವಿಧಾನಸಭಾ ಚುನಾವಣೆ - 2026

## ಖರ್ಗೆ ವಿರುದ್ಧ ಆಯೋಗಕ್ಕೆ ಬಿಜೆಪಿ ದೂರು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಭಯೋತ್ಪಾದಕ’ ಎಂದಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿಯು ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

‘ಖರ್ಗೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅವರ ಭಾಷಣ, ಕಾರ್ಯಕ್ರಮಗಳಿಗೆ ನಿರ್ಬಂಧಗಳನ್ನು ಹೇರಬೇಕು’ ಎಂದು ಬಿಜೆಪಿ ಒತ್ತಾಯಿಸಿದೆ.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಕಿರಣ್ ರಿಜಿಜು, ಅರ್ಜುನ್ ರಾಮ್ ಮೇಘವಾಲ್ ಅವರನ್ನೊಳಗೊಂಡ ನಿಯೋಗವು ಬುಧವಾರ ಚುನಾವಣಾ ಆಯುಕ್ತರನ್ನು ಭೇಟಿಯಾಗಿ ಮನವಿ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

## ಖರ್ಗೆ ದೇಶದ ಜನರ ಕ್ಷಮೆ ಕೇಳಲಿ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಜನರ ಕ್ಷಮೆ ಕೇಳಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಪ್ರಧಾನಿಯನ್ನು ಹೀಗೆ ಕರೆಯುವುದು ದುರಹಂಕಾರದ ಪರಮಾವಧಿ ಮಾತ್ರವಲ್ಲ. ನಿಮ್ಮ ಕೊಳಕು ಮತ್ತು ವಿಷಕಾರಿ ಮನಸ್ಥಿತಿಯನ್ನು ತೋರಿಸುತ್ತದೆ’ ಎಂದಿದ್ದಾರೆ.

‘ದೇಶದ ಜನರು ಮೋದಿ ಅವರನ್ನು ಮೂರನೇ ಬಾರಿಗೆ ಪ್ರಧಾನಿ ಹುದ್ದೆಯಲ್ಲಿ ಕೂರಿಸಿದ್ದಾರೆ. ಮೋದಿ ಅವರನ್ನು ತೆಗಳುವುದು, ದೇಶದ ಕೋಟ್ಯಂತರ ಜನರನ್ನು ತೆಗಳಿದಂತೆ. ಚುನಾವಣೆ ಬಂದಾಗಲೆಲ್ಲಾ ಕಾಂಗ್ರೆಸ್ ನಾಯಕರು ಮೋದಿ ಅವರ ವಿರುದ್ಧ ಇಂತಹ ಕೀಳು ಭಾಷೆ ಬಳಸುತ್ತಾರೆ. ಅದಕ್ಕೆ ಜನರು ತಕ್ಕ ಪಾಠ ಕಲಿಸುತ್ತಲೇ ಬಂದಿದ್ದಾರೆ. ಆದರೂ ಆ ತಪ್ಪನ್ನು ಕಾಂಗ್ರೆಸ್‌ನವರು ತಿದ್ದಿಕೊಳ್ಳುತ್ತಿಲ್ಲ’ ಎಂದು ಅವರು ಟೀಕಿಸಿದ್ದಾರೆ.

**ಹುದ್ದೆಯಿಂದ ಕಿತ್ತುಹಾಕಲಿ:** ‘ಮೋದಿ ಅವರು ಭಯೋತ್ಪಾದಕ ಆಗಿದ್ದರೆ, ಕೋಟ್ಯಂತರ ಜನರು ಬಿಜೆಪಿಗೆ ಮತ ಹಾಕುತ್ತಿರಲಿಲ್ಲ. ಅವರು ಸತತ ಮೂರನೇ ಬಾರಿಗೆ ಪ್ರಧಾನಿ ಆಗುತ್ತಿರಲಿಲ್ಲ. ಅವರನ್ನು ಬೆಂಬಲಿಸಿದ ಕೋಟ್ಯಂತರ ಜನರನ್ನು ಮಲ್ಲಿಕಾರ್ಜುನ ಖರ್ಗೆ ಅವರು ಅವಮಾನಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಕೂಡಲೇ ಅವರನ್ನು ಎಐಸಿಸಿ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಒತ್ತಾಯಿಸಿದ್ದಾರೆ.

**‘ಪಾಠ ಕಲಿಯದ ಕಾಂಗ್ರೆಸ್’:** ‘ಕಾಂಗ್ರೆಸ್‌ನವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಾವಿನ ವ್ಯಾಪಾರಿ, ನೀಚ, ಚಾಯ್‌ವಾಲಾ, ಕಾವಲುಗಾರನೇ ಕಳ್ಳ, ವಿಷಸರ್ಪ ಎಂದೆಲ್ಲಾ ಕರೆದಿದ್ದಾರೆ. ಆಗೆಲ್ಲಾ ದೇಶದ ಜನರು ಕಾಂಗ್ರೆಸ್‌ಗೆ ಛೀಮಾರಿ ಹಾಕಿದ್ದಾರೆ. ಆದರೆ ಕಾಂಗ್ರೆಸ್ ಪಾಠ ಕಲಿತಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಬಂಗಾಳ ವಿಧಾನಸಭಾ ಚುನಾವಣೆ; ಗೃಹ ಸಚಿವ ಅಮಿತ್ ಶಾ ಭರವಸೆ

# 6 ತಿಂಗಳಲ್ಲಿ ಗೋರ್ಖಾ ಸಮಸ್ಯೆಗೆ ಪರಿಹಾರ



ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜನರತ್ತ ಕೈ ಬೀಸಿದರು ಪಿಟಿಐ ಚಿತ್ರ

ಕುರ್ಸಿಯಂಗ್ (ಪಶ್ಚಿಮ ಬಂಗಾಳ) (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರ ಹಿಡಿದ ಆರು ತಿಂಗಳ ಒಳಗಾಗಿ ಗೋರ್ಖಾಗಳ ಸಮಸ್ಯೆಯನ್ನು ಬಗೆಹರಿಸಲಾಗುವುದು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

‘ಬಿಜೆಪಿ ಹೊರತುಪಡಿಸಿ ಯಾವುದೇ ಪಕ್ಷ ಕೂಡ ಗೋರ್ಖಾಗಳು ಒಪ್ಪುವಂತಹ ಪರಿಹಾರವನ್ನು ನೀಡಲು ಸಾಧ್ಯವಿಲ್ಲ’ ಎಂದು ತಿಳಿಸಿದ್ದಾರೆ.

ಡಾರ್ಜಿಲಿಂಗ್ ಜಿಲ್ಲೆಯ ಕುರ್ಸಿಯಂಗ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಗೋರ್ಖಾಗಳ ಕಳವಳ ಹಾಗೂ ಆಕಾಂಕ್ಷೆಗಳನ್ನು ಬಿಜೆಪಿಯು ಸ್ಪಷ್ಟವಾಗಿ ಅರಿತುಕೊಂಡಿದೆ. ಅವರ ಬೇಡಿಕೆಗಳನ್ನು ಈಡೇರಿಸಲು ಪಕ್ಷವೂ ಬದ್ಧವಾಗಿದೆ’ ಎಂದು ಹೇಳಿದ್ದಾರೆ.

‘ಬಂಗಾಳದಲ್ಲಿ ಬಿಜೆಪಿಯು ಅಧಿಕಾರ ಹಿಡಿದ ಆರು ತಿಂಗಳಲ್ಲಿ ಪ್ರತಿಯೊಬ್ಬ ಗೋರ್ಖಾ ಸಮುದಾಯದ ಪ್ರತಿಯೊಬ್ಬರ ಮುಖದಲ್ಲಿ ನಗು ಅರಳಲಿದೆ. ಗೋರ್ಖಾಗಳ ಸಮಸ್ಯೆಗೆ ನಾವು ಪರಿಹಾರ ಕಂಡುಹಿಡಿಯಲಿದ್ದು, ಶಾಂತಿಯಿಂದ ಬದುಕುವಂತೆ ಅವಕಾಶ ಮಾಡಿಕೊಡಲಿದ್ದೇವೆ’ ಎಂದು ಹೇಳಿದ್ದಾರೆ.

**ಪ್ರತಿನಿಧಿ ಕಳುಹಿಸದ ಟಿಎಂಸಿ:** ‘ಸಮಸ್ಯೆ ಬಗೆಹರಿಸುವ ಕುರಿತು ಪ್ರತಿ ಸಲವೂ ನಾನು ಸಭೆ ನಡೆಸಿದ ವೇಳೆ ಪಶ್ಚಿಮ ಬಂಗಾಳ ಸರ್ಕಾರವು ಯಾವುದೇ ಪ್ರತಿನಿಧಿಗಳನ್ನು ಕಳುಹಿಸುತ್ತಿರಲಿಲ್ಲ. ಅದಕ್ಕಾಗಿಯೇ ಒಬ್ಬ ಸಂವಾದಕನನ್ನು ನೇಮಿಸಬೇಕಾಯಿತು’ ಎಂದು ತಿಳಿಸಿದ್ದಾರೆ.

### ಟಿಎಂಸಿ ಮತ್ತೆ ಅಧಿಕಾರಕ್ಕೆ: ಮಮತಾ

ಹಲ್ದಿಯಾ (ಪಶ್ಚಿಮ ಬಂಗಾಳ) (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ಸತತ ನಾಲ್ಕನೇ ಅವಧಿಗೆ ತೃಣಮೂಲ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಹಿಡಿಯಲಿದ್ದು, ಯಾರೊಬ್ಬರೂ ಬಿಜೆಪಿಯು ರಾಜ್ಯದಲ್ಲಿ ಸರ್ಕಾರ ರಚಿಸುವುದನ್ನು ಬಯಸುತ್ತಿಲ್ಲ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ಪೂರ್ವ ಮೇದಿನಿಪುರ ಜಿಲ್ಲೆಯ ಹಲ್ದಿಯಾದಲ್ಲಿ ಮಂಗಳವಾರ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ‘ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಕಿತ್ತೊಗೆಯಲು ವಿರೋಧ ಪಕ್ಷಗಳೆಲ್ಲವೂ ಕೂಡ ಒಂದಾಗಬೇಕು’ ಎಂದು ಕರೆ ನೀಡಿದ್ದಾರೆ.

ಟಿಎಂಸಿ ಸರ್ಕಾರದ ಅಕ್ರಮಗಳ ಕುರಿತಂತೆ ಬಿಜೆಪಿ ಬಿಡುಗಡೆಗೊಳಿಸಿರುವ ಆರೋಪಪಟ್ಟಿ ಕುರಿತಂತೆ ಆಕ್ರೋಶ ವ್ಯಕ್ತಪಡಿಸಿರುವ ಮಮತಾ, ‘ಹಲ್ದಿಯಾ ಬಂದರು ಹಾಗೂ ಸುತ್ತಲಿನ ಕೈಗಾರಿಕಾ ಕೇಂದ್ರದ ವಿಸ್ತರಣೆಗಾಗಿ ಬಿಜೆಪಿ ಪಡೆದಿರುವ ಕಮಿಷನ್ ಕುರಿತು ಆರೋಪಪಟ್ಟಿ ಬಿಡುಗಡೆಗೊಳಿಸಲಾಗುವುದು’ ಎಂದು ಸವಾಲು ಎಸೆದಿದ್ದಾರೆ.

ಸುದ್ದಿ 2 ನಿಮಿಷ

### ಎನ್‌ಐಎ ಸಿಂಧುತ್ವ: ಕೇಂದ್ರದ ಪ್ರತಿಕ್ರಿಯೆ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಾಯ್ದೆ 2008ರ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಇತರರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

‘ಎನ್‌ಐಎ ವಿಚಾರವಾಗಿ ಎದ್ದಿರುವ ಪ್ರಶ್ನೆಗಳು ಬಹುಮುಖ್ಯವಾದವು’ ಎಂದು ಹೇಳಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, ಕೇಂದ್ರ ಸರ್ಕಾರ, ಎನ್‌ಐಎ ಮತ್ತು ಇತರರಿಗೆ ನೋಟಿಸ್ ಜಾರಿಗೆ ಆದೇಶಿಸಿದೆ.

‘ಪ್ರತಿವಾದಿಗಳು ನಾಲ್ಕು ವಾರಗಳ ಒಳಗಾಗಿ ಪ್ರಮಾಣಪತ್ರ ಸಲ್ಲಿಸಬೇಕು. ಆ ಬಳಿಕ ಎರಡು ವಾರಗಳ ಒಳಗಾಗಿ ಅರ್ಜಿದಾರರು ಮರು ಪ್ರಮಾಣಪತ್ರ ಸಲ್ಲಿಸಬೇಕು’ ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ.

‘2008ರ ಎನ್‌ಐಎ ಕಾಯ್ದೆಯು ಸಂವಿಧಾನ 14ನೇ ವಿಧಿಯ ಉಲ್ಲಂಘನೆಯಾಗಿದೆ ಮತ್ತು ಕೇಂದ್ರ ಶಾಸಕಾಂಗದ ಅಧಿಕಾರವನ್ನು ಮೀರಿದ್ದಾಗಿದೆ. ಆದ್ದರಿಂದ ಅದನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

‘ಪೊಲೀಸ್ ಠಾಣೆಯಿಲ್ಲದೆ, ಎನ್‌ಐಎ ಎಫ್‌ಐಆರ್ ದಾಖಲಿಸಬಹುದೇ’ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರನ್ನು ಪ್ರಶ್ನಿಸಿದ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿದೆ.

### ಖಾಸಗಿ ಮಸೂದೆ ಮಂಡನೆಗೆ ಮುಂದಾದ ಎಸ್‌ಪಿ

ಬದಾಯು/ಲಖನೌ (ಪಿಟಿಐ): ‘ಶಾಸನಸಭೆಗಳಲ್ಲಿ ಮಹಿಳೆಯರಿಗೆ ನೀಡಲಾಗುವ ಮೀಸಲಾತಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಮುಸ್ಲಿಂ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕು ಎನ್ನುವ ಖಾಸಗಿ ಮಸೂದೆಯನ್ನು ಪಕ್ಷವು ಮಂಡಿಸಲಿದೆ’ ಎಂದು ಸಮಾಜವಾದಿ ಪಕ್ಷದ ಸಂಸದ ಧರ್ಮೇಂದ್ರ ಯಾದವ್ ಸೋಮವಾರ ತಿಳಿಸಿದರು.

‘ಪಿಟಿಐ’ ಸುದ್ದಿಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಮಾತನಾಡಿ, ‘ಕೇಂದ್ರವು ಮಹಿಳೆಯರಿಗೆ ಮೀಸಲಾತಿ ನೀಡಲು ತಂದಿರುವ ಮಸೂದೆಯಲ್ಲಿ ಒಬಿಸಿ ಮತ್ತು ಮುಸ್ಲಿಂ ಮಹಿಳೆಯರಿಗೆ ಮೀಸಲಾತಿ ಇದೆಯೇ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಇದೇ ಈ ಮಸೂದೆಯ ಅತಿ ದೊಡ್ಡ ಕೊರತೆ. ಇದಕ್ಕಾಗಿಯೇ ಪಕ್ಷವು ಖಾಸಗಿ ಮಸೂದೆ ಮಂಡಿಸಲು ಸಿದ್ಧತೆ ನಡೆಸಿದೆ’ ಎಂದರು.

‘ಮಹಿಳೆಯರಿಗೆ ಮೀಸಲಾತಿ ನೀಡುವ ಪ್ರಸ್ತಾವವನ್ನು ನಮ್ಮ ಪಕ್ಷವು ನಿರಂತರವಾಗಿ ಬೆಂಬಲಿಸಿಕೊಂಡು ಬಂದಿದೆ. ಆದರೆ, ಮೀಸಲಾತಿಯು ಎಲ್ಲ ವರ್ಗಗಳ ಮಹಿಳೆಯರಿಗೆ ಸಮಾನವಾಗಿ ಹಂಚಿಕೆಯಾಗಬೇಕು. ದುರಾದೃಷ್ಟವಶಾತ್ ಕೇಂದ್ರ ಸರ್ಕಾರದ ಉದ್ದೇಶ ಏನು ಎನ್ನುವುದರ ಬಗ್ಗೆಯೇ ಸ್ಪಷ್ಟತೆ ಇಲ್ಲವಾಗಿದೆ’ ಎಂದರು.

‘2023ರಲ್ಲಿಯೇ ಮಹಿಳಾ ಮೀಸಲಾತಿ ಕಾಯ್ದೆಯನ್ನು ಎಲ್ಲ ವಿರೋಧ ಪಕ್ಷಗಳು ಬೆಂಬಲಿಸಿದ್ದವು. ಆದರೆ, ಈ ಕಾಯ್ದೆಯನ್ನು ಜಾರಿ ಮಾಡುವ ಬಗ್ಗೆ ಆದೇಶ ಹೊರಡಿಸಲು ಕೇಂದ್ರ ಸರ್ಕಾರ ಮೂರು ವರ್ಷ ಏಕೆ ತೆಗೆದುಕೊಂಡಿತು? 2011 ಗಣತಿ ಆಧಾರದಲ್ಲಿಯೇ ಮೀಸಲಾತಿ ನೀಡುವುದಾದರೆ, 2023ರಲ್ಲಿ ಹೊಸ ಮಸೂದೆ ರಚಿಸುವ ಅಗತ್ಯ ಏನಿತ್ತು?’ ಎಂದು ಪ್ರಶ್ನಿಸಿದರು.

ಚುನಾವಣಾ ಆಯೋಗ ಪಶ್ಚಿಮ ಬಂಗಾಳದಲ್ಲಿ ಪಕ್ಷಪಾತ ಮಾಡುತ್ತಿದೆ ಎನ್ನುವ ಟಿಎಂಸಿ ಆರೋಪ ಸರಿಯೇ?

• ಸರಿ • ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

### ‘ಎಐಎಡಿಎಂಕೆ ವಿಭಜನೆಗೆ ಹುನ್ನಾರ’

ಸೇಲಂ (ಪಿಟಿಐ): ‘ಎಐಎಡಿಎಂಕೆ ವಿಭಜಿಸಲು ಡಿಎಂಕೆ ಹುನ್ನಾರ ನಡೆಸಿತ್ತು’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಮಂಗಳವಾರ ಆರೋಪಿಸಿದರು.

‘ಆಡಳಿತಾರೂಢ ಡಿಎಂಕೆಯ ತಂತ್ರಗಾರಿಕೆಯನ್ನು ವಿಫಲಗೊಳಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ’ ಎಂದರು.

‘ನಾನು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ (2016–21) ಎಷ್ಟು ಸಮಸ್ಯೆ ಎದುರಿಸಿದ್ದೆ ಎಂಬುದು ನನಗಷ್ಟೇ ಗೊತ್ತು. ಸ್ಟಾಲಿನ್ ನಮ್ಮ ಪಕ್ಷವನ್ನು ವಿಭಜಿಸಲು ಭಾರಿ ತಂತ್ರಗಾರಿಕೆ ನಡೆಸಿದರು. ಆದರೆ ನಾವು ಅದನ್ನು ನುಚ್ಚುನೂರು ಮಾಡಿದೆವು’ ಎಂದರು.

## ತಮಿಳುನಾಡಿನಲ್ಲಿ ಪ್ರಚಾರ ಅಂತ್ಯ

### ಪಶ್ಚಿಮ ಬಂಗಾಳದಲ್ಲೂ 152 ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ತೆರೆ

ಚೆನ್ನೈ/ಕೋಲ್ಕತ್ತ (ಪಿಟಿಐ): ತಮಿಳುನಾಡಿನ ಎಲ್ಲ 234 ವಿಧಾನಸಭಾ ಕ್ಷೇತ್ರಗಳು ಮತ್ತು ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 152 ವಿಧಾನಸಭಾ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆಬಿದ್ದಿದೆ.

ಎರಡೂ ರಾಜ್ಯಗಳ 386 ಕ್ಷೇತ್ರಗಳಲ್ಲಿ ಗುರುವಾರ ಮತದಾನ ನಡೆಯಲಿದೆ. ಮೇ 4ರಂದು ಮತ ಎಣಿಕೆ ನಡೆಯಲಿದೆ.

ತಮಿಳುನಾಡಿನಲ್ಲಿ ಡಿಎಂಕೆ 164 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದು, ಅದರ ಮಿತ್ರಪಕ್ಷಗಳು 70 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿವೆ. ಎಐಎಡಿಎಂಕೆ 169 ಸ್ಥಾನಗಳಲ್ಲಿ ಮತ್ತು ಅದರ ಮಿತ್ರಪಕ್ಷಗಳು 65 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ನಟ ವಿಜಯ್ ನೇತೃತ್ವದ ಹೊಸ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವುದು ಈ ಬಾರಿಯ ಚುನಾವಣೆಯನ್ನು ಮತ್ತಷ್ಟು ರಂಗೇರಿಸುವಂತೆ ಮಾಡಿದೆ.

ಚಲನಚಿತ್ರ ನಿರ್ದೇಶಕ ಸೀಮನ್ ನೇತೃತ್ವದ ನಾಮ್ ತಮಿಳರ್ ಕಚ್ಚಿ ಪಕ್ಷವು ಸಹ 234 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಈ ಚುನಾವಣೆಯಲ್ಲಿ ಒಟ್ಟು 4,023 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. 5.73 ಕೋಟಿ ಮತದಾರರು ಮತದಾನಕ್ಕೆ ಅರ್ಹತೆ ಹೊಂದಿದ್ದಾರೆ.

**ಮೊದಲ ಹಂತಕ್ಕೆ ಸಜ್ಜು:** ಪಶ್ಚಿಮ ಬಂಗಾಳದ 152 ಕ್ಷೇತ್ರಗಳಲ್ಲಿ ಗುರುವಾರ ಮತದಾನ ನಡೆಯಲಿದೆ. 3.60 ಕೋಟಿಗೂ ಹೆಚ್ಚು ಮತದಾರರು ಮತ ಚಲಾಯಿಸಲು ಅರ್ಹರಾಗಿದ್ದಾರೆ.

## ಪ್ರಧಾನಿ ವಿರುದ್ಧ ಹಕ್ಕುಚ್ಯುತಿಗೆ ಕಾಂಗ್ರೆಸ್ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ವಿರೋಧ ಪಕ್ಷಗಳ ಸಂಸದರನ್ನು ದೂಷಿಸಿದ್ದಕ್ಕಾಗಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ಅವಕಾಶ ಕೋರಿ ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಅವರು ಮಂಗಳವಾರ ಲೋಕಸಭೆ ಸಚಿವಾಲಯಕ್ಕೆ ನೋಟಿಸ್ ಸಲ್ಲಿಸಿದ್ದಾರೆ.

‘ಕ್ಷೇತ್ರ ಮರುವಿಂಗಡಣೆ ಮಸೂದೆಗೆ ಅಂಗೀಕಾರ ಪಡೆಯುವಲ್ಲಿ ವಿಫಲವಾಗಿದ್ದಕ್ಕೆ ಪ್ರಧಾನಿಯವರು ಕೋಪಗೊಂಡು ವಿರೋಧ ಪಕ್ಷಗಳ ಸಂಸದರ ಮೇಲೆ ವಾಗ್ದಾಳಿ ನಡೆಸಿ ಅವರ ಮತದಾನವನ್ನು ಪ್ರಶ್ನಿಸಿರುವುದು ಸದನದ ಘನತೆಗೆ ತಕ್ಕದಲ್ಲ’ ಎಂದು ವೇಣುಗೋಪಾಲ್ ಹೇಳಿದ್ದಾರೆ.

ಮೋದಿ ಅವರು, ವಿಧಾನಸಭಾ ಚುನಾವಣಾ ಪೂರ್ವದಲ್ಲಿ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ, ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ, ಅವರ ವಿರುದ್ಧ ಕ್ರಮಕ್ಕಾಗಿ ಸಿಪಿಎಂ ಮತ್ತು ಸಿಪಿಐ ಮುಖಂಡರು ಚುನಾವಣಾ ಆಯೋಗದ ಮೊರೆ ಹೋಗಿದ್ದಾರೆ.

ವೇಣುಗೋಪಾಲ್ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಬರೆದಿರುವ ಪತ್ರದಲ್ಲಿ, ‘ಮೋದಿ ಅವರು ತಮ್ಮ ಸರ್ಕಾರದ ವೈಫಲ್ಯಕ್ಕಾಗಿ ವಿರೋಧ ಪಕ್ಷವನ್ನು ಟೀಕಿಸಿದ್ದಾರೆ. ಮಸೂದೆ ಕುರಿತಂತೆ ವಿರೋಧ ಪಕ್ಷಗಳ ನಿಲುವನ್ನು ವಿವರಿಸಲು ‘ಭ್ರೂಣಹತ್ಯೆ’ ‘ಪಾಪ’ ಎಂಬ ಪದಗಳನ್ನು ಬಳಸಿದ್ದಾರೆ. ಇದು ಅನೈತಿಕ ಮತ್ತು ಅಧಿಕಾರದ ಸ್ಪಷ್ಟ ದುರುಪಯೋಗ, ಸದನದ ನಿಂದನೆ ಆಗಿದೆ’ ಎಂದು ದೂರಿದ್ದಾರೆ.

ಸಂಸದರ ವಿರುದ್ಧ ಪ್ರಧಾನಿ ನಡೆಸಿದ ವಾಗ್ದಾಳಿಯು ಸಂಸತ್ತು ಮತ್ತು ಜನರ ಪ್ರಜಾತಾಂತ್ರಿಕ ಹಕ್ಕುಗಳ ಮೇಲಿನ ದಾಳಿಯಾಗಿದೆ ಎಂದು ಅವರು ಹೇಳಿದ್ದಾರೆ.

## ವಿಧ್ವಂಸಕ ಕೃತ್ಯಕ್ಕೆ ಸಂಚು: 7 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯ ಎಸಗಲು ಜೈಲಿನೊಳಗೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಬೆಂಗಳೂರು ಸರಣಿ ಸ್ಫೋಟ ಪ್ರಕರಣದ ಉಗ್ರ ಟಿ.ನಾಸೀರ್ ಸೇರಿದಂತೆ ಏಳು ಉಗ್ರರಿಗೆ ಏಳು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯವು ಮಂಗಳವಾರ ಆದೇಶ ನೀಡಿದೆ.



ನಾಸೀರ್

ಟಿ.ನಾಸೀರ್, ಸೈಯದ್ ಸುಹೇಲ್ ಖಾನ್, ಮೊಹಮ್ಮದ್ ಉಮರ್, ಸೈಯದ್ ಮುದಾಸೀರ್ ಪಾಷಾ, ಸಲ್ಮಾನ್ ಖಾನ್, ಮೊಹಮ್ಮದ್ ಫೈಸಲ್ ರಬ್ಬಾನಿ, ಜಹೀದ್ ತಬ್ರೇಜ್ ಶಿಕ್ಷೆಗೆ ಗುರಿಯಾದ ಉಗ್ರರು.

ಲಷ್ಕರ್ ಎ ತಯಬಾ (ಎಲ್‌ಇಟಿ) ಸಂಘಟನೆಗೆ ಯುವಕರನ್ನು ಸೆಳೆದು ಭಯೋತ್ಪಾದನೆ ಚಟುವಟಿಕೆಗಳಿಗೆ ಪ್ರಚೋದನೆ ನೀಡಿದ್ದಕ್ಕೆ ಸಂಬಂಧಿಸಿದಂತೆ 2010ರಲ್ಲಿ ದಾಖಲಾದ ಪ್ರಕರಣದಲ್ಲಿ ಟಿ.ನಾಸೀರ್ ಶಿಕ್ಷೆಗೆ ಗುರಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾ ಬಂದಿ ಆಗಿದ್ದಾನೆ. ಈ ಪ್ರಕರಣದಲ್ಲೂ ನಾಸೀರ್ ಕೃತ್ಯವು ಸಾಬೀತಾಗಿದೆ.

ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಹಾಗೂ ಯುವಕರಿಗೆ ಪ್ರಚೋದನೆ ನೀಡಿದ್ದ ಪ್ರಕರಣವು ಸಾಬೀತಾದ ಕಾರಣ ಏಳು ಉಗ್ರರಿಗೆ ಏಳು ವರ್ಷ ಜೈಲು ಹಾಗೂ ₹48 ಸಾವಿರ ದಂಡ ವಿಧಿಸಿ ನ್ಯಾಯಾಧೀಶರು ಆದೇಶಿಸಿದ್ದಾರೆ.

ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಸೈಯದ್ ಸುಹೇಲ್ ಖಾನ್, ಮೊಹಮ್ಮದ್ ಉಮರ್, ಸೈಯದ್ ಮುದಾಸೀರ್ ಪಾಷಾ, ಸಲ್ಮಾನ್ ಖಾನ್, ಮೊಹಮ್ಮದ್ ಫೈಸಲ್ ರಬ್ಬಾನಿ, ಜಹೀದ್ ತಬ್ರೇಜ್ ಪರಪ್ಪನ ಅಗ್ರಹಾರ ಜೈಲು ಸೇರಿದ್ದರು. ಜೈಲಿನಲ್ಲೇ ಇದ್ದ ಎಲ್‌ಇಟಿ ಸದಸ್ಯ ಟಿ.ನಾಸೀರ್, ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ವಿಧ್ವಂಸಕ ಕೃತ್ಯ ಎಸಗುವಂತೆ ಇತರರಿಗೆ ಪ್ರಚೋದನೆ ನೀಡಿದ್ದ. ಜೈಲಿನ ಒಳಗೆ ಊಟಕ್ಕೆ ಸೇರಿದಾಗ ಎಲ್ಲರೂ ಸೇರಿಕೊಂಡು ಸಂಚಿನ ಬಗ್ಗೆ ಚರ್ಚಿಸಿದ್ದರು. ಮಾಹಿತಿ ತಿಳಿದು ಸಿಸಿಬಿ ಪೊಲೀಸರು ಬಾಡಿ ವಾರಂಟ್ ಮೇಲೆ ಶಂಕಿತ ಉಗ್ರರನ್ನು ವಶಕ್ಕೆ ಪಡೆದು ಬಂಧಿಸಿದ್ದರು.

### ಹಿಂಸಾಚಾರಕ್ಕೆ ಸಂಚು: ಉಗ್ರನಿಗೆ ಆರು ವರ್ಷ ಕಠಿಣ ಜೈಲು ಶಿಕ್ಷೆ

ಶಿವಮೊಗ್ಗದಲ್ಲಿ ಐಎಸ್ ಭಯೋತ್ಪಾದನಾ ಪಿತೂರಿ ಪ್ರಕರಣದಲ್ಲಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದ ಅರಾಫತ್ ಅಲಿಗೆ ಎನ್‌ಐಎ ವಿಶೇಷ ನ್ಯಾಯಾಲಯ, ಆರು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹47 ಸಾವಿರ ದಂಡ ವಿಧಿಸಿ ಮಂಗಳವಾರ ಆದೇಶಿಸಿದೆ.

ಎನ್‌ಐಎ ಅಧಿಕಾರಿಗಳು 12 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದ ಅರಾಫತ್ ಅಲಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

2022ರ ಆ.15ರಂದು ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಶಿವಮೊಗ್ಗದ ಅಮೀರ್ ಅಹ್ಮದ್ ವೃತ್ತದಲ್ಲಿ ಬ್ಯಾನರ್ ಹಾಕುವಾಗ ನಡೆದ ಗಲಾಟೆ ವೇಳೆ ದುಷ್ಕರ್ಮಿಗಳು ಪ್ರೇಮ್ ಸಿಂಗ್ ಅವರಿಗೆ ಚಾಕುವಿನಿಂದ ಇರಿದಿದ್ದರು. ಪ್ರಕರಣದಲ್ಲಿ ಜಬೀವುಲ್ಲಾ, ತನ್ವೀರ್ ಅಹಮ್ಮದ್, ನದೀಮ್ ಫೈಜಲ್ ಸೇರಿದಂತೆ ಕೆಲವರನ್ನು ಪೊಲೀಸರು ಬಂಧಿಸಿದ್ದರು. ತನಿಖೆ ವೇಳೆ, ಶಂಕಿತ ಉಗ್ರರ ಪಾತ್ರ ಇರುವುದು ಪತ್ತೆ ಆಗಿತ್ತು. ಆರೋಪಿ ಜಬೀವುಲ್ಲಾಗೆ ತೀರ್ಥಹಳ್ಳಿಯ ಶಾರೀಕ್ ಗಲಾಟೆ ನಡೆಸಲು ಪ್ರಚೋದನೆ ನೀಡಿದ್ದ ವಿಚಾರವು ಪೊಲೀಸ್ ತನಿಖೆಯಿಂದ ಗೊತ್ತಾಗಿತ್ತು.

ಶಿವಮೊಗ್ಗದ ಸೈಯದ್ ಯಾಸೀನ್, ಮಂಗಳೂರಿನ ಮಾಝ್, ತೀರ್ಥಹಳ್ಳಿಯ ಶಾರೀಕ್ ಜತೆಗೆ ಸೇರಿಕೊಂಡು ಬಾಂಬ್ ತಯಾರಿಸಿ ತುಂಗಾ ನದಿಯ ದಡದಲ್ಲಿ ಪ್ರಾಯೋಗಿಕವಾಗಿ ಬಾಂಬ್ ಸ್ಫೋಟಿಸಿದ್ದು, ಧ್ವಜ ಸುಟ್ಟಿರುವ ವಿಚಾರವು ಸ್ಥಳೀಯ ಪೊಲೀಸರು ನಡೆಸಿದ ತನಿಖೆಯಿಂದ ದೃಢಪಟ್ಟಿತ್ತು. ಅದಾದ ಮೇಲೆ ಎನ್‌ಐಎ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ರಾಜ್ಯದಲ್ಲಿ ಐಎಸ್ ಉಗ್ರರ ಚಟುವಟಿಕೆಗಳನ್ನು ವಿಸ್ತರಿಸುವುದು, ವಿಧ್ವಂಸಕ ಕೃತ್ಯಗಳು, ಹಿಂಸಾಚಾರ ನಡೆಸಲು ಸಂಚು ರೂಪಿಸಿದ್ದ ವಿಚಾರವು ಎನ್‌ಐಎ ತನಿಖೆಯಿಂದ ಗೊತ್ತಾಗಿತ್ತು.



ಅರಾಫತ್

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಶಾರೀಕ್‌ಗೂ ಅರಾಫತ್ ಅಲಿಗೂ ನಂಟಿರುವುದು ಎನ್‌ಐಎ ತನಿಖೆಯಿಂದ ಪತ್ತೆಯಾಗಿತ್ತು. ಬಂಧನದ ಭೀತಿಯಿಂದ ಅರಾಫತ್ ಅಲಿ ವಿದೇಶಕ್ಕೆ ತೆರಳಿದ್ದ. 2023ರ ಸೆ.14ರಂದು ಕೀನ್ಯಾದಿಂದ ದೆಹಲಿಗೆ ಬಂದಾಗ ಅರಾಫತ್ ಅಲಿಯನ್ನು ಬಂಧಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಬಿ.ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

## ರಾಜಕೀಯ ಕಾಲೇಜು ಆರಂಭಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮುಖ್ಯಮಂತ್ರಿಗಳು, ಸಭಾಪತಿಗಳು, ಸಚಿವರ ಸಾಧನೆ, ಉತ್ತಮ ಕಾರ್ಯಗಳ ಬಗ್ಗೆ ಯುವ ರಾಜಕಾರಣಿಗಳಿಗೆ ತಿಳಿಸುವ ಹಾಗೂ ಮಾರ್ಗದರ್ಶನ ಮಾಡುವ ಉದ್ದೇಶದಿಂದ ‘ರಾಜಕೀಯ ಕಾಲೇಜು’ ಆರಂಭಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಬಿ.ಬಸವಲಿಂಗಪ್ಪ ಅವರ ಜನ್ಮಶತಮಾನೋತ್ಸವ ಆಚರಣಾ ಸಮಿತಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಏರ್ಪಡಿಸಿದ್ದ ಮಾಜಿ ಸಚಿವ ಬಿ.ಬಸವಲಿಂಗಪ್ಪ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಬಹುತೇಕ ಯುವ ರಾಜಕಾರಣಿಗಳಿಗೆ ರಾಮಕೃಷ್ಣ ಹೆಗಡೆ, ಕೆ.ಎಚ್.ಪಾಟೀಲ, ಬಿ.ಬಸವಲಿಂಗಪ್ಪ ಅವರ ಬಗ್ಗೆ ಮಾಹಿತಿಯೇ ಇಲ್ಲ. ರಾಜಕೀಯ ನಾಯಕರ ಹೋರಾಟ, ಇತಿಹಾಸ ಹಾಗೂ ಶಾಸನ ಸಭೆಯಲ್ಲಿ ನಡೆದ ಪ್ರಮುಖ ಚರ್ಚೆಗಳ ಬಗ್ಗೆ ಹೊಸ ಪೀಳಿಗೆಗೆ ತಿಳಿಸುವುದು ಅವಶ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಸಚಿವ ಬಿ.ಬಸವಲಿಂಗಪ್ಪ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು. ಎಚ್‌.ಕೆ. ಪಾಟೀಲ, ಬಸವರಾಜ ಹೊರಟ್ಟಿ, ಎಲ್‌.ಹನುಮಂತಯ್ಯ, ವಿ.ಆರ್‌.ಸುದರ್ಶನ್, ಕೆ.ಆರ್‌.ರಮೇಶ್ ಕುಮಾರ್ ಇದ್ದರು ಪ್ರಜಾವಾಣಿ ಚಿತ್ರ

‘ಬೂಸಾ’ ಹೇಳಿಕೆಯ ಮೂಲಕ ಸಮಾಜದಲ್ಲಿ ಚಿಂತನೆಗೆ ದಾರಿ ಮಾಡಿಕೊಟ್ಟ ಬಸವಲಿಂಗಪ್ಪ, ಅಸಮಾನತೆಯ ವಿರುದ್ಧ ಪ್ರಶ್ನಿಸುವ ಧೈರ್ಯವನ್ನು ಜನರಲ್ಲಿ ಮೂಡಿಸಿದರು. ಕೇವಲ ರಾಜಕಾರಣಿ ಮಾತ್ರವಲ್ಲ, ದಲಿತ ಚಿಂತನೆಗೆ ದಿಕ್ಕು ತೋರಿದ ಬೌದ್ಧಿಕ ನಾಯಕ’ ಎಂದು ತಿಳಿಸಿದರು.

ಕಾನೂನು ಸಚಿವ ಎಚ್‌.ಕೆ.ಪಾಟೀಲ ಮಾತನಾಡಿ, ‘ಕೆ.ಎಚ್.ಪಾಟೀಲ ಅವರೊಂದಿಗೆ ಬಸವಲಿಂಗಪ್ಪ ತಾತ್ವಿಕ ಭಿನ್ನಾಭಿಪ್ರಾಯ ಹೊಂದಿದ್ದರು. ಆದರೆ, ಗದಗ ನಗರಸಭೆಗೆ ಟಿಕೆಟ್ ಹಂಚಿಕೆ ವಿಚಾರದಲ್ಲಿ ಅವರು ಸೂಚಿಸಿದವರಿಗೆ ಪಾಟೀಲರು ಟಿಕೆಟ್ ಕೊಟ್ಟಿದ್ದರು’ ಎಂದರು. ‘ಜನ್ಮ ಶತಮಾನೋತ್ಸವದ ಮುಂದಿನ ಕಾರ್ಯಕ್ರಮ ಧಾರವಾಡದಲ್ಲಿ ಆಚರಿಸಬೇಕು’ ಎಂದು ಸಂಘಟಕರಿಗೆ ಮನವಿ ಮಾಡಿದರು.

ಇದೇ ವೇಳೆ ಸಾಹಿತಿಗಳಾದ ಅಗ್ರಹಾರ ಕೃಷ್ಣಮೂರ್ತಿ, ಕಲ್ಲೂರು ಮೇಘರಾಜ, ಕರೀಗೌಡ ಬೀಚನಹಳ್ಳಿ, ಗಂಗಣ್ಣ ಕೆಂಚೇನಹಳ್ಳಿ ಅವರನ್ನು ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯರಾದ ಎಂ.ಆರ್.ಸೀತಾರಾಮ್, ಎಫ್.ಎಚ್.ಜಕ್ಕಪ್ಪನವರ, ಮಾಜಿ ಶಾಸಕ ಮೋಹನ ಕೊಂಡಜ್ಜಿ, ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಎಸ್.ಎಂ.ಜಯಕರ್, ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಕುಲಪತಿ ಬಿ.ರಮೇಶ್, ಕಾಂಗ್ರೆಸ್ ಮುಖಂಡ ಎಂ. ಹೊನ್ನೇಗೌಡ ಹಾಜರಿದ್ದರು.

> ನೇರ, ನಿಷ್ಠುರವಾಗಿ ಮಾತನಾಡುತ್ತಿದ್ದ ಬಸವಲಿಂಗಪ್ಪ, ನುಡಿದಂತೆ ನಡೆಯುತ್ತಿದ್ದರು. ರಾಜ್ಯದಲ್ಲಿ ಮಲ ಹೊರುವ ಪದ್ಧತಿ ನಿಷೇಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು
>
> **ಕೆ.ಆರ್.ರಮೇಶ್ ಕುಮಾರ್,** ಕಾಂಗ್ರೆಸ್ ನಾಯಕ

> ದಲಿತರು, ತಳ ಸಮುದಾಯದವರಿಗೆ ನ್ಯಾಯ ಒದಗಿಸಲು ಶ್ರಮಿಸುತ್ತಿದ್ದ ಬಸವಲಿಂಗಪ್ಪ ಅವರಿಗೆ ಮುಖ್ಯಮಂತ್ರಿ ಆಗುವ ಅವಕಾಶ ತಪ್ಪಿತ್ತು. ಈಗಲೂ ದಲಿತರನ್ನು ಸಿ.ಎಂ ಮಾಡಿ ಎಂದು ಬೇಡುವ ಸ್ಥಿತಿ ಬಂದಿದೆ
>
> **ಮಾವಳ್ಳಿ ಶಂಕರ್,** ದಲಿತ ಮುಖಂಡ

## ಶ್ರೀಕಿಯ ಹಾರ್ಡ್‌ಡಿಸ್ಕ್ ಇ.ಡಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮ ವಹಿವಾಟು ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಮನೆಯಲ್ಲಿ ಸತತ ಮೂವತ್ತಾರು ತಾಸು ಶೋಧ ನಡೆಸಿದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಾರ್ಡ್‌ಡಿಸ್ಕ್‌ಗಳು ಮತ್ತು ಲ್ಯಾಪ್‌ಟಾಪ್ ಅನ್ನು ವಶಕ್ಕೆ ಪಡೆದಿದ್ದಾರೆ.

ಈ ಪ್ರಕರಣದಲ್ಲಿ ಇ.ಡಿ ದೆಹಲಿ ಕೇಂದ್ರ ಕಚೇರಿಯ ಅಧಿಕಾರಿಗಳು ನಗರದ 12 ಸ್ಥಳಗಳೂ ಸೇರಿ ದೇಶದಾದ್ಯಂತ 17 ಕಡೆ ಸೋಮವಾರ ದಾಳಿ ನಡೆಸಿದ್ದರು. ಶ್ರೀಕಿ ಜತೆಗೆ ಹಣಕಾಸು ವಹಿವಾಟು ನಡೆಸಿದ್ದ ಕಾರಣಕ್ಕೆ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಅವರ ಮಗ ಮಹಮ್ಮದ್ ನಲಪಾಡ್ ಹ್ಯಾರಿಸ್ ಮನೆಯಲ್ಲೂ ಶೋಧ ನಡೆಸಿದ್ದರು.

ಶ್ರೀಕಿ ಮನೆಯಲ್ಲಿ ಸೋಮವಾರ ಬೆಳಿಗ್ಗೆ ದಾಳಿ ನಡೆಸಿದ್ದ 14 ಅಧಿಕಾರಿಗಳು ಮಂಗಳವಾರ ರಾತ್ರಿ 7ರವರೆಗೆ ಶೋಧ ನಡೆಸಿದರು. ಪ್ರಕರಣದ ವಿಚಾರದಲ್ಲಿ ಅಧಿಕಾರಿಗಳ ವಿಚಾರಣೆಗೆ ಶ್ರೀಕಿ ಸಹಕರಿಸಿಲ್ಲ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ. ಈ ಕಾರಣದಿಂದಲೇ ಶೋಧ ಕಾರ್ಯ ವಿಳಂಬವಾಯಿತು ಎಂದು ಮೂಲಗಳು ತಿಳಿಸಿವೆ.

ನಲಪಾಡ್ ಮತ್ತು ಶ್ರೀಕಿ ಮಧ್ಯೆ ಹಣಕಾಸು ವ್ಯವಹಾರ ಇತ್ತು. ಇಬ್ಬರ ಖಾತೆಗಳಿಂದಲೂ ಪರಸ್ಪರರಿಗೆ ಹಣ ವರ್ಗಾವಣೆಯಾಗಿದೆ. ಶ್ರೀಕಿ, ನಲಪಾಡ್ ಮತ್ತು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಮಗ ಹಲವು ಬಾರಿ ಪಾರ್ಟಿ ನಡೆಸಿದ್ದಾರೆ. ನಲಪಾಡ್ ಮತ್ತು ಪೊಲೀಸ್ ಅಧಿಕಾರಿಯ ಮಗ ಇಬ್ಬರೂ ಸೇರಿ ಶ್ರೀಕಿಗೆ ಒಂದು ಸ್ಪೋರ್ಟ್ಸ್ ಕಾರು ಖರೀದಿಸಿದ್ದರು. ಕೆಲವೇ ದಿನಗಳ ಬಳಕೆಯ ನಂತರ ಅದನ್ನು ಮಾರಾಟ ಮಾಡಿದ್ದರು. ಆ ಹಣದ ವಿಚಾರವಾಗಿಯೂ ಪ್ರಶ್ನೆಗಳನ್ನು ಕೇಳಲಾಗಿದೆ ಎಂದು ಮೂಲಗಳು ಹೇಳಿವೆ.

ಶೋಧದ ವೇಳೆ ಶ್ರೀಕಿ ಮನೆಯಲ್ಲಿದ್ದ ಹಾರ್ಡ್‌ಡಿಸ್ಕ್, ಲ್ಯಾಪ್‌ಟಾಪ್‌ಗಳನ್ನು ಅಧಿಕಾರಿಗಳು ಪರಿಶೀಲಿಸಿದರು. ಆನಂತರ ಮಹಜರು ನಡೆಸಿ, ವಶಕ್ಕೆ ಪಡೆದರು ಎಂಬುದು ಗೊತ್ತಾಗಿದೆ.

### ರಾಜಕೀಯ ಪ್ರೇರಿತ: ನಲಪಾಡ್

‘ಬಿಟ್‌ಕಾಯಿನ್ ಪ್ರಕರಣದ ತನಿಖೆಗೆ ನಾನು ಸಹಕರಿಸಿದ್ದೇನೆ. ಎಸ್‌ಐಟಿ ಕರೆದಾಗ ವಿಚಾರಣೆಗೆ ಹಾಜರಾಗಿದ್ದೇನೆ. ಇ.ಡಿ ನೋಟಿಸ್ ನೀಡಿದಾಗ ಉತ್ತರಿಸಿದ್ದೇನೆ. ಹೀಗಿದ್ದೂ ಈಗ ನಡೆದಿರುವ ದಾಳಿ ರಾಜಕೀಯ ಪ್ರೇರಿತವಾದುದು’ ಎಂದು ಮಹಮ್ಮದ್ ನಲಪಾಡ್ ಹ್ಯಾರಿಸ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಮಗೆ ತೊಂದರೆ ನೀಡಲು ಈ ಕಾರ್ಯಾಚರಣೆ ನಡೆಸಿದ್ದಾರೆ’ ಎಂದು ಆರೋಪಿಸಿದರು.

‘ಇ.ಡಿ ದಾಳಿಯ ವೇಳೆ ನನ್ನ ಮನೆಯಲ್ಲಿ ನಯಾಪೈಸೆ ದೊರೆತಿಲ್ಲ. ನನ್ನ ಮನೆಯಲ್ಲಿ ₹37 ಲಕ್ಷ ನಗದು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂಬುದು ಸುಳ್ಳು’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸಚಿವ ಜಮೀರ್ ಅಹಮದ್ ಖಾನ್ ಮತ್ತು ನಸೀರ್ ಅಹಮದ್ ಅವರು ನಲಪಾಡ್ ಅವರ ಮನೆಗೆ ಭೇಟಿ ನೀಡಿದ್ದರು. ಆನಂತರ ಸುದ್ದಿಗಾರರ ಜತೆ ಮಾತನಾಡಿದ ಜಮೀರ್, ‘ಚುನಾವಣೆ ಸಂದರ್ಭದಲ್ಲಿ ಈ ದಾಳಿ ನಡೆಸಲಾಗಿದೆ. ಬಿಜೆಪಿ ನಾಯಕರ ಮನೆಗಳ ಮೇಲೆ ಏಕೆ ದಾಳಿ ನಡೆಯುವುದಿಲ್ಲ’ ಎಂದು ಪ್ರಶ್ನಿಸಿದರು.

# ‘ಕಲ್ಯಾಣ’ದ ವಿವಿಧೆಡೆ ತಂಪೆರೆದ ವರುಣ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯೂ ಸೇರಿದಂತೆ ಕಲ್ಯಾಣ ಕರ್ನಾಟಕದ ವಿವಿಧೆಡೆ ಮಂಗಳವಾರ ಉತ್ತಮ ಮಳೆಯಾಗಿದೆ. ಬಿಸಿಲಿನ ತಾಪಕ್ಕೆ ಬಸವಳಿದಿದ್ದ ಜನರು ತುಸು ನಿರಾಳಗೊಂಡರು.

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಗ್ರಾಮೀಣ ಭಾಗಗಳಲ್ಲಿ ಗುಡುಗು ಸಹಿತ ಮಳೆಯಾಗಿದೆ. ತಾಳಮಡಗಿಯಲ್ಲಿ ಮನೆಗಳಿಗೆ ನೀರು ನುಗ್ಗಿದೆ.

ಕಲಬುರಗಿ ನಗರ ಸೇರಿದಂತೆ ಚಿತ್ತಾಪುರ ತಾಲ್ಲೂಕಿನ ವಿವಿಧೆಡೆ ಮಧ್ಯಾಹ್ನ ಮೂರು ಗಂಟೆಗೆ ರಭಸವಾಗಿ ಮಳೆ ಸುರಿದಿದೆ.

ಚಿತ್ತಾಪುರ ಪಟ್ಟಣ ಸೇರಿ ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದೆ. ತಾಲ್ಲೂಕಿನ ಗುಂಡಗುರ್ತಿ ಮುಗಟಾ ನಡುವೆ ರಸ್ತೆಯಲ್ಲಿ ಮರ ಬಿದ್ದು, ಕಲಬುರಗಿ–ಸೇಡಂ ರಾಜ್ಯ ಹೆದ್ದಾರಿಯಲ್ಲಿ ಎರಡು ಗಂಟೆಗಳ ಕಾಲ ವಾಹನಗಳ ಸಂಚಾರ ಸ್ತಬ್ಧವಾಗಿತ್ತು.

ಕಾಳಗಿ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದ್ದು, ಬಿರುಗಾಳಿ ಹಾಗೂ ಮಳೆಗೆ ಮರ ಬಿದ್ದಿದೆ. ಕೋರವಾರ ಗ್ರಾಮದಲ್ಲಿ ಮಲ್ಲಪ್ಪ ಕಲ್ಲಪ್ಪ ಕುಪನೂರ ಅವರು ಸಾಕಿದ್ದ 5 ಕುರಿ ಸತ್ತಿವೆ.

ಕೋರವಾರ–ವಚ್ಚಾ ನಡುವಿನ ರಸ್ತೆಯ ಸೇತುವೆ ಬಳಿ ಅಲ್ಲಲ್ಲಿ ಗಿಡ–ಮರಗಳು ಹೆದ್ದಾರಿ ಮೇಲೆ ಉರುಳಿ ಬಿದ್ದಿದ್ದವು. ಇದರಿಂದ ವಾಹನ ಸವಾರರು ಕೆಲಕಾಲ ಪರದಾಡಿದರು.

ಯಾದಗಿರಿ ನಗರ, ಸುತ್ತಲಿನ ಗ್ರಾಮಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗಿದೆ. ರಾಯಚೂರು ಜಿಲ್ಲೆಯತಿತಗ ಲಿಂಗಸುಗೂರು, ಮಸ್ಕಿ, ಕವಿತಾಳ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

**ವಿಜಯನಗರ, ಗದಗ ಜಿಲ್ಲೆಯಲ್ಲಿ ಮಳೆ:** (ಹುಬ್ಬಳ್ಳಿ ವರದಿ): ವಿಜಯನಗರ, ವಿಜಯಪುರ, ಗದಗ ಜಿಲ್ಲೆಯ ಕೆಲವಡೆ ಮಂಗಳವಾರ ಗುಡುಗು, ಸಿಡಿಲು ಜೊತೆಗೆ ಆಲಿಕಲ್ಲು ಮಳೆಯಾಯಿತು. ಅಲ್ಲಲ್ಲಿ ಮನೆಗಳಿಗೆ ಹಾನಿಯಾಯಿತು.

ವಿಜಯನಗರ ಜಿಲ್ಲೆಯ ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಇಂಡಿ, ತಾಳಿಕೋಟೆ, ಮುದ್ದೇಬಿಹಾಳ, ತಿಕೋಟಾ ಮತ್ತು ಗದಗ ಜಿಲ್ಲೆಯ ಗಜೇಂದ್ರಗಡ, ಲಕ್ಷ್ಮೇಶ್ವರ ಮತ್ತು ನರೇಗಲ್‌ನಲ್ಲಿ ಮಳೆಯಾಯಿತು.



ಕಲಬುರಗಿ ನಗರದಲ್ಲಿ ಮಂಗಳವಾರ ಮಳೆಯಲ್ಲೇ ವ್ಯಕ್ತಿಯೊಬ್ಬರು ಟಾಂಗಾದಲ್ಲಿ ಗುಜರಿ ಸಾಮಗ್ರಿ ಸಾಗಿಸಿದರು ಚಿತ್ರ: ತಾಜುದ್ದೀನ್ ಆಜಾದ್

# ಅರ್ಜಿ ಪರಿಶೀಲನೆಗೆ ಸುಪ್ರೀಂ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** 14 ವರ್ಷಗಳಿಗೂ ಹೆಚ್ಚಿನ ಶಿಕ್ಷೆಯ ಅವಧಿಯ ಮೇಲ್ಮನವಿಗಳನ್ನು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ಮಾತ್ರ ವಿಚಾರಣೆ ಮಾಡಬೇಕು ಎಂಬುದರ ಕುರಿತ ಅರ್ಜಿ ಪರಿಶೀಲಿಸಲು ಸುಪ್ರೀಂಕೋರ್ಟ್ ಸಮ್ಮತಿಸಿದೆ. ನ್ಯಾಯಮೂರ್ತಿಗಳಾದ ಕೆ.ವಿ ವಿಶ್ವನಾಥನ್ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಭಾರತದ ಅಟಾರ್ನಿ ಜನರಲ್‌ಗೆ ನೋಟಿಸ್ ಜಾರಿ ಮಾಡಿದೆ.

ಮೇಲ್ಮನವಿದಾರರ ಪರ ವಾದ ಮಂಡಿಸಿದ ವಕೀಲ ಎ. ಸಿರಾಜುದ್ದೀನ್, ‘ಹಲವು ಹೈಕೋರ್ಟ್‌ಗಳಲ್ಲಿ 10 ವರ್ಷಕ್ಕೂ ಮೇಲ್ಪಟ್ಟ ಮೇಲ್ಮನವಿ ಅರ್ಜಿಗಳನ್ನು ವಿಭಾಗೀಯ ಪೀಠವೇ ಪರಿಶೀಲಿಸುತ್ತಿದೆ‘ ಎಂದರು.

‘2012ರ ಪೋಕ್ಸೊ ಕಾಯ್ದೆಯ ಸೆಕ್ಷನ್ 6 ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯವು ಅಪರಾಧಿಗೆ 20 ವರ್ಷಗಳ ಶಿಕ್ಷೆ ವಿಧಿಸಿದೆ. ಆದರೆ, ನ್ಯಾಯಾಲಯವು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376-ಎಬಿ ಅಡಿಯಲ್ಲಿ ಪ್ರತ್ಯೇಕ ಶಿಕ್ಷೆ ವಿಧಿಸಿಲ್ಲ. ಮೇಲ್ಮನವಿಯ ವಿಚಾರಣೆ ವೇಳೆ 2019 ರಲ್ಲಿ ಪೋಕ್ಸೊ ಕಾಯ್ದೆ ತಿದ್ದುಪಡಿಯಾಗಿರುವುದನ್ನು ಗಮನಿಸಿದ ಹೈಕೋರ್ಟ್, 20 ವರ್ಷಗಳ ಶಿಕ್ಷೆಯನ್ನು ಐಪಿಸಿಯ ಸೆಕ್ಷನ್ 376-ಎಬಿ ಅಡಿಯಲ್ಲಿ ಅಪರಾಧಕ್ಕೆ ವಿಧಿಸಲಾಗಿದೆ ಹೊರತು ಪೋಕ್ಸೊ ಅಪರಾಧಕ್ಕೆ ಅಲ್ಲ ಎಂದು ಹೇಳಿತ್ತು‘.

# ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಭಾಲ್ಕಿ ಸಜ್ಜು

ಪ್ರಜಾವಾಣಿ ವಾರ್ತೆ

**ಬೀದರ್:** ಭಾಲ್ಕಿ ಹಿರೇಮಠ ಸಂಸ್ಥಾನದ ಹಿರಿಯ ಸ್ವಾಮೀಜಿ ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಭಾಲ್ಕಿ ಪಟ್ಟಣ ಸಜ್ಜುಗೊಂಡಿದೆ.



ಬಸವಲಿಂಗ ಪಟ್ಟದ್ದೇವರು

ಪಟ್ಟಣದ ಚನ್ನ-ಬಸವಾಶ್ರಮದಲ್ಲಿ-ಎರಡು ದಿನಗಳಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ.

ಬುಧವಾರ (ಏ.22) ಬೆಳಿಗ್ಗೆ 10ಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ಬಿ.ಎಸ್.ಯಡಿಯೂರಪ್ಪ, ಸಚಿವ ಈಶ್ವರ ಬಿ.ಖಂಡ್ರೆ, ಸಂಸದ ಸಾಗರ್ ಖಂಡ್ರೆ, ಗದಗ–ಡಂಬಳ ಜಗದ್ಗುರು ತೋಂಟದಾರ್ಯ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ, ಹಾರಕೂಡ ಚನ್ನವೀರ ಶಿವಾಚಾರ್ಯರು ಪಾಲ್ಗೊಳ್ಳಲಿದ್ದಾರೆ.

# ‘ಕೃಷಿ ಇಲಾಖೆ: ನೇಮಕಾತಿ ತಡೆಗೆ ಆಗ್ರಹ’

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ‘ಒಳಮೀಸಲಾತಿ ಅನ್ವಯಿಸದೇ 121 ಕೃಷಿ ಅಧಿಕಾರಿಗಳು ಹಾಗೂ 769 ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿರುವುದು ಅಕ್ಷಮ್ಯ. ಒಳಮೀಸಲಾತಿ ನಿಗದಿಯಾಗುವವರೆಗೂ ಈ ನೇಮಕಾತಿ ಆದೇಶ ಹಿಂದಕ್ಕೆ ಪಡೆಯಬೇಕು’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಒತ್ತಾಯಿಸಿದರು.

‘ಒಳಮೀಸಲಾತಿ ಸಂಬಂಧ ಏ. 24ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ. ಕೆಲವೇ ದಿನಗಳಲ್ಲಿ ಎಲ್ಲ ಸಮಸ್ಯೆಗಳು ಬಗೆಹರಿಯಲಿವೆ. ಒಳಮೀಸಲಾತಿ ಜಾರಿ ಮಾಡದೆ ಕೃಷಿ ಅಧಿಕಾರಿಗಳ ನೇಮಕಾತಿ ನಡೆಸಿದರೆ ಸುಮ್ಮನಿರಲಾಗದು. ಈ ಕುರಿತು ಏ. 22ರಂದು ಮಾದಿಗ ಸಮುದಾಯದ ಸಚಿವರು, ಶಾಸಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸುತ್ತೇವೆ’ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಕೃಷಿ ಅಧಿಕಾರಿಗಳ ನೇಮಕಾತಿ ಹೊಣೆಯನ್ನು ಕೆಪಿಎಸ್‌ಸಿಗೆ ನೀಡಲಾಗಿತ್ತು. ಅಲ್ಲದೆ, ನೇಮಕಾತಿ ಮುಂದೂಡಲಾಗಿತ್ತು. ಈಗ ಏಕಾಏಕಿ ಕೆಇಎ ಮೂಲಕ 890 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿರುವುದು ಅಚ್ಚರಿ ಮೂಡಿಸಿದೆ’ ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in





## ಸುಭಾಷಿತ

ಗಾಳಿ ನೆರವಿರುವ ತನಕ ಪಟದ ಹಾರಾಟ; ಗದ್ದುಗೆ ಗಟ್ಟಿಯಿರುವ ತನಕ ಪುಢಾರಿ ಎಗರಾಟ.

–ಕೆ.ಎಸ್. ನಿಸಾರ್ ಅಹಮದ್

## ಸಂಪಾದಕೀಯ

# ದಕ್ಷಿಣ ಭಾರತದಲ್ಲಿ 'ಸುಪ್ರೀಂ' ಪೀಠ ನ್ಯಾಯಕ್ಕೆ ಸಮಾನ ಅವಕಾಶದ ತತ್ತ್ವ

**ಸುಪ್ರೀಂ ಕೋರ್ಟ್‌ನ** ಪೀಠವೊಂದು ದಕ್ಷಿಣ ಭಾರತದಲ್ಲಿ ಆರಂಭ ಆಗಬೇಕು ಎಂಬ ದೀರ್ಘಕಾಲದ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುನರುಚ್ಚರಿಸಿದ್ದಾರೆ. ಈ ಮೂಲಕ, ನ್ಯಾಯ ಕೋರುವ ಅವಕಾಶವು ಎಲ್ಲರಿಗೂ ಸಮಾನವಾಗಿ ಸಿಗಬೇಕು ಎಂಬ ಚರ್ಚೆಯತ್ತ ಮತ್ತೆ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಅವರ ಸಮ್ಮುಖದಲ್ಲಿ ಮಾಡಿದ ಭಾಷಣದಲ್ಲಿ, ಪೀಠವನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಿದರೆ ನ್ಯಾಯ ಕೋರುವ ಅವಕಾಶ ಲಕ್ಷಾಂತರ ಮಂದಿಗೆ ಸಿಗಲಿದೆ ಎಂದು ಮುಖ್ಯಮಂತ್ರಿ ವಾದಿಸಿದ್ದಾರೆ. ಪ್ರಸ್ತುತ ದಕ್ಷಿಣ ಭಾರತದ ಜನರಿಗೆ ದೂರ ಮತ್ತು ವೆಚ್ಚದ ಕಾರಣದಿಂದಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದು ಕಷ್ಟದ ಕೆಲಸವಾಗಿದೆ. ಸಿದ್ದರಾಮಯ್ಯ ಅವರು ಮಂಡಿಸಿರುವ ಬೇಡಿಕೆ ಸಂವಿಧಾನಬದ್ಧವಾಗಿದೆ. ಸುಪ್ರೀಂ ಕೋರ್ಟ್‌ನ ಶಾಶ್ವತ ಪೀಠವು ದೆಹಲಿಯಲ್ಲಿರಬೇಕು ಎಂದು ಸಂವಿಧಾನದ 130ನೆಯ ವಿಧಿ ಹೇಳುತ್ತದೆ. ಸಿಜೆಐ ಅವರು ರಾಷ್ಟ್ರಪತಿಯವರ ಒಪ್ಪಿಗೆಯೊಂದಿಗೆ ಇತರ ಸ್ಥಳಗಳಲ್ಲಿಯೂ ಪೀಠ ಆರಂಭಿಸಬಹುದು ಎಂದೂ ಆ ವಿಧಿ ಹೇಳುತ್ತದೆ.

ಸುಪ್ರೀಂ ಕೋರ್ಟ್‌ನ ಮೇಲೆ ಹೆಚ್ಚುತ್ತಿರುವ ಹೊರೆಯು ಈ ಸುಧಾರಣೆಯ ಅಗತ್ಯವನ್ನು ಒತ್ತಿಹೇಳುತ್ತಿದೆ. ಈ ವರ್ಷದ ಮಾರ್ಚ್ ವೇಳೆಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿಯಿದ್ದ ಪ್ರಕರಣಗಳ ಸಂಖ್ಯೆ 92 ಸಾವಿರಕ್ಕೂ ಹೆಚ್ಚಾಗಿದೆ ಎಂಬ ಮಾಹಿತಿ ಇದೆ. ಇದು ಕೋರ್ಟ್‌ನ ಮೇಲಿರುವ ಹೊರೆಯನ್ನು ಸೂಚಿಸುತ್ತಿದೆ. 18ನೆಯ ಕಾನೂನು ಆಯೋಗವು ಒಂದು ವ್ಯಾವಹಾರಿಕ ಪರಿಹಾರವನ್ನು ಈ ಸಮಸ್ಯೆಗೆ ನೀಡಿತ್ತು. ದೆಹಲಿ, ಚೆನ್ನೈ ಅಥವಾ ಹೈದರಾಬಾದ್, ಕೋಲ್ಕತ್ತ ಮತ್ತು ಮುಂಬೈನಲ್ಲಿ ಒಟ್ಟು ನಾಲ್ಕು ಪೀಠಗಳನ್ನು ಆರಂಭಿಸಬೇಕು; ಇವು ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಬೇಕು; ದೆಹಲಿಯಲ್ಲಿನ ಕೋರ್ಟ್‌ನ ಪ್ರಧಾನ ಪೀಠವು ಸಂವಿಧಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಆಲಿಸಬೇಕು ಎಂಬ ಸಲಹೆಯನ್ನು ಆಯೋಗ ನೀಡಿತ್ತು. ಹೀಗೆ ಮಾಡಿದಾಗ ಕೋರ್ಟ್‌ನ ಕೆಲಸಗಳ ಹೊರೆ ಹಂಚಿಕೆ ಆಗುತ್ತದೆ, ಕೋರ್ಟ್‌ನ ಅಧಿಕಾರದಲ್ಲೂ ಬದಲಾವಣೆ ಆಗುವುದಿಲ್ಲ. ಆದರೆ, ಈ ಸಲಹೆಗೆ ವಿರೋಧ ಇದೆ. ನ್ಯಾಯಾಂಗ ವ್ಯವಸ್ಥೆಯಲ್ಲಿನ ಆತಂಕವೂ ಇದಕ್ಕೆ ಒಂದು ಕಾರಣವಾಗಿರಬಹುದು. ಭಿನ್ನ ಪೀಠಗಳಿಂದ ಭಿನ್ನ ಬಗೆಯ ತೀರ್ಪುಗಳು ಬರಬಹುದು, ಸುಪ್ರೀಂ ಕೋರ್ಟ್ ಎಂಬುದು ರಾಷ್ಟ್ರಮಟ್ಟದಲ್ಲಿ ನ್ಯಾಯಾಂಗದ ಪಾಲಿನ ಪ್ರಧಾನ ಸ್ತಂಭ ಎಂಬ ಭಾವನೆಗೆ ಚ್ಯುತಿ ಬರಬಹುದು ಎಂಬ ಆತಂಕಗಳು ಆಯೋಗದ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಬಿಟ್ಟಿಲ್ಲ. ಈ ಆತಂಕಗಳಲ್ಲಿ ಹುರುಳಿಲ್ಲದೆ ಇಲ್ಲ. ಆದರೆ, ಅವು ಹಿಂಜರಿಕೆಗೆ ಕಾರಣವಾಗಬೇಕಾದ ಸಂಗತಿಗಳೇನೂ ಅಲ್ಲ. ತೀರ್ಪುಗಳು ಭಿನ್ನವಾಗಿ ಪ್ರಕಟವಾದರೆ, ವಿಸ್ತೃತ ಪೀಠವು ಅವುಗಳ ಬಗ್ಗೆ ಪರಿಶೀಲನೆ ನಡೆಸುವ ವ್ಯವಸ್ಥೆ ಹಾಗೂ ಪೂರ್ವನಿದರ್ಶನವನ್ನು ಪ್ರಮಾಣವಾಗಿ ಸ್ವೀಕರಿಸುವ ವ್ಯವಸ್ಥೆಯು ಈಗಾಗಲೇ ಇದೆ. ದೇಶದ ಬಹುದೊಡ್ಡ ಜನವರ್ಗವನ್ನು ನ್ಯಾಯಾಂಗ ವ್ಯವಸ್ಥೆಯ ಅಂಚಿನಲ್ಲಿಯೇ ಇರಿಸುವುದರಲ್ಲಿ ಹೆಚ್ಚಿನ ಸಮಸ್ಯೆ ಇದೆ. ದೇಶದ ಉತ್ತರ ಭಾಗದಲ್ಲಿನ ಹೈಕೋರ್ಟ್‌ಗಳು ನೀಡುವ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗುವ ಮೇಲ್ಮನವಿಗಳು ಸುಪ್ರೀಂ ಕೋರ್ಟ್‌ನಲ್ಲಿ ಹೆಚ್ಚಿವೆ. ಇದೇ ವೇಳೆ ದಕ್ಷಿಣ ಭಾರತದ ರಾಜ್ಯಗಳಲ್ಲಿಯೂ ಅದೇ ಪ್ರಮಾಣದಲ್ಲಿ ವ್ಯಾಜ್ಯಗಳು ಇವೆಯಾದರೂ, ಅಲ್ಲಿಂದ ಸಲ್ಲಿಕೆಯಾಗುವ ಮೇಲ್ಮನವಿಗಳ ಪ್ರಮಾಣವು ಬಹಳ ಕಡಿಮೆ ಇದೆ. ದಕ್ಷಿಣ ಭಾರತದವರಿಗೆ ದೆಹಲಿಯು ದೂರವಾಗಿರುವುದು ಒಂದು ಅಡ್ಡಿಯಂತೆ ಆಗಿದೆ. ಪ್ರಯಾಣದ ವೆಚ್ಚ, ವಿಶೇಷ ಪರಿಣತಿ ಇರುವ ವಕೀಲರನ್ನು ದೆಹಲಿಯಲ್ಲಿ ನೇಮಕ ಮಾಡಿಕೊಳ್ಳುವುದು ಅರ್ಜಿದಾರರ ಪಾಲಿಗೆ ಸುಲಭವಲ್ಲ. ಕಾನೂನು ಆಯೋಗವು ಹೇಳಿರುವಂತೆ, ಹಲವರಿಗೆ ನ್ಯಾಯವು ಮರೀಚಿಕೆಯಂತೆ ಆಗುತ್ತದೆ.



ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟ್‌ನ ಪೀಠ ಸ್ಥಾಪಿಸಬೇಕು ಎನ್ನುವ ಬೇಡಿಕೆ ಈಡೇರಿದರೆ, ಕೋರ್ಟ್ ಜನಸಾಮಾನ್ಯರಿಗೆ ಇನ್ನಷ್ಟು ಹತ್ತಿರ ಆದಂತಾಗುತ್ತದೆ.

ದಕ್ಷಿಣ ಭಾರತದ ರಾಜ್ಯಗಳಿಂದ ಮೇಲ್ಮನವಿಗಳು ಬರುವುದು ಕಡಿಮೆ ಎಂದಮಾತ್ರಕ್ಕೆ, ಅಲ್ಲಿನ ಹೈಕೋರ್ಟ್‌ಗಳ ಆದೇಶಗಳನ್ನೆಲ್ಲ ಅರ್ಜಿದಾರರು ಒಪ್ಪಿಕೊಳ್ಳುತ್ತಿದ್ದಾರೆ ಎಂದರ್ಥವಲ್ಲ; ಬದಲಿಗೆ, ಆ ಆದೇಶಗಳನ್ನು ಪ್ರಶ್ನಿಸುವುದು ಅವರಿಗೆ ಕಷ್ಟವಾಗುತ್ತಿದೆ ಎಂದು ಅಖಿಲ ಭಾರತ ವಕೀಲರ ಒಕ್ಕೂಟ ಹೇಳಿದೆ. ಉದಾಹರಣೆಗೆ ಹೇಳುವುದಾದರೆ, ಮದ್ರಾಸ್ ಹೈಕೋರ್ಟ್ ಇತ್ಯರ್ಥಪಡಿಸುವ ಒಂದು ಲಕ್ಷ ಪ್ರಕರಣಗಳ ಪೈಕಿ ಒಂಬತ್ತು ಸಾವಿರ ಪ್ರಕರಣಗಳಲ್ಲಿ ಮಾತ್ರ ಮೇಲ್ಮನವಿ ಸಲ್ಲಿಕೆಯಾಗುತ್ತಿದೆ. ಅರ್ಜಿದಾರನು ಭೌಗೋಳಿಕವಾಗಿ ಎಲ್ಲಿ ನೆಲಸಿದ್ದಾನೆ ಎಂಬುದು ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದರ ಮೇಲೆ ಪರಿಣಾಮ ಬೀರುವಾಗ, ನ್ಯಾಯಕ್ಕೆ ಸಮಾನ ಅವಕಾಶ ಎಂಬ ತತ್ತ್ವಕ್ಕೆ ಭಂಗ ಉಂಟಾಗುತ್ತದೆ. ಹೀಗಾಗಿ ಸಿದ್ದರಾಮಯ್ಯ ಅವರ ಮನವಿಯು ಒಂದು ಪ್ರದೇಶದ ಜನರ ಮನವಿಯಷ್ಟೇ ಅಲ್ಲ, ಅದು ಸಾಂವಿಧಾನಿಕವಾದ ನೆನಪೋಲೆ. ಸುಪ್ರೀಂ ಕೋರ್ಟ್‌ನ ಕೆಲಸವನ್ನು ವಿಕೇಂದ್ರೀಕರಿಸುವುದರಿಂದ ಅದರ ಘನತೆ ತಗ್ಗಿಸಿದಂತೆ ಆಗುವುದಿಲ್ಲ, ಹಾಗೆ ಮಾಡುವುದರಿಂದ ಕೋರ್ಟ್ ಎಲ್ಲರಿಗೂ ಇನ್ನಷ್ಟು ಹತ್ತಿರವಾದಂತೆ ಆಗುತ್ತದೆ. ವಿಶಾಲವಾದ ಗಣರಾಜ್ಯದಲ್ಲಿ ವ್ಯಕ್ತಿಯೊಬ್ಬ ನ್ಯಾಯ ಪಡೆಯುವುದು ಆತ ದೆಹಲಿಯಿಂದ ಎಷ್ಟು ದೂರದಲ್ಲಿದ್ದಾನೆ ಎಂಬುದನ್ನು ಆಧರಿಸಿರಬಾರದು.

### ಚಾಟಿಟಿ



**ನಾಯಕತ್ವದಲ್ಲಿ ಬಹುತ್ವ**

ಬಸವಣ್ಣ ಸಾಮಾಜಿಕ ನಾಯಕ. ಕುವೆಂಪು ವೈಚಾರಿಕ ನಾಯಕ. ರಾಜ್‌ಕುಮಾರ್ ಸಾಂಸ್ಕೃತಿಕ ನಾಯಕ. ಇದು ಸರಿಯಾದ ತೀರ್ಮಾನ.

**ಪ್ರಕಾಶ್ ರಾಜ್ ಮೇಹು,** ಚಲನಚಿತ್ರ ನಿರ್ದೇಶಕ, 'ಫೇಸ್‌ಬುಕ್'ನಿಂದ

### ಕಿಡಿನುಡಿ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ನರೇಂದ್ರ ಮೋದಿಯವರನ್ನು 'ಟೆರರಿಸ್ಟ್' ಎಂದು ಕರೆದಿದ್ದಾರೆ. ದೇಶದಲ್ಲಿನ ಒಂದೊಂದೇ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುತ್ತಿದೆ. ಇಂತಹ ಹತಾಶೆಯ ಮಾತುಗಳು ಖರ್ಗೆಯವರ ಮನಃಸ್ಥಿತಿಗೆ ಕನ್ನಡಿ ಹಿಡಿದಿವೆ.

**ಬಿ.ವೈ. ವಿಜಯೇಂದ್ರ,** ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

### 25 ವರ್ಷಗಳ ಹಿಂದೆ

ಭಾನುವಾರ, 22-4-2001

**• ಕಿರುತೆರೆ ಪ್ರಶಸ್ತಿ ವಿವಾದ**

ಬೆಂಗಳೂರು, ಏ. 21– ರಾಷ್ಟ್ರಮಟ್ಟದ ಚಲನಚಿತ್ರ ಪ್ರಶಸ್ತಿಗಳು ವಿವಾದದಲ್ಲಿ ಸಿಲುಕಿಕೊಂಡು, ಬೀದಿರಂಪವಾಗಿರುವ ಬೆನ್ನಲ್ಲೇ ಕರ್ನಾಟಕದಲ್ಲಿ ಕಿರುತೆರೆಯ ಅತ್ಯುತ್ತಮ ಧಾರಾವಾಹಿಗಾಗಿ ರಾಜ್ಯ ಸರ್ಕಾರ ಈ ವರ್ಷದಿಂದ ನೀಡುತ್ತಿರುವ ಪ್ರಶಸ್ತಿಯು ವಿವಾದಕ್ಕೆ ಸಿಲುಕಿಕೊಂಡಿದೆ.

ಈ ಬಾರಿ ಪ್ರಶಸ್ತಿ ನೀಡಲಾಗಿರುವ 'ಮಾಯಾಮೃಗ' ಧಾರಾವಾಹಿಯಲ್ಲಿ, ಪ್ರಶಸ್ತಿಗಳನ್ನು ನೀಡುವ ಅಧಿಕಾರ ಹೊಂದಿರುವ ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರ ಪತ್ನಿ ಲಕ್ಷ್ಮಿ ಚಂದ್ರಶೇಖರ್ ಅವರು ಅಭಿನಯಿಸಿರುವುದರಿಂದ ಆ ಧಾರಾವಾಹಿಗೆ ಪ್ರಶಸ್ತಿ ನೀಡಲಾಗಿದೆ ಎಂದು ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಪಾಲ್ ಸುದರ್ಶನ್, ಟಿ.ವಿ. ಧಾರಾವಾಹಿಗಳ ನಿರ್ದೇಶಕರಾದ ಬಿ.ಎಸ್. ಲಿಂಗದೇವರು, ರವೀಂದ್ರ ಎಚ್.ಪಿ., ಆರ್.ಜಿ. ನಿಂಬಾಳ್ಕರ್, ವೀರಪ್ಪ ಮರಳವಾಡಿ, ಎಸ್.ಜಿ. ಶ್ರೀನಿವಾಸ್ ಹಾಗೂ ವಿಶ್ವಪ್ರಸಾದ್ ಆರೋಪಿಸಿದ್ದಾರೆ.

### 75 ವರ್ಷಗಳ ಹಿಂದೆ

ಭಾನುವಾರ, 22-4-1951

**• ಮೂಲಭೂತ ವಿಧಿಗಳನ್ನು ತಿದ್ದುವ ಯತ್ನ ಬೇಡ: ಜಯಕರ್**

ಮುಂಬಯಿ, ಏ. 21– ಸರ್ಕಾರದ ಪ್ರಸ್ತುತ ರೀತಿ ನೀತಿಗಳಿಗೆ ವಿರೋಧ ಆಗಿವೆಯೆಂಬ ಕಾರಣದ ಮೇಲೆ, ಭಾರತ ರಾಜ್ಯಾಂಗದ ಮೂಲಭೂತ ಹಕ್ಕುಗಳ ವಿಧಿಗಳಿಗೇ ತಿದ್ದುಪಡಿ ತರಲೆತ್ನಿಸುವ ಧೋರಣೆಯನ್ನು ಪೂನಾ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರರಾದ ಡಾ. ಎ.ಆರ್. ಜಯಕರರು ನುಡಿದರು.

ಮುಂಬಯಿ ಪ್ರಾಂತ್ಯದ ಲಾಯರುಗಳ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ, 'ರಾಜ್ಯಾಂಗದ ಮೂಲಭೂತ ಹಕ್ಕುಗಳನ್ನು ತಿದ್ದುವ ಪ್ರಯತ್ನ ಮಾಡಿದರೆ, ವಿರೋಧ ಹೆಚ್ಚುವುದಲ್ಲದೆ, ದೇಶದ ಶಾಂತಿ, ಹಿತರಕ್ಷಣೆಗೆ ಧಕ್ಕೆ ಬರುವುದು. ತನ್ನ ಮೆಚ್ಚಿನ ರೀತಿ ನೀತಿಗಳನ್ನು ತೂರೆಯುವುದು ಕ್ಷೇಮವಲ್ಲದೆ, ಜನತಾ ಸ್ವಾತಂತ್ರ್ಯಕ್ಕೆ ಧಕ್ಕೆ ತಂದು ಪ್ರಕೋಪಕ್ಕೆ ಒಳಗಾಗುವುದು ಸರ್ಕಾರಕ್ಕೆ ತರವಲ್ಲ' ಎಂದು ಡಾ. ಜಯಕರ್ ಎಚ್ಚರಿಸಿದರು.

# ಷೇಕ್ಸ್‌ಪಿಯರ್: ಕಾಲದ ಕನ್ನಡಿ!



ವಿಶ್ಲೇಷಣೆ

**ಜ್ಯೋತಿ**

> ಎಲ್ಲ ಸಂದರ್ಭಕ್ಕೂ ಹೊಂದುವ ಮಾತುಗಳು ಷೇಕ್ಸ್‌ಪಿಯರ್ ನಾಟಕಗಳಲ್ಲಿ ದೊರೆಯುತ್ತವೆ ಎನ್ನಲಾಗುತ್ತದೆ. ವರ್ತಮಾನದ ಸಂಕಷ್ಟಗಳಿಗೆ ಸಂಬಂಧಿಸಿದಂತೆಯೂ ಈ ಮಾತು ನಿಜ. ಪ್ರಸಕ್ತ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ತಾತ್ತ್ವಿಕತೆ ಹಾಗೂ ನಿರ್ಣಾಯಕ 'ಪದಕೋಶ' ಷೇಕ್ಸ್‌ಪಿಯರ್ ಸಾಹಿತ್ಯದಲ್ಲಿದೆ.

ಇಂಗ್ಲಿಷ್ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ಜನ್ಮದಿನ ಆಚರಣೆಗೆ (ಏಪ್ರಿಲ್ 23) ಸಾಹಿತ್ಯ ಜಗತ್ತು ಸಿದ್ಧವಾಗುತ್ತಿದೆ. ಆ ದಿನವನ್ನು 'ಇಂಗ್ಲಿಷ್ ಭಾಷಾ ದಿನ'ವಾಗಿಯೂ ಆಚರಿಸಲಾಗುತ್ತದೆ. ಕನ್ನಡದಂತೆ ಇಂಗ್ಲಿಷ್ ಭವಿಷ್ಯಕ್ಕೆ ಸದ್ಯ ಆತಂಕವಿಲ್ಲ. ಹಾಗಾಗಿ, ಈ ಸಂದರ್ಭದಲ್ಲಿ, ಇಂಗ್ಲಿಷ್ ಭಾಷೆಗೆ ವರ್ಚಸ್ಸು ತಂದ ಷೇಕ್ಸ್‌ಪಿಯರ್ ಸಾಹಿತ್ಯವು ಹೇಗೆ ಎಲ್ಲ ಕಾಲಕ್ಕೂ ಪ್ರಸ್ತುತ ಎನ್ನುವುದರ ಬಗ್ಗೆ ಚರ್ಚಿಸಬಹುದು.

ಪ್ರಸಕ್ತ ಜಗತ್ತು ಎದುರಿಸುತ್ತಿರುವ ಹವಾಮಾನ ಬಿಕ್ಕಟ್ಟು, ಮಿಲಿಟರಿ ಸಂಘರ್ಷಗಳು, ಕಾರ್ಪೊರೇಟ್ ಸಂಸ್ಥೆಗಳ ಏಕಸ್ವಾಮ್ಯ, ಸಾರ್ವಜನಿಕ ಆಡಳಿತದ ಸಮಸ್ಯೆಗಳು ಮತ್ತು ಜನರು ತಮ್ಮ ಬದುಕಿನ ಅರ್ಥವನ್ನು ಕಂಡುಕೊಳ್ಳಲು ವಿಫಲವಾಗುತ್ತಿರುವ ಹಿನ್ನೆಲೆಯಲ್ಲಿ, ಷೇಕ್ಸ್‌ಪಿಯರ್ ಸಾಹಿತ್ಯವು ಮಾನವ ಸಮಾಜದ ಸಂರಚನೆಗಳನ್ನು ಅರ್ಥಮಾಡಿಕೊಳ್ಳಲು ಉತ್ತಮ ಚೌಕಟ್ಟನ್ನು ನೀಡುತ್ತದೆ.

ಷೇಕ್ಸ್‌ಪಿಯರ್ ಸುಮಾರು 25 ವರ್ಷಗಳ ಕಾಲ ಕೌಟುಂಬಿಕ ಸಂಬಂಧಗಳಿಂದ ಭೌತಿಕ ಅಂತರ ಕಾಯ್ದುಕೊಂಡಿದ್ದ. ಆದರೆ, ಆ ಸಮಯದಲ್ಲಿ ಎಲ್ಲ ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ, ಲಂಡನ್‌ನಲ್ಲಿ ಏಕಾಂಗಿಯಾಗಿ ನೆಲೆಸಿ, ಅಲ್ಲಿನ ಜನರ ಬದುಕನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಸ್ವನಿಯಂತ್ರಿತ ಏಕಾಂತದಲ್ಲಿ ಜಗತ್ತನ್ನು ಮತ್ತು ಜನರ ವ್ಯವಹಾರಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಸ್ವನಿಯಂತ್ರಿತ ಏಕಾಂತದಿಂದಲೇ ಆತನಿಗೆ ಪಾತ್ರಗಳ ಅಂತರಂಗ ಪ್ರವೇಶಿಸಿ ಅವರಂತೆಯೇ ಚಿಂತಿಸಲು, ನುಡಿಯಲು ಸಾಧ್ಯವಾಯಿತು ಎನ್ನಬಹುದು. ಎಲ್ಲಾ ಕಾಲದಲ್ಲಿಯೂ, ಎಲ್ಲಾ ಪ್ರದೇಶಗಳಲ್ಲಿಯೂ ಮನುಷ್ಯನ ಚಿಂತನಾಕ್ರಮ ಸರಿಸುಮಾರು ಒಂದೇ ರೀತಿಯದ್ದಾಗಿರುತ್ತದೆ ಎನ್ನುವುದು ಆತನ ಸಾಹಿತ್ಯದ ಸೂಕ್ಷ್ಮ ಓದಿನಿಂದ ತಿಳಿಯುತ್ತದೆ.

ಷೇಕ್ಸ್‌ಪಿಯರ್ ಸಾಹಿತ್ಯವು ಆತನ ಕಾಲಘಟ್ಟದ ರಾಣಿ ಎಲಿಜಬೆತ್ ಆಡಳಿತದ ಇಂಗ್ಲೆಂಡಿನ ವಿದ್ಯಮಾನಗಳಿಗೆ ಸೀಮಿತವಾಗಿರದೆ, ಮನುಷ್ಯನನ್ನು ನಿರಂತರವಾಗಿ ಪ್ರಚೋದಿಸುವ ಮಹತ್ವಾಕಾಂಕ್ಷೆ, ಅಸಮಾನತೆ, ಲಿಂಗ ತಾರತಮ್ಯ, ಪರಿಸರದ ಅಸಮತೋಲನ ಮತ್ತು ನೈತಿಕ ದೌರ್ಬಲ್ಯ ಕುರಿತಾದ ತಾತ್ತ್ವಿಕ, ಸಾಮಾಜಿಕ ಹಾಗೂ ರಾಜಕೀಯ ಪ್ರಶ್ನೆಗಳನ್ನು ಎತ್ತುತ್ತದೆ.

'ಮ್ಯಾಕ್‌ಬೆತ್' ನಾಟಕದಲ್ಲಿ, ಮನುಷ್ಯನ ಮಹತ್ವಾಕಾಂಕ್ಷೆಯನ್ನು ಬದುಕನ್ನು ಅಸ್ಥಿರಗೊಳಿಸುವ ಶಕ್ತಿಯಾಗಿ ಷೇಕ್ಸ್‌ಪಿಯರ್ ವಿಮರ್ಶಿಸುತ್ತಾನೆ. 'ನನ್ನ ಉದ್ದೇಶಗಳಿಗೆ ಪ್ರಚೋದನೆಯೆಂದರೆ, ಮುನ್ನುಗ್ಗುವ ಮಹತ್ವಾಕಾಂಕ್ಷೆ ಮಾತ್ರ' ಎನ್ನುವ ಮ್ಯಾಕ್‌ಬೆತ್ ಮಾತು, ನೈತಿಕ ಸಂಯಮ ಮತ್ತು ಸ್ವವಿಮರ್ಶೆ ಮೀರಿದ ಅಧಿಕಾರದ ತರ್ಕವನ್ನು ವಿಶ್ಲೇಷಿಸುತ್ತದೆ. ವರ್ತಮಾನದಲ್ಲಿ, ಇಂತಹ ವಿಸ್ತರಣಾವಾದಿ ಮಹತ್ವಾಕಾಂಕ್ಷೆಯು ಪರಿಸರ ಮತ್ತು ಮಾನವೀಯತೆಯ ಪರಿಮಿತಿಯನ್ನು ಮೀರಿ ಅತಿಕ್ರಮಿಸುವ ವ್ಯವಸ್ಥೆಗಳಲ್ಲಿ ಸಾಮಾನ್ಯವಾಗಿ ಗೋಚರಿಸುತ್ತದೆ. ಲೇಡಿ ಮ್ಯಾಕ್‌ಬೆತ್ ಹೇಳುವಂತೆ, 'ಹೊರಗೆ ಮುಗ್ಧವಾದ ಹೂವಿನಂತೆ ಕಾಣು, ಅದರೊಳಗೆ ಹಾವಿನಂತಿರು' ಎನ್ನುವ ಸಂದೇಶವನ್ನು ಆಧುನಿಕ ಸಾಂಸ್ಥಿಕ ಮತ್ತು ಕಾರ್ಪೊರೇಟ್ ಶಕ್ತಿ ಸಂರಚನೆಗಳ ಕಾರ್ಯತಂತ್ರಗಳಲ್ಲಿ ಕಾಣಬಹುದು.

'ಜೂಲಿಯಸ್ ಸೀಸರ್', 'ಹೆನ್ರಿ 5' ಮತ್ತು 'ಕಿಂಗ್ ಲಿಯರ್'ನಲ್ಲಿ ಕಂಡುಬರುವ ಯುದ್ಧ ನಿರೂಪಣೆಗಳಲ್ಲಿ, ರಾಜಕೀಯ ಅಧಿಕಾರದಲ್ಲಿರುವ ದುರ್ಬಲ ನೈತಿಕ ಅಡಿಪಾಯದ ದರ್ಶನವಾಗುತ್ತದೆ. ಇಲ್ಲಿರುವ ಯುದ್ಧ ಆಹ್ವಾನದ ಕರೆಗಳು ಮಿಲಿಟರಿ ಮಹತ್ವಾಕಾಂಕ್ಷೆಯ ಅನಿಯಂತ್ರಿತ ಪರಿಣಾಮವನ್ನು ಸಾಂಕೇತಿಕವಾಗಿ ದಾಖಲಿಸುತ್ತವೆ.

'ನಾನು ಸ್ವತಃ ಪಾಪ ಮಾಡಿರುವುದಕ್ಕಿಂತ, ಪಾಪವನ್ನು ಅನುಭವಿಸಿದ ಮನುಷ್ಯ' ಎನ್ನುವ ಲಿಯರ್‌ನ ಪ್ರಲಾಪ, ಅನ್ಯಾಯದ ವ್ಯವಸ್ಥೆಗಳಲ್ಲಿ ಸಿಲುಕಿರುವ ವ್ಯಕ್ತಿಗಳ ಅಸಹಾಯಕತೆಯನ್ನು ಸ್ಪಷ್ಟಪಡಿಸುತ್ತದೆ. ಲಿಯರ್ ಸ್ವತಃ ಅಧಃಪತನದಲ್ಲಿ ಇದ್ದರೂ, ಅಂಚಿನಲ್ಲಿರುವವರ ಸಂಕಷ್ಟಗಳನ್ನು ಗುರ್ತಿಸುವುದು ಮಹತ್ವದ್ದೆನಿಸುತ್ತದೆ. 'ವಸತಿ ಇಲ್ಲದ ಮನುಷ್ಯ ಎಲ್ಲಿದ್ದರೂ ಬಡವ, ಬೆತ್ತಲೆ, ದರಿದ್ರ...' ಎನ್ನುವುದು, ಸಮಕಾಲೀನ ಜಗತ್ತಿನ ಸ್ಥಳಾಂತರ, ಬಡತನ ಮತ್ತು ರಚನಾತ್ಮಕ ಅಸಮಾನತೆಗಳನ್ನು ಗಮನಕ್ಕೆ ತರುವಂತಿದೆ. ಜಾತಿ ಆಧಾರಿತ ತಾರತಮ್ಯ ಸೇರಿದಂತೆ ಶ್ರೇಣೀಕೃತ ಸಮಾಜದ ಅಮಾನವೀಯ ಪ್ರಕ್ರಿಯೆಗಳನ್ನು ಪರಿಶೀಲಿಸಲು ಇದು ಸೂಕ್ಷ್ಮ ಆಯಾಮವನ್ನು ಒದಗಿಸುತ್ತದೆ.

ಷೇಕ್ಸ್‌ಪಿಯರ್ ನೈತಿಕತೆಯ ಕೊರತೆಯನ್ನು ಪರಿಸರದ ನಾಶದೊಂದಿಗೆ ಜೋಡಿಸುತ್ತಾನೆ. ಜೂಲಿಯಸ್-ಸೀಸರ್‌ರನ್ನು ಕೊಲೆ ಮಾಡಲೆಂದು ಸಂಚುಕೋರರು ಸಭೆ ಸೇರುವ ರಾತ್ರಿ ಪ್ರಳಯಾಂತಕ ಮಳೆಯಾಗುತ್ತದೆ. ಇಲ್ಲೆಲ್ಲ, ಪರಿಸರ ಬಿಕ್ಕಟ್ಟನ್ನು ಮನುಷ್ಯನ ಮಿತಿಮೀರಿದ ವ್ಯವಹಾರಗಳ ಪರಿಣಾಮವೆಂದು ಅರ್ಥೈಸಲಾಗಿದೆ. ಷೇಕ್ಸ್‌ಪಿಯರ್‌ನಲ್ಲಿ, ಪ್ರಕೃತಿ ನಿಷ್ಕ್ರಿಯವಾಗಿಲ್ಲ; ಅದು ಮನುಷ್ಯನ ಚಟುವಟಿಕೆಗಳಿಗೆ ನೈತಿಕವಾಗಿ ಸ್ಪಂದಿಸುತ್ತದೆ.

ಷೇಕ್ಸ್‌ಪಿಯರ್‌ನ ಕೃತಿಗಳು ಮಹಿಳಾ ಪಾತ್ರಗಳಿಗೆ ಗಮನಾರ್ಹ ಅಭಿವ್ಯಕ್ತಿಯನ್ನು ನೀಡುತ್ತವೆ. 'ಒಥೆಲೊ'ದಲ್ಲಿ ಎಮಿಲಿಯಾ ಹೇಳುವಂತೆ, 'ಗಂಡಂದಿರಿಗೆ ಗೊತ್ತಾಗಲಿ, ಅವರ ಹೆಂಡತಿಯರಿಗೆ ಅವರಂತೆಯೇ ಪ್ರಜ್ಞೆ ಇರುತ್ತದೆ' ಎನ್ನುವ ಮಾತು ಲಿಂಗ ಅಸಮಾನತೆಯನ್ನು ಪ್ರಶ್ನಿಸುತ್ತದೆ. 'ದಿ ಮರ್ಚೆಂಟ್ ಆಫ್ ವೆನಿಸ್'ನಲ್ಲಿ ಪೋರ್ಷಿಯಾ ಕಾನೂನು ಸಂವಾದದಲ್ಲಿ ತನ್ನ ಬೌದ್ಧಿಕ ಮತ್ತು ನೈತಿಕ ಅಧಿಕಾರವನ್ನು ಆತ್ಮವಿಶ್ವಾಸದಿಂದ ಪ್ರದರ್ಶಿಸುತ್ತಾ, 'ಕರುಣೆಯ ಗುಣವು ಕಡಿಮೆಯಾಗುವುದಿಲ್ಲ, ಅದು ಸ್ವರ್ಗದಿಂದ ಮೃದುವಾದ ಮಳೆಯಂತೆ ಬೀಳುತ್ತದೆ' ಎನ್ನುವ ಉಪದೇಶ ನೀಡುತ್ತಾಳೆ. ಈ ಪ್ರಾತಿನಿಧ್ಯಗಳು, ಷೇಕ್ಸ್‌ಪಿಯರ್ ಸಾಹಿತ್ಯವನ್ನು ಲಿಂಗ ನ್ಯಾಯ ಮತ್ತು ಸಾಮಾಜಿಕ ಸಮಾನತೆಯ ಕುರಿತಾದ ಸಮಕಾಲೀನ ಚರ್ಚೆಗಳಲ್ಲಿ ಪಠ್ಯವಾಗಿ ಓದಲು ಅನುವು ಮಾಡಿಕೊಡುತ್ತವೆ.

'ದಿ ಮರ್ಚೆಂಟ್ ಆಫ್ ವೆನಿಸ್'ನಲ್ಲಿ, ಷೇಕ್ಸ್‌ಪಿಯರ್ ಹಣಕಾಸಿನ ವ್ಯವಹಾರ ಮತ್ತು ಸಾಮಾಜಿಕ ಹೊರಗಿಡುವಿಕೆಯ ನೈತಿಕತೆಯನ್ನು ಪ್ರಶ್ನಿಸುತ್ತಾನೆ. ಶೈಲಾಕ್ ಪ್ರಶ್ನಿಸುವಂತೆ, 'ನೀವು ನಮ್ಮನ್ನು ಚುಚ್ಚಿದರೆ, ನಾವು ರಕ್ತ ಸುರಿಸುವುದಿಲ್ಲವೆ? ನೀವು ನಮಗೆ ಕಚಗುಳಿ ಇಟ್ಟರೆ, ನಾವು ನಗುವುದಿಲ್ಲವೇ?' ಎನ್ನುವ ಮಾತುಗಳು, ತಾರತಮ್ಯಗಳನ್ನು ಗಟ್ಟಿಗೊಳಿಸುವ ವ್ಯವಸ್ಥೆಯ ವಿರುದ್ಧ ಮನುಷ್ಯನ ಅನುಭವದ ಸಾರ್ವತ್ರಿಕತೆಯನ್ನು ಮುನ್ನೆಲೆಗೆ ತರುತ್ತದೆ. ಇದನ್ನು ಜಾತಿಶ್ರೇಣಿಗಳನ್ನು ವಿಶ್ಲೇಷಿಸಲು ಪಠ್ಯವಾಗಿ ವಿಸ್ತರಿಸಬಹುದು.

'ಒಥೆಲೊ'ದಲ್ಲಿ, ಷೇಕ್ಸ್‌ಪಿಯರ್ ಸಾಮಾಜಿಕ ಹೊರಗಿಡುವಿಕೆಯ ಮಾನಸಿಕ ಪರಿಣಾಮಗಳನ್ನು ಪರಿಶೀಲಿಸುತ್ತಾನೆ. 'ನಾನು ಕಪ್ಪಗಿದ್ದೇನೆ ಮತ್ತು ನನ್ನ ಮಾತು ಮೃದುತ್ವ ಹೊಂದಿಲ್ಲ' ಎನ್ನುವ ಒಥೆಲೊನ ಅರಿವು, ಸಾಮಾಜಿಕ ಶ್ರೇಣೀಕೃತ ರಚನೆಗಳ ಅಸ್ಮಿತೆಯನ್ನು ಹೇಗೆ ಅಂತರ್ಗತಗೊಳಿಸಲಾಗುತ್ತದೆ ಎಂಬುದನ್ನು ಹೇಳುತ್ತದೆ. ಶ್ರೇಣೀಕೃತ ಅಸಮಾನತೆಯ ವ್ಯವಸ್ಥೆಗಳು, ಮನುಷ್ಯನನ್ನು ಬಾಹ್ಯವಾಗಿ ಅಂಚಿಗೆ ತಳ್ಳುವಂತೆ, ಆಂತರಿಕವಾಗಿ ಕೀಳರಿಮೆಯನ್ನು ಉಂಟು ಮಾಡುತ್ತವೆ. ಜಾತಿ ವಿಶ್ಲೇಷಣೆಗೆ ಇಂತಹ ಪ್ರಾತಿನಿಧ್ಯಗಳನ್ನು ವಿಮರ್ಶಾತ್ಮಕವಾಗಿ ವಿಸ್ತರಿಸಬಹುದು.

ಷೇಕ್ಸ್‌ಪಿಯರ್ ನಾಟಕಗಳ ಒಂದು ಪ್ರಮುಖ ಆದರೆ ಕಡಿಮೆ ಅನ್ವೇಷಿತ ಆಯಾಮ, ಅವನ ಸಾಮಾಜಿಕ ಶ್ರೇಣಿಯ ಭಾಷಾ ರಚನೆ. ಅವನ ನಾಟಕಗಳು ಶ್ರೀಮಂತ ಪಾತ್ರಗಳಿಗೆ ಪದ್ಯ ಮತ್ತು ಸಾಮಾನ್ಯ ವ್ಯಕ್ತಿಗಳಿಗೆ ಗದ್ಯದ ಬಳಕೆಯನ್ನು ಪ್ರದರ್ಶಿಸುತ್ತವೆ. ಇದರಿಂದಾಗಿ ಭಾಷೆಯೊಳಗಿನ ವರ್ಗ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬಹುದು. ಆದಾಗ್ಯೂ, ಈ ವ್ಯತ್ಯಾಸವು ಅಂಚಿನಲ್ಲಿರುವವರನ್ನು ಮೌನಗೊಳಿಸುವುದಿಲ್ಲ; ಬದಲಾಗಿ, ಇದು ಬಹುಧ್ವನಿಗಳು ಸಹಬಾಳ್ವೆ ನಡೆಸುವ ಸಾಮಾಜಿಕ ವಾಸ್ತವದ ಪದರಗಳ ಪ್ರಾತಿನಿಧ್ಯವನ್ನು ಸಕ್ರಿಯಗೊಳಿಸುತ್ತದೆ. ಇಲ್ಲಿನ ಕೆಳವರ್ಗದ ಹಾಸ್ಯದಲ್ಲೂ ವಾಸ್ತವ ಜಗತ್ತಿನ ಕಟು ದರ್ಶನವಿದೆ, ಉಳ್ಳವರ ಬೂಟಾಟಿಕೆಯನ್ನು ಮತ್ತು ವ್ಯವಸ್ಥೆಯನ್ನು ಪ್ರಶ್ನಿಸಲಾಗಿದೆ. ಹೀಗೆ, ಗಣ್ಯರಿಂದ ಸಾಮಾನ್ಯ ಜನರವರೆಗೆ ವೈವಿಧ್ಯಮಯ ಪ್ರೇಕ್ಷಕರನ್ನು ಏಕಕಾಲದಲ್ಲಿ ತೊಡಗಿಸಿಕೊಳ್ಳುವ ಈ ಸಾಮರ್ಥ್ಯವು, ಷೇಕ್ಸ್‌ಪಿಯರ್ ಹೊಂದಿದ್ದ ಸಾಮಾಜಿಕ ಶ್ರೇಣೀಕರಣದ ಸೂಕ್ಷ್ಮ ಅರಿವನ್ನು ಬಹಿರಂಗಪಡಿಸುತ್ತದೆ. ಆತನ ನಾಟಕಗಳು ಶ್ರೇಣೀಕೃತ ರಚನೆಗಳನ್ನು ಪ್ರತಿನಿಧಿಸುವ ಮತ್ತು ಪ್ರಶ್ನಿಸುವ ಪಠ್ಯಗಳಾಗಿವೆ. ಸಮಕಾಲೀನ ಪರಿಭಾಷೆಯಲ್ಲಿ ಹೇಳುವುದಾದರೆ, ಈ ಪದರಗಳ ಸಂವಹನ ತಂತ್ರವು ಆಳವಾದ ಅಸಮಾನತೆಗಳಿಂದ ಗುರ್ತಿಸಲಾದ ಜಗತ್ತಿನಲ್ಲಿ ಆತನ ಪ್ರಸ್ತುತತೆಯನ್ನು ಹೆಚ್ಚಿಸುತ್ತದೆ.

ಷೇಕ್ಸ್‌ಪಿಯರ್‌ನ ಪ್ರಸ್ತುತತೆಯು ಮನುಷ್ಯನ ಅಸ್ತಿತ್ವದ ವಿರೋಧಾಭಾಸಗಳನ್ನು ವ್ಯಕ್ತಪಡಿಸುವ ಕಾಲಾತೀತ ಸಾಮರ್ಥ್ಯದಲ್ಲಿದೆ. ಅವನ ನಾಟಕಗಳು, ಅಧಿಕಾರದ ನೈತಿಕ ವೈಫಲ್ಯಗಳನ್ನು ಪತ್ತೆಹಚ್ಚುತ್ತವೆ. ನೈತಿಕತೆಯಿಲ್ಲದ ಮಹತ್ವಾಕಾಂಕ್ಷೆ, ಹೊಣೆಗಾರಿಕೆಯಿಲ್ಲದ ಅಧಿಕಾರ, ಅನ್ಯಾಯದಿಂದ ಗಳಿಸಿದ ಸಂಪತ್ತು ಮತ್ತು ಘನತೆಯಿಲ್ಲದೆ ಪಡೆಯುವ ಗೌರವ, ಇವುಗಳನ್ನು ಬಹಿರಂಗಪಡಿಸುವ ಸಾಮರ್ಥ್ಯ ಷೇಕ್ಸ್‌ಪಿಯರ್ ನಾಟಕಗಳಿಗಿದೆ. ಈ ನಾಟಕಗಳು ಮತ್ತು ಸಾನೆಟ್‌ಗಳು ಬರೀ ವೈಯಕ್ತಿಕ ದುರಂತವನ್ನು ಪ್ರತಿಬಿಂಬಿಸುವುದಿಲ್ಲ; ಅವು ಆಧುನಿಕ ಸಮಾಜಗಳನ್ನು ರೂಪಿಸುತ್ತಿರುವ ವ್ಯವಸ್ಥಿತ ವೈಫಲ್ಯಗಳನ್ನು ತೋರಿಸುತ್ತವೆ. ಕಾರ್ಪೊರೇಟ್ ಬಂಡವಾಳವು ಸರ್ಕಾರಿ ನೀತಿಯನ್ನು ನಿಯಂತ್ರಿಸುವ ಜಗತ್ತಿನಲ್ಲಿ, ಸರ್ಕಾರಗಳು ಸಾಮಾನ್ಯ ಜನರ ಬದುಕಿನ ವಾಸ್ತವಗಳಿಂದ ಹೆಚ್ಚು ದೂರ ಸರಿಯುವ ಜಗತ್ತಿನಲ್ಲಿ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ನಾಶವನ್ನು ಸಾಮಾನ್ಯೀಕರಿಸುವ ಜಗತ್ತಿನಲ್ಲಿ, ಷೇಕ್ಸ್‌ಪಿಯರ್ ಧ್ವನಿಯು ತುರ್ತುಪರಿಸ್ಥಿತಿಯನ್ನು ಪಡೆಯುತ್ತದೆ.

ಇಂದು ಷೇಕ್ಸ್‌ಪಿಯರ್ ಓದು ಸಾಂಸ್ಕೃತಿಕ ಸ್ಮೃತಿಯ ಕ್ರಿಯೆಯಲ್ಲ. ಅದು ನಮ್ಮ ನೈತಿಕತೆಯನ್ನು ಒರೆಗೆ ಹಚ್ಚುವ ಕೆಲಸ.



## ವಾಚಕರ ವಾಣಿ

### ಜಾತಿ ತಾರತಮ್ಯ ತಡೆ: ಸರ್ಕಾರದ ದಿಟ್ಟಹೆಜ್ಜೆ

**ರಾಜ್ಯ ಸಚಿವ** ಸಂಪುಟವು 'ಕರ್ನಾಟಕ ರೋಹಿತ್ ವೇಮುಲ' ಮಸೂದೆಗೆ ಒಪ್ಪಿಗೆ ನೀಡಿದೆ. ಇದು ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ. ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ, ಮಾನಸಿಕ ಹಿಂಸೆ ಹಾಗೂ ಅನ್ಯಾಯ ತಡೆಯಲು ಈ ಮಸೂದೆ ಸಹಕಾರಿಯಾಗಲಿದೆ. ವಿದ್ಯಾರ್ಥಿ ಹಕ್ಕುಗಳ ರಕ್ಷಣೆಗೆ ದೂರು ನಿವಾರಣಾ ವ್ಯವಸ್ಥೆ ಮತ್ತು ಕಟ್ಟುನಿಟ್ಟಿನ ಕ್ರಮಗಳು ಜಾರಿಯಾಗಬೇಕಿದೆ. ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹವಾಗಿದೆ. ಮಸೂದೆಯು ತ್ವರಿತವಾಗಿ ಕಾಯ್ದೆಯಾಗಿ ಜಾರಿಗೆ ಬರಲಿ.

**ಪ್ರಸನ್ನ ಕೋಟೆ,** ಮೈಸೂರು

### ಮಹಿಳಾ ಮೀಸಲು: ಪಕ್ಷಗಳ ಬೂಟಾಟಿಕೆ

**ಬಿಜೆಪಿ,** ಕಾಂಗ್ರೆಸ್ ಸೇರಿದಂತೆ ಎಲ್ಲಾ ಪಕ್ಷಗಳು ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ ಅನಗತ್ಯವಾಗಿ ಬೊಬ್ಬೆ ಹಾಕುತ್ತಿವೆ. ಆದರೆ, ಯಾವುದೇ ಪಕ್ಷಕ್ಕೂ ಮಹಿಳೆಯರಿಗೆ ರಾಜಕೀಯದಲ್ಲಿ ಸಮಾನ ಸ್ಥಾನಮಾನ ಕಲ್ಪಿಸುವ ಇರಾದೆ ಇಲ್ಲ. ಇಂದಿಗೂ ಯಾವೊಂದು ಪಕ್ಷವೂ ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಿಲ್ಲ. ಸಚಿವ ಸಂಪುಟದಲ್ಲಿ ಮೀಸಲಾತಿ ಗಗನಕುಸುಮವೇ ಸರಿ. ಎಲ್ಲ ಪಕ್ಷಗಳು ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಟಿಕೆಟ್ ನೀಡಿದರೆ ಯಾವ ಮಸೂದೆಯ ಅಗತ್ಯವೂ ಇರುವುದಿಲ್ಲ. ಅಂತಹ ಪ್ರಾಮಾಣಿಕತೆ ಹಾಗೂ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕಿದೆ. ಕೇವಲ ಬೂಟಾಟಿಕೆಯ ಮಾತುಗಳಿಂದ ಯಾವುದೇ ಪ್ರಯೋಜನವಿಲ್ಲ.

**ಎಚ್.ಆರ್. ಪ್ರಕಾಶ್,** ಮಂಡ್ಯ

### ಜೆಡ್ ಪ್ಲಸ್: ಜನರ ತೆರಿಗೆ ಹಣ ಪೋಲು

**ಆರ್‌ಎಸ್‌ಎಸ್** ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ನೀಡಿರುವ ಜೆಡ್ ಪ್ಲಸ್ ಭದ್ರತೆಗೆ ಮಾಸಿಕ ₹40 ಲಕ್ಷದಿಂದ ₹45 ಲಕ್ಷ ಖರ್ಚಾಗುತ್ತದೆ. ಈ ಹಣವನ್ನು ಅವರಿಂದಲೇ ಭರಿಸಬೇಕೆಂದು ನಾಗಪುರದ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಪಿಐಎಲ್ ಅನ್ನು ಮುಂಬೈ ಹೈಕೋರ್ಟ್‌ನ ವಿಭಾಗೀಯ ಪೀಠ ವಜಾಗೊಳಿಸಿದೆ. ಭಾಗವತರು ಭಾರತದ ನಾಗರಿಕರಾಗಿದ್ದಾರೆ; ಅವರಿಗೆ ಗೌರವದಿಂದ ಬದುಕುವ ಹಕ್ಕಿದೆ. ಅವರು ಪ್ರತಿನಿಧಿಸುವ ಸಂಸ್ಥೆಯನ್ನು ನೋಂದಣಿ ಮಾಡಿಸಿದರೆ ಅದು ದೇಶದ ಕಾನೂನಿನ ವ್ಯಾಪ್ತಿಗೆ ಒಳಪಟ್ಟು, ಭಾಗವತರೂ ಸೇರಿ ತಳಮಟ್ಟದ ಸ್ವಯಂ ಸೇವಕರು ನಿರುಮ್ಮಳರಾಗಿ ಇರಬಹುದು. ಆದರೆ, ಸಂಘವು ನೋಂದಣಿಯಾಗಿಲ್ಲ. ತನಗೆ ಬರುವ ದೇಣಿಗೆಯ ಲೆಕ್ಕ ನೀಡುವುದಿಲ್ಲ. ಅದು ದೇಶಕ್ಕೆ ತೆರಿಗೆ ಕಟ್ಟುತ್ತಿಲ್ಲ. ದೇಶದ ಕಾನೂನಿನ ವ್ಯಾಪ್ತಿಗೆ ಒಳಪಡಲು ಬಯಸುತ್ತಿಲ್ಲ. ಅಂತಹ ಸಂಘದ ಮುಖ್ಯಸ್ಥರ ಭದ್ರತೆಗೆ ಜನರ ತೆರಿಗೆ ಹಣವನ್ನು ಏಕೆ ವ್ಯಯಿಸಬೇಕು?

**ಮಹೇಶ ಅಶೋಕ ಶಿಂಗೆ,** ಚಿಕ್ಕೋಡಿ

### ಎಲ್‌ಪಿಜಿ ನೆಪ: ಆಹಾರದ ಬೆಲೆ ಏರಿಕೆ ಜಪ

**ಕೊಲ್ಲಿ** ಯುದ್ಧದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ನಿಜ. ಇದನ್ನೇ ನೆಪ ಮಾಡಿಕೊಂಡಿರುವ ಹೋಟೆಲ್ ಮಾಲೀಕರು ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯ ಹೆಸರಿನಲ್ಲಿ ಆಹಾರ ಪದಾರ್ಥಗಳ ದರವನ್ನು ಮನಬಂದಂತೆ ಹೆಚ್ಚಿಸುತ್ತಿದ್ದಾರೆ. ಪ್ರತಿಯೊಂದು ತಿನಿಸಿನ ಮೇಲೆ ₹10 ರಿಂದ ₹30ರವರೆಗೂ ಏರಿಸಿದ್ದಾರೆ. ಇದರಿಂದ ಪ್ರತಿದಿನ ಹೋಟೆಲ್ ನಂಬಿ ಬದುಕುವ ಕಾರ್ಮಿಕರು ಮತ್ತು ಸಾಮಾನ್ಯ ವರ್ಗದವರ ಆರ್ಥಿಕ ಸ್ಥಿತಿ ಹದಗೆಡುತ್ತಿದೆ. ಜಾಗತಿಕ ಬಿಕ್ಕಟ್ಟಿನ ಹೊರೆ ಕೇವಲ ಗ್ರಾಹಕರ ಮೇಲೆ ಬೀಳುತ್ತಿರುವುದು ಅನ್ಯಾಯ. ಸರ್ಕಾರವು ಮಧ್ಯಪ್ರವೇಶಿಸಿ, ಹೋಟೆಲ್ ಮಾಲೀಕರೊಂದಿಗೆ ಚರ್ಚಿಸಿ ನ್ಯಾಯಸಮ್ಮತ ದರ ನಿಗದಿಪಡಿಸಬೇಕು. ಗ್ರಾಹಕರ ಸುಲಿಗೆಗೆ ಕಡಿವಾಣ ಹಾಕಬೇಕು.

**ನಾಗರಾಜ್ ಕೆ. ಕಲ್ಲಹಳ್ಳಿ,** ತುಮಕೂರು

### ಗಣತಿದಾರರ ಸಮಸ್ಯೆಗೆ ಪರಿಹಾರ ಮರೀಚಿಕೆ

**ರಾಜ್ಯದಲ್ಲಿ** ತಾಪಮಾನದ ಏರಿಕೆಯ ನಡುವೆಯೇ ಜನಗಣತಿ ಪ್ರಕ್ರಿಯೆ ಆರಂಭಗೊಂಡಿದೆ. ಕೆಲವು ಮೇಲ್ವಿಚಾರಕರು, ಗಣತಿದಾರರಿಗೆ 50 ವರ್ಷ ದಾಟಿದೆ. ಅವರಿಗೆ ವಯೋಸಹಜ ಕಾಯಿಲೆಗಳಿವೆ. ಕೆಲವರಿಗೆ ಪರಿಚಯವೇ ಇಲ್ಲದ ಸ್ಥಳಕ್ಕೆ ನಿಯೋಜಿಸಲಾಗಿದೆ. ಗಣತಿಗೆ ನಿಯೋಜನೆಗೊಂಡ ಮಹಿಳೆಯರಿಗೆ ಸುರಕ್ಷತೆ ಎಂಬುದಿಲ್ಲ. ಕೆಲವು ಗಣತಿದಾರರಿಗೆ ಮೊಬೈಲ್ ತಂತ್ರಜ್ಞಾನದಲ್ಲಿ ಅಷ್ಟೊಂದು ಪರಿಣತಿ ಇಲ್ಲ. ಜನಗಣತಿಗೆ ಸಂಬಂಧಿಸಿದ ಅಪ್ಲಿಕೇಷನ್ ಹಳೆಯ ಮೊಬೈಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಗಣತಿ ಕಾರ್ಯ ಪೂರ್ಣಗೊಳಿಸಲು ಸರ್ಕಾರ ಗಡುವು ನೀಡಿದೆ. ಆದರೂ, ಕೆಲವು ಹಿರಿಯ ಅಧಿಕಾರಿಗಳು ಉಸ್ತುವಾರಿ ನೆಪದಲ್ಲಿ ಗಣತಿದಾರರಿಗೆ ಅತಿಯಾದ ಮಾನಸಿಕ ಒತ್ತಡ ಹೇರುತ್ತಿದ್ದಾರೆ. ಈ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಸೂಚಿಸಬೇಕಿದೆ.

**ಸಾದಿಕ್ ಉಲ್ಲಾ ಎಂ.ಎ.,** ಭರಮಸಾಗರ

### ನೀತಿಸಂಹಿತೆ ಉಲ್ಲಂಘನೆ: ಕ್ರಮ ಕೈಗೊಳ್ಳಿ

**ದೇಶದಲ್ಲಿ** ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಇದರ ನಡುವೆಯೇ ಮಹಿಳಾ ಮೀಸಲಾತಿಯ ನೆಪದಲ್ಲಿ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮಂಡಿಸಿತು. ಇದಕ್ಕೆ ಸೋಲಾಯಿತು. ಇದರ ನೆಪದಲ್ಲಿಯೇ ಪ್ರಧಾನಿ ನರೇಂದ್ರ ಮೋದಿಯವರು ರಾಷ್ಟ್ರೀಯ ವೇದಿಕೆ ಬಳಸಿಕೊಂಡು ಭಾವನಾತ್ಮಕವಾಗಿ ಭಾಷಣ ಮಾಡಿರುವುದು ಸರಿಯಾದ ನಡೆಯಲ್ಲ. ಇದು ಚುನಾವಣಾ ನೀತಿಸಂಹಿತೆಯ ಸ್ಪಷ್ಟ ಉಲ್ಲಂಘನೆ. ಈ ಸಂಕಟದ ಭಾಷಣವು ಚುನಾವಣಾ ಪ್ರಚಾರದ ಭಾಗವಷ್ಟೇ. ಕೇಂದ್ರ ಚುನಾವಣಾ ಆಯೋಗವು ಸ್ವಾಯತ್ತ ಸಂಸ್ಥೆಯಾಗಿದೆ. ಹಾಗಾಗಿ, ಯಾವುದೇ ಪ್ರಭಾವಕ್ಕೆ ಒಳಗಾಗದೆ ನಿರ್ದಾಕ್ಷಿಣ್ಯವಾಗಿ ಮೋದಿ ವಿರುದ್ಧ ಕ್ರಮಕೈಗೊಳ್ಳಬೇಕಿದೆ. ಇತ್ತೀಚಿನ ದಿನಗಳಲ್ಲಿ ಚುನಾವಣಾ ಆಯೋಗವು ವಿರೋಧ ಪಕ್ಷಗಳ ದೂರುಗಳನ್ನು ನಿರ್ಲಕ್ಷಿಸಿ, ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ನಡೆದುಕೊಳ್ಳುತ್ತಿದೆ. ಆಯೋಗ ಜನರ ವಿಶ್ವಾಸ ಉಳಿಸಿಕೊಳ್ಳಬೇಕು.

**ವಿ.ಜಿ. ಇನಾಮದಾರ,** ಸಾರವಾಡ

## ಚುರುಮುರಿ



### ನಾರೀ ಜಪ

• ಮಣ್ಣೆ ರಾಜು

**'ರಾಜಕಾರಣಿಗಳು** ಮಹಿಳಾ ಜಪ ಶುರುಮಾಡಿದ್ದಾರೆ...' ಎಂದು ನ್ಯೂಸ್ ಪೇಪರ್ ಓದುತ್ತಾ ಶಂಕ್ರಿ ಹೇಳಿದ.

'ಜಪವೋ ಜ್ವರವೋ, ಮಹಿಳೆಯರನ್ನು ಕಡೆಗಣಿಸಿದರೆ ರಾಜಕಾರಣಿಗಳಿಗೆ ಉಳಿಗಾಲವಿಲ್ಲ!' ಕಾಫಿ ತಂದುಕೊಟ್ಟು ಕಿಸಕ್ಕನೆ ನಕ್ಕಳು ಸುಮಿ.

'ಮಹಿಳೆಯರನ್ನು ಮತಬುಟ್ಟಿಗೆ ಹಾಕಿಕೊಳ್ಳಲು ಸಾಕಷ್ಟು ಪ್ರಯತ್ನ ನಡೆದಿವೆ'.

'ಇದುವರೆಗೆ ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ, ಗೃಹಲಕ್ಷ್ಮಿ ಹಣ, ಅಷ್ಟಕ್ಕೇ ಮೀಸಲಾಗಿದ್ದ ಪಕ್ಷಗಳು ಈಗ ಅಧಿಕಾರ ಕೊಡಲು ಆಸಕ್ತಿ ತೋರಿಸುತ್ತಿವೆ'.

'ಹೌದು. ನಾರಿಯರು ಕೇವಲ ವೋಟ್ ಬ್ಯಾಂಕ್ ಆಗುವುದು ಬೇಡ, ಅವರಿಗೆ 33 ಪರ್ಸೆಂಟ್ ಮೀಸಲಾತಿ ಕೊಟ್ಟು ರಾಜ್ಯ-ದೇಶ ಆಳುವ ಅಧಿಕಾರ ಕೊಡಬೇಕು ಅನ್ನೋ ಉದ್ದೇಶದಿಂದ ಆಡಳಿತ ಪಕ್ಷ ಮಂಡಿಸಿದ ಸಂವಿಧಾನ ತಿದ್ದುಪಡಿ ಮಸೂದೆಯನ್ನು ವಿರೋಧ ಪಕ್ಷಗಳು ಫೇಲ್ ಮಾಡಿಬಿಟ್ಟವು'.

'ಈಗ ಫೇಲ್ ಆದರೂ ಸಪ್ಲಿಮೆಂಟರಿಯಲ್ಲಿ ಪಾಸ್ ಮಾಡೇ ಮಾಡ್ತಾರಂತೆ'.

'ಮಹಿಳೆಯರಿಗೆ ಮೀಸಲಾತಿ ಕೊಡಬಾರದೆಂಬ ಸಣ್ಣತನ ನಮಗಿಲ್ಲ. ಆದರೆ, ಮೀಸಲಾತಿ ನೆಪದಲ್ಲಿ ಕ್ಷೇತ್ರಗಳ ಮರುವಿಂಗಡಣೆ ಮಾಡಿ ಕ್ಷೇತ್ರಗಳ ಭೂಪಟವನ್ನು ದೂಳೀಪಟ ಮಾಡೋದನ್ನು ಒಪ್ಪೋದಿಲ್ಲ ಎಂದು ಹೇಳಿದ್ದಾರೆ. ಸಂಸಾರ ನಡೆಸುವ ಮಹಿಳೆಯರು ಸಮರ್ಥವಾಗಿ ಸರ್ಕಾರ ನಡೆಸುತ್ತಾರೆ'.

'ಸಂಸಾರದಲ್ಲಿ ನಿಮ್ಮದೇ ಸರ್ವಾಧಿಕಾರ, ಅದನ್ನು ವಿರೋಧಿಸುವವರು ಇಲ್ಲ. ಆದರೆ, ಸರ್ಕಾರದಲ್ಲಿ ವಿರೋಧ ಪಕ್ಷದವರು ಇರ್ತಾರೆ'.

'ಇರಲಿಬಿಡ್ರೀ, ಯಾರಿಗೆ ಏನು ಉತ್ತರ ಕೊಡಬೇಕೋ ಕೊಟ್ಟರಾಯ್ತು.'

'ಎಲೆಕ್ಷನ್ ರಿಸ್ಕ್. ಅದರ ಬದಲು ಮಹಿಳೆಯರನ್ನು ಎಂಎಲ್ಸಿಯಾಗಿ ನೇಮಕ ಮಾಡಿ ಎಂದು ಕೇಳಬಹುದಲ್ವಾ? ಮೇಲ್ಮನೆಯಲ್ಲಿ ಮೇಲ್‌ಗಳೇ ಜಾಸ್ತಿ, ಫೀಮೇಲ್‌ಗಳು ಬೆರಳೆಣಿಕೆ. ಮೀಸಲಾತಿ ಕೊಟ್ಟು ಫೀಮೇಲ್ ಮನೆ ಮಾಡಿ ಎಂದು ಒತ್ತಾಯಿಸಬಹುದಲ್ವಾ?'

'ಮೀಸಲಾತಿ ಕೊಟ್ವಿ ಎಂದು ಯಾರೂ ಮೀಸೆ ತಿರುವೂದು ಬೇಡ. ಎಲೆಕ್ಷನ್‌ಗಳಲ್ಲಿ ಮಹಿಳೆಯರಿಗೆ ಟಿಕೆಟ್ ಕೊಟ್ಟರೆ ಸಾಕು, ಗೆದ್ದು ಗದ್ದುಗೆ ಏರುತ್ತಾರೆ...' ಎಂದಳು ಸುಮಿ.

## ಸಂಗತ

# ಎಲ್ ನಿನೊ: 'ಪುಟ್ಟ ಬಾಲಕ'ನ ದೊಡ್ಡ ಕಿತಾಪತಿ

**ಪ್ರಸಕ್ತ ಮುಂಗಾರನ್ನು 'ಎಲ್ ನಿನೊ' ದುರ್ಬಲವಾಗಿಸಲಿದೆ ಎನ್ನಲಾಗಿದೆ. ಈ ವಿದ್ಯಮಾನವು ಕೃಷಿ ಸೇರಿದಂತೆ ಒಟ್ಟು ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ.**

• ಗುರುರಾಜ್ ಎಸ್. ದಾವಣಗೆರೆ

**ಆಧುನಿಕ** ಜಗತ್ತು ಹವಾಮಾನ ಬದಲಾವಣೆಯ ಬಹುದೊಡ್ಡ ಸವಾಲು ಎದುರಿಸುತ್ತಿದೆ. ಈ ಬದಲಾವಣೆಗಳ ಹಿಂದಿರುವ ಪ್ರಭಾವಶಾಲಿ ನೈಸರ್ಗಿಕ ವಿದ್ಯಮಾನವನ್ನು 'ಎಲ್ ನಿನೊ' ಎನ್ನುತ್ತಾರೆ. ಸ್ಪ್ಯಾನಿಷ್ ಭಾಷೆಯಲ್ಲಿ ಎಲ್ ನಿನೊ ಎಂದರೆ ಪುಟ್ಟ ಬಾಲಕ ಎಂದರ್ಥ. ಈ ಪುಟ್ಟ ಬಾಲಕನ ಕಿತಾಪತಿ ತ್ರಿವಿಕ್ರಮ ಸ್ವರೂಪದ್ದು. ಪೆಸಿಫಿಕ್ ಮಹಾಸಾಗರದ ಆಳದಲ್ಲಿ ಹುಟ್ಟುವ ಈ ವಿದ್ಯಮಾನವು ಇಡೀ ಜಗತ್ತಿನ ಕೃಷಿ, ಅರ್ಥವ್ಯವಸ್ಥೆ ಮತ್ತು ಪರಿಸರದ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ಪೆಸಿಫಿಕ್ ಮಹಾಸಾಗರದ ಉಷ್ಣವಲಯದ ಭಾಗದಲ್ಲಿ ಸಮುದ್ರದ ಮೇಲ್ಮೈ ನೀರು ಅಸಹಜವಾಗಿ ಬಿಸಿಯಾಗುವ ಒಂದು ಹವಾಮಾನ ಪ್ರಕ್ರಿಯೆಯೇ ಎಲ್ ನಿನೊ. ಇದು ಜಗತ್ತಿನಾದ್ಯಂತ ಮಳೆ ಮತ್ತು ತಾಪಮಾನದ ವಿನ್ಯಾಸವನ್ನು ಬದಲಿಸುತ್ತದೆ. ವೈಜ್ಞಾನಿಕವಾಗಿ ಇದು 'ಎಲ್ ನಿನೊ ಸದರನ್ ಆಸಿಲೇಶನ್' ಚಕ್ರದ ಒಂದು ಭಾಗವಾಗಿದೆ. ಸಾಮಾನ್ಯ ಪರಿಸ್ಥಿತಿಯಲ್ಲಿ, ಪೆಸಿಫಿಕ್ ಮಹಾಸಾಗರದ ಮೇಲೆ ಪೂರ್ವದಿಂದ ಪಶ್ಚಿಮಕ್ಕೆ ಬಲವಾದ ಮಾರುತಗಳು ಬೀಸುತ್ತವೆ. ಇವು ಮೇಲ್ಮೈಯ ಬಿಸಿನೀರನ್ನು ಏಷ್ಯಾದತ್ತ ತಳ್ಳುತ್ತವೆ ಮತ್ತು ದಕ್ಷಿಣ ಅಮೆರಿಕದ ಕರಾವಳಿಯಲ್ಲಿ ತಳಭಾಗದ ತಣ್ಣನೆಯ ನೀರು ಮೇಲೆ ಬರಲು ಅವಕಾಶ ಮಾಡಿಕೊಡುತ್ತವೆ. ಆದರೆ, ಎಲ್ ನಿನೊ ಸಂಭವಿಸಿದಾಗ ಈ ಮಾರುತಗಳು ದುರ್ಬಲಗೊಳ್ಳುತ್ತವೆ ಅಥವಾ ದಿಕ್ಕು ಬದಲಿಸುತ್ತವೆ. ಇದರಿಂದಾಗಿ ಪಶ್ಚಿಮದಲ್ಲಿದ್ದ ಬಿಸಿನೀರು ಮರಳಿ ದಕ್ಷಿಣ ಅಮೆರಿಕದ ಪೆರು ಮತ್ತು ಈಕ್ವೆಡಾರ್ ಕರಾವಳಿಯತ್ತ ಹರಿಯಲು ಪ್ರಾರಂಭಿಸುತ್ತದೆ. ಇದರ ಪರಿಣಾಮವಾಗಿ ಸಮುದ್ರದ ಮೇಲ್ಮೈ ತಾಪಮಾನವು ವಾಡಿಕೆಗಿಂತ 0.5 ಡಿಗ್ರಿ ಸೆಲ್ಸಿಯಸ್‌ನಿಂದ 2 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗಿ, ಪೆಸಿಫಿಕ್ ಮಹಾಸಾಗರದ ಮೇಲೆ ಗಾಳಿಯನ್ನು ನಿರಂತರವಾಗಿ ಸುತ್ತಿಸುವ 'ವಾಕರ್ ಸರ್ಕ್ಯುಲೇಶನ್' ಏರುಪೇರಾಗುತ್ತದೆ. ಇದು ಸರಿಯಾಗಿದ್ದರೆ ಭಾರತಕ್ಕೆ ಸಕಾಲದಲ್ಲಿ ಮಳೆ ಬರುತ್ತದೆ, ವ್ಯತ್ಯಾಸವಾದಾಗ ಮಳೆಯಲ್ಲೂ ಸಮಸ್ಯೆಯಾಗುತ್ತದೆ.



ಪ್ರತಿ ಎರಡರಿಂದ ಏಳು ವರ್ಷಗಳಿಗೊಮ್ಮೆ ಸಂಭವಿಸುವ ಎಲ್ ನಿನೊ ವಿದ್ಯಮಾನವು ಇಪ್ಪತ್ತನೇ ಶತಮಾನದಲ್ಲಿ ಸುಮಾರು 25ರಿಂದ 30 ಬಾರಿ ಮರುಕಳಿಸಿತ್ತು. 1911-12, 1972-73, 1982-83 ಮತ್ತು ವಿಶೇಷವಾಗಿ 1997-98ರ ವರ್ಷಗಳು ಭೀಕರ ಎಲ್ ನಿನೊಗೆ ಸಾಕ್ಷಿಯಾಗಿದ್ದವು. 1997-98ರ ಘಟನೆಯನ್ನು 'ಸೂಪರ್ ಎಲ್ ನಿನೊ' ಎಂದು ಕರೆಯಲಾಗಿದ್ದು, ಅದು ಅಂದಾಜು 35 ಬಿಲಿಯನ್ ಡಾಲರ್‌ನಷ್ಟು ಜಾಗತಿಕ ಆರ್ಥಿಕ ನಷ್ಟಕ್ಕೆ ಕಾರಣವಾಗಿತ್ತು.

ಭಾರತದ ದೃಷ್ಟಿಕೋನದಿಂದ ಎಲ್ ನಿನೊ ಅತ್ಯಂತ ಅಪಾಯಕಾರಿ. ಇದರ ಪರಿಣಾಮಗಳು ಬಹುಮುಖಿಯಾಗಿದ್ದು, ಮುಂಗಾರು ಮಾರುತಗಳು ದುರ್ಬಲಗೊಂಡು ಬರಗಾಲ ಮತ್ತು ತೀವ್ರ ಮಳೆ ಕೊರತೆ ಉಂಟಾಗುತ್ತದೆ. ಮುಂಗಾರು ಮಳೆಯ ಮೇಲೆ ಅವಲಂಬಿತವಾಗಿರುವ ದೇಶದ ಆಹಾರ ಭದ್ರತೆ ಮತ್ತು ಆರ್ಥಿಕತೆ ನೆಲಕಚ್ಚುತ್ತದೆ. ಕಳೆದ 140 ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಿದ ಬರಗಾಲಗಳಲ್ಲಿ ಶೇ 60ರಷ್ಟು ಎಲ್ ನಿನೊ ಪ್ರಭಾವವಿದೆ. ವಿಶೇಷವಾಗಿ 1951, 1965, 1972, 1982 ಮತ್ತು 2002ರ ವರ್ಷಗಳಲ್ಲಿ ಉಂಟಾದ ಎಲ್ ನಿನೊದಿಂದಾಗಿ ಭಾರತ ಭೀಕರ ಬರಗಾಲವನ್ನು ಎದುರಿಸಿತ್ತು. 2009ರಲ್ಲಿ ಸಂಭವಿಸಿದ ಎಲ್ ನಿನೊ ಕಳೆದ ಮೂರು ದಶಕಗಳಲ್ಲೇ ಅತ್ಯಂತ ಕಡಿಮೆ ಮಳೆಗೆ ಕಾರಣವಾಗಿತ್ತು.

2014-16ರ ಅವಧಿಯಲ್ಲಿ ಸತತ ಎರಡು ವರ್ಷಗಳ ಕಾಲ ಎಲ್ ನಿನೊ ಪ್ರಭಾವದಿಂದ, ಮಹಾರಾಷ್ಟ್ರದ ವಿದರ್ಭ ಮತ್ತು ಮರಾಠವಾಡ ಸೇರಿದಂತೆ ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿತ್ತು.

ಈ ವರ್ಷದ ಮೇ-ಜುಲೈ ಅವಧಿಯಲ್ಲಿ ಪ್ರಬಲ ಎಲ್ ನಿನೊ ಸೃಷ್ಟಿಯಾಗುವ ಸಾಧ್ಯತೆಯಿದೆ. ಇದರ ಪರಿಣಾಮ, ಕೃಷಿ ಕ್ಷೇತ್ರದ ಮೇಲೆ ತೀವ್ರವಾಗಿ ಆಗಲಿದೆ. ಜಲಾಶಯಗಳಲ್ಲಿನ ನೀರಿನಮಟ್ಟ ಕುಸಿಯುವುದರಿಂದ, ಜಲವಿದ್ಯುತ್ ಉತ್ಪಾದನೆ ಕಡಿಮೆಯಾಗಿ ಪಳೆಯುಳಿಕೆ ಇಂಧನದ ಅವಲಂಬನೆ ಹೆಚ್ಚುತ್ತದೆ.

ಎಲ್ ನಿನೊ ಬಿಸಿಯಾದ ಹಂತವಾದರೆ, ತಂಪಾದ ಹಂತವನ್ನು 'ಲಾನಿನಾ' ಎನ್ನುತ್ತಾರೆ. ಈ ಅವಧಿಯಲ್ಲಿ ಭಾರತದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತದೆ. ಇದು ನೈರುತ್ಯ ಮುಂಗಾರು ಮಾರುತಗಳನ್ನು ಬಲಪಡಿಸುತ್ತದೆ. ಈ ಎರಡು ವಿದ್ಯಮಾನಗಳ ನಡುವಿನ ಸಮತೋಲನವೇ ಭೂಮಿಯ ಹವಾಮಾನ ಸ್ಥಿರತೆಗೆ ಕಾರಣವಾಗುತ್ತದೆ.

ಪ್ರಸ್ತುತ ಜಾಗತಿಕ ತಾಪಮಾನ ಏರಿಕೆಯು ಎಲ್ ನಿನೊದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಆಧುನಿಕ ಉಪಗ್ರಹ ಆಧಾರಿತ ತಂತ್ರಜ್ಞಾನದ ಮೂಲಕ ಇಂದು 6ರಿಂದ 9 ತಿಂಗಳು ಮುಂಚಿತವಾಗಿಯೇ ಇದರ ಮುನ್ಸೂಚನೆ ಪಡೆಯಲು ಸಾಧ್ಯವಿದೆ.

ಬದಲಾಗುತ್ತಿರುವ ಹವಾಮಾನಕ್ಕೆ ತಕ್ಕಂತೆ ರೈತರು ಕಡಿಮೆ ನೀರು ಬಳಸುವ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಮಳೆನೀರು ಸಂಗ್ರಹದಂತಹ ಸುಸ್ಥಿರ ಮಾರ್ಗಗಳನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಇದು ಆಗಾಗ ಸಂಭವಿಸುವ ಪ್ರಕೃತಿಯ ಸಹಜ ಪ್ರಕ್ರಿಯೆ ಆದರೂ, ಇದರ ವ್ಯಾಪ್ತಿ ಮಾತ್ರ ಜಗತ್ತನ್ನೇ ಒಳಗೊಂಡಿದೆ. ನಿರಂತರ ಸಂಶೋಧನೆ ಮತ್ತು ಹೊಂದಾಣಿಕೆಯೇ ಈ ಅಸ್ಥಿರ ಹವಾಮಾನದ ವಿರುದ್ಧದ ನಮ್ಮ ಅಸ್ತ್ರಗಳಾಗಬೇಕಿವೆ. ಸರ್ಕಾರ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ರೈತರು, ಸಾರ್ವಜನಿಕರ ಹಿತ ರಕ್ಷಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

# ಶಿಕ್ಷಣದ ಹೊರೆ; ಪೋಷಕರಿಗೆ ಬರೆ



### ಖಾಸಗಿ ಶಾಲೆಗಳು, ಟ್ಯೂಷನ್‌ನತ್ತ ಹೆಚ್ಚುತ್ತಿರುವ ಒಲವು • ಕುಟುಂಬದ ಆದಾಯದಲ್ಲಿ ಗಣನೀಯ ಮೊತ್ತ ವ್ಯಯ

ಭಾರತದ ಸಂವಿಧಾನವು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿದ್ದು, ಅದರ ಜಾರಿಗಾಗಿ ಕಾಯ್ದೆಯನ್ನೇ ರೂಪಿಸಲಾಗಿದೆ. ಆದರೆ, ಮಕ್ಕಳ ಶಿಕ್ಷಣಕ್ಕಾಗಿ ಪೋಷಕರು ತಮ್ಮ ಗಳಿಕೆಯಲ್ಲಿ ಗಣನೀಯ ಮೊತ್ತವನ್ನು ವೆಚ್ಚ ಮಾಡುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದ ಅಧ್ಯಯನ ತಿಳಿಸಿದೆ. ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಓದಿಸಲು ಮತ್ತು ಅವರ ಖಾಸಗಿ ಟ್ಯೂಷನ್‌ಗಾಗಿ ಕುಟುಂಬಗಳು ತಮ್ಮ ವಾರ್ಷಿಕ ಆದಾಯದಲ್ಲಿ ದೊಡ್ಡ ಮೊತ್ತವನ್ನು ವೆಚ್ಚ ಮಾಡುತ್ತಿವೆ. ವಿವಿಧ ಪ್ರದೇಶ, ಸಮುದಾಯಗಳಲ್ಲಿ ಈ ಮೊತ್ತವು ಭಿನ್ನ ಭಿನ್ನವಾಗಿವೆ. ಶಿಕ್ಷಣದ ವೆಚ್ಚವು ಕುಟುಂಬಗಳ ಆದಾಯದ ಮೇಲೆ ಮತ್ತು ಕೌಟುಂಬಿಕ ಸ್ಥಿತಿಗತಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಭಾರತದ ಸಂವಿಧಾನದ 21(ಎ) ವಿಧಿಯು 6ರಿಂದ 14 ವರ್ಷದ ಒಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತರಿಪಡಿಸುತ್ತದೆ. ಆರ್‌ಟಿಇ ಕಾಯ್ದೆ–2009ರ ಮೂಲಕ ಈ ಹಕ್ಕನ್ನು ಜಾರಿಗೊಳಿಸಲಾಗಿದೆ. ಆದರೂ ದೇಶದಲ್ಲಿ ಪೋಷಕರು ಮಕ್ಕಳನ್ನು ಖಾಸಗಿ ಶಾಲೆ, ಟ್ಯೂಷನ್ ಇತ್ಯಾದಿಗಳಿಗೆ ಸೇರಿಸುವ ಮೂಲಕ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣವನ್ನು ವೆಚ್ಚ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದ್ದು, ಇದು ಕುಟುಂಬಗಳಿಗೆ ಆರ್ಥಿಕ ಹೊರೆಯಾಗಿದೆ ಎಂದು ಕೇಂದ್ರ ಸರ್ಕಾರದ ವರದಿ ಹೇಳಿದೆ.

ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಮಕ್ಕಳ ಶಿಕ್ಷಣಕ್ಕಾಗಿ ಪೋಷಕರು ಮಾಡುತ್ತಿರುವ ವೆಚ್ಚದ ಬಗ್ಗೆ ತಿಳಿಯುವ ಉದ್ದೇಶದಿಂದಲೇ ಅಧ್ಯಯನ ಕೈಗೊಂಡಿತ್ತು. ಅದರ ಫಲವಾಗಿ ಬಂದಿದ್ದೇ ಕಾಂಪ್ರಹೆನ್ಸಿವ್ ಮಾಡ್ಯುಲರ್ ಸರ್ವೆ ಆನ್ ಎಜುಕೇಷನ್–2025 (ಸಿಎಂಎಸ್:ಇ) ವರದಿ. ರಾಷ್ಟ್ರೀಯ ಮಾದರಿ ಸಮೀಕ್ಷೆಯ (ಎನ್‌ಎಸ್‌ಎಸ್) 80ನೇ ಆವೃತ್ತಿಯ ಭಾಗವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ದೇಶದ 2,384 ಹಳ್ಳಿಗಳು ಮತ್ತು 1,982 ನಗರ ಪ್ರದೇಶಗಳ ಒಟ್ಟು 52,085 ಕುಟುಂಬಗಳನ್ನು ಸಮೀಕ್ಷೆಯು ಒಳಗೊಂಡಿದೆ. ಪೋಷಕರು ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿರುವ ಒಟ್ಟು ವೆಚ್ಚದಲ್ಲಿ ಶಾಲಾ ಶುಲ್ಕ, ಟ್ಯೂಷನ್ ಶುಲ್ಕ, ಪರೀಕ್ಷಾ ಶುಲ್ಕ, ವಾಹನ ವೆಚ್ಚ, ಸಮವಸ್ತ್ರ, ಪುಸ್ತಕ, ಪೆನ್ನು, ಪೆನ್ಸಿಲ್ ಮತ್ತು ಇತರೆ ಖರ್ಚುಗಳು ಸೇರಿವೆ.

> ಗ್ರಾಮೀಣ ಭಾರತದಲ್ಲಿ ಪ್ರತಿ ವಿದ್ಯಾರ್ಥಿಗೆ ಮಾಡುತ್ತಿರುವ ವಾರ್ಷಿಕ ಸರಾಸರಿ ವೆಚ್ಚ ₹8,382 ಇದ್ದರೆ, ದೇಶದ ನಗರ ಪ್ರದೇಶದಲ್ಲಿ ಈ ಮೊತ್ತ ₹23,470

ಖಾಸಗಿ ಶಾಲೆಗಳಿಗೆ ಸೇರಿಸುವುದು ಮತ್ತು ಖಾಸಗಿ ಟ್ಯೂಷನ್‌ಗೆ ಸೇರಿಸುವುದು ಮಕ್ಕಳ ವಿದ್ಯಾಭ್ಯಾಸದ ವೆಚ್ಚ ಏರಿಕೆಗೆ ಪ್ರಮುಖ ಕಾರಣವಾಗಿವೆ. 2025–26 ಶೈಕ್ಷಣಿಕ ವರ್ಷದಲ್ಲಿ ಶಾಲೆಗಳಿಗೆ ದಾಖಲಾತಿ ಪಡೆದ ಮಕ್ಕಳ ಪೈಕಿ ಶೇ 38ರಷ್ಟು ಮಂದಿ ಖಾಸಗಿ ಶಾಲೆಗಳಿಗೆ ಸೇರಿದ್ದಾರೆ. ಖಾಸಗಿ ಶಾಲೆಗಳಲ್ಲಿ ಓದುವ ಮಕ್ಕಳಿಗಾಗಿ ಪೋಷಕರು ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗಿಂತ 10 ಪಟ್ಟು ಹೆಚ್ಚು ವೆಚ್ಚ ಮಾಡುತ್ತಿದ್ದಾರೆ. ಮಾಧ್ಯಮಿಕ ಶಾಲೆಗಳಲ್ಲಿ ಐವರು ಮಕ್ಕಳಲ್ಲಿ ಇಬ್ಬರು ಮನೆಪಾಠಕ್ಕೆ ಹೋಗುತ್ತಿದ್ದಾರೆ. ಕುಟುಂಬವೊಂದು ತನ್ನ ಮಾಸಿಕ ಆದಾಯದ ಶೇ 5–ಶೇ 10ರಷ್ಟು ಹಣವನ್ನು ಮಕ್ಕಳ ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತಿದೆ.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಎಂದರೆ ಖಾಸಗಿ ಶಾಲೆಗಳಿಗೆ ಸೇರಿಸುವುದು ಎಂದು ಬಹುತೇಕ ಪೋಷಕರು ಭಾವಿಸಿದ್ದಾರೆ. ಗ್ರಾಮೀಣ ಭಾಗದವರಿಗಿಂತ ನಗರ–ಪಟ್ಟಣಗಳ ಹೆಚ್ಚು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಸಹಜವಾಗಿಯೇ, ನಗರ ಪ್ರದೇಶಗಳ ಕುಟುಂಬಗಳು ಮಕ್ಕಳ ಶಿಕ್ಷಣಕ್ಕಾಗಿ ಗ್ರಾಮೀಣ ಪ್ರದೇಶದ ಕುಟುಂಬಗಳಿಗಿಂತ ಹೆಚ್ಚು ಖರ್ಚು ಮಾಡುತ್ತಿವೆ.

**ಖಾಸಗಿ ಟ್ಯೂಷನ್:** ಇದು ಶಿಕ್ಷಣದ ಅವಿಭಾಜ್ಯ ಅಂಗ ಎನ್ನುವಂತಾಗಿದೆ. ಪೂರ್ವ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಎಲ್ಲ ಹಂತಗಳಲ್ಲೂ ಮನೆಪಾಠ ಅನಿವಾರ್ಯ ಎಂದು ಹೆಚ್ಚಿನ ಪೋಷಕರು ಭಾವಿಸುತ್ತಿದ್ದಾರೆ. ಹಂತದಿಂದ ಹಂತಕ್ಕೆ ಇದು ಹೆಚ್ಚುತ್ತಾ ಸಾಗುತ್ತದೆ. ಬಹುತೇಕ ಉನ್ನತ ಶಿಕ್ಷಣ ಕೋರ್ಸ್‌ಗಳು ಪ್ರವೇಶ ಪರೀಕ್ಷೆಯನ್ನು ಆಧರಿಸಿ ಪ್ರವೇಶ ನೀಡುವುದರಿಂದ ಹೆಚ್ಚು ವಿದ್ಯಾರ್ಥಿಗಳು ಮನೆಪಾಠದ ಮೊರೆ ಹೋಗುತ್ತಿದ್ದಾರೆ. ಖಾಸಗಿ ಟ್ಯೂಷನ್ ನೀಡುವ ಸಂಸ್ಥೆಗಳು ಮಾಫಿಯಾ ರೀತಿ ಬೆಳೆದಿದ್ದು, ಶಿಕ್ಷಣ ಕ್ಷೇತ್ರವನ್ನು ಒಂದು ಹಂತದವರೆಗೆ ನಿಯಂತ್ರಿಸುತ್ತಿವೆ. ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ಮಿತಿಗಳೂ ಖಾಸಗಿ ಟ್ಯೂಷನ್ ಅನಿವಾರ್ಯ ಎನ್ನುವಂತೆ ಮಾಡಿವೆ ಎನ್ನುವ ಅಭಿಪ್ರಾಯವೂ ಇದೆ. ಕೆಲವು ಕೋಚಿಂಗ್ ಸೆಂಟರ್‌ಗಳೇ ನಂತರದಲ್ಲಿ ಶಾಲೆ/ಕಾಲೇಜುಗಳಾಗಿ ಬದಲಾಗಿರುವ ನಿದರ್ಶನಗಳೂ ಇದೆ.


**ಸಾಮಾಜಿಕ ಅಂತರ:** ದೇಶದಲ್ಲಿ ಕುಟುಂಬಗಳು ಮಕ್ಕಳ ಶಿಕ್ಷಣಕ್ಕಾಗಿ ಮಾಡುತ್ತಿರುವ ವೆಚ್ಚವು ಏಕರೂಪಿಯಾಗಿಲ್ಲ. ಸರ್ಕಾರಿ ಶಾಲೆ–ಖಾಸಗಿ ಶಾಲೆ, ನಗರ–ಗ್ರಾಮೀಣ, ಎಸ್‌ಸಿ, ಎಸ್‌ಟಿ–ಹಿಂದುಳಿದ–ಸಾಮಾನ್ಯ ವರ್ಗ ಹೀಗೆ ವಿವಿಧ ಪ್ರದೇಶ, ಸಾಮಾಜಿಕ ಹಿನ್ನೆಲೆ ಮತ್ತು ಶಾಲೆಗಳ ಸ್ವರೂಪವನ್ನು ಆಧರಿಸಿ ವೆಚ್ಚವು ನಿರ್ಧಾರವಾಗುತ್ತದೆ.

ಶಿಕ್ಷಣ ವೆಚ್ಚದಲ್ಲಿ ವಿವಿಧ ಸಮುದಾಯಗಳ ನಡುವೆಯೂ ವ್ಯತ್ಯಾಸವಿದೆ. ನಿದರ್ಶನಕ್ಕೆ, ಪರಿಶಿಷ್ಟ ಪಂಗಡದ ಕುಟುಂಬವೊಂದು ವಾರ್ಷಿಕವಾಗಿ ತನ್ನ ಆದಾಯದ ಶೇ 5ರಷ್ಟನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವೆಚ್ಚ ಮಾಡುತ್ತಿದೆ. ಒಬಿಸಿ ಕುಟುಂಬವೊಂದು ಅದರ ಎರಡರಷ್ಟು ವೆಚ್ಚ ಮಾಡಿದರೆ, ‘ಸಾಮಾನ್ಯ ವರ್ಗ’ದ ಕುಟುಂಬವು ಅದರ ಮೂರರಷ್ಟು ವೆಚ್ಚ ಮಾಡುತ್ತದೆ. ವಿದ್ಯಾರ್ಥಿಯು ಶೈಕ್ಷಣಿಕವಾಗಿ ಮೇಲೇರಿದಂತೆ ಎಲ್ಲ ಸಾಮಾಜಿಕ ಗುಂಪುಗಳೂ ಹೆಚ್ಚೆಚ್ಚು ಖರ್ಚು ಮಾಡುತ್ತವೆ ಎಂದು ವರದಿ ಉಲ್ಲೇಖಿಸಿದೆ.


ಶಿಕ್ಷಣದ ಬಗ್ಗೆ ಎಲ್ಲ ಜಾತಿ/ವರ್ಗಗಳಲ್ಲೂ ಜಾಗೃತಿ ಮೂಡುತ್ತಿದೆ. ಆದರೆ, ಏರುತ್ತಿರುವ ಶಿಕ್ಷಣ ವೆಚ್ಚವು ಕುಟುಂಬದ ಇತರ ವೆಚ್ಚಗಳ ಮೇಲೆ ಮತ್ತು ಒಟ್ಟಾರೆ ಕುಟುಂಬದ ಆರ್ಥಿಕ ಸ್ಥಿತಿಗತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.




### ಕರ್ನಾಟಕದಲ್ಲಿ ಶಾಲಾ ಶಿಕ್ಷಣಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಮಾಡಲಾಗುತ್ತಿರುವ ವಾರ್ಷಿಕ ಸರಾಸರಿ ವೆಚ್ಚ (ರೂಪಾಯಿಗಳಲ್ಲಿ)




### ಕರ್ನಾಟಕದಲ್ಲಿ ಖಾಸಗಿ ಟ್ಯೂಷನ್‌ಗೆ ಪ್ರತಿ ವಿದ್ಯಾರ್ಥಿಗೆ ಮಾಡಿದ ಸರಾಸರಿ ವೆಚ್ಚ (ರೂಪಾಯಿಗಳಲ್ಲಿ) (2025)





### ಕರ್ನಾಟಕದಲ್ಲಿ ಶಾಲೆಗೆ ಸೇರಿಸಿದ ಮಕ್ಕಳಲ್ಲಿ ಖಾಸಗಿ ಟ್ಯೂಷನ್ ಪಡೆದವರ ಪ್ರಮಾಣ (2025)




1. ಪಿಯುಸಿ 2. ಪ್ರೌಢ ಶಿಕ್ಷಣ 3. ಮಾಧ್ಯಮಿಕ ಶಿಕ್ಷಣ 4. ಪ್ರಾಥಮಿಕ ಶಿಕ್ಷಣ 5. ಪೂರ್ವ ಪ್ರಾಥಮಿಕ

### 2025ರಲ್ಲಿ ಕರ್ನಾಟಕದಲ್ಲಿ ಶಾಲೆಗಳಿಗೆ ದಾಖಲಾತಿ ಪಡೆದ ಒಟ್ಟು ಮಕ್ಕಳಲ್ಲಿ ಖಾಸಗಿ ಟ್ಯೂಷನ್‌ಗೆ ಹೋದವರ ಪ್ರಮಾಣ





## ಬಡತನಕ್ಕೆ ದೂಡುತ್ತಿರುವ ಶಿಕ್ಷಣ


ಭಾರತದಲ್ಲಿ ಕುಟುಂಬಗಳು ಮಾಡುವ ವೆಚ್ಚದ ಸ್ವರೂಪದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬದಲಾವಣೆಗಳು ಕಂಡುಬಂದಿವೆ. ಆಹಾರ ಧಾನ್ಯಗಳ ಮೇಲೆ ಮಾಡುತ್ತಿರುವ ವೆಚ್ಚ ಕಡಿಮೆಯಾಗುತ್ತಿದ್ದು, ಶಿಕ್ಷಣ, ಆರೋಗ್ಯ ಮತ್ತು ಗ್ರಾಹಕ ಉತ್ಪನ್ನಗಳ ಮೇಲೆ ಮಾಡುತ್ತಿರುವ ವೆಚ್ಚ ಹೆಚ್ಚಾಗಿದೆ. ಅದರಲ್ಲೂ ಆರೋಗ್ಯ ಮತ್ತು ಶಿಕ್ಷಣದ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಇದು ಮಧ್ಯಮವರ್ಗದ ಕುಟುಂಬಗಳನ್ನು ಬಡತನಕ್ಕೆ ತಳ್ಳುತ್ತಿದೆ ಎಂದು ಹಲವು ವರದಿಗಳು ಹೇಳಿವೆ. ಆರೋಗ್ಯ ಕ್ಷೇತ್ರದಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿಕೊಳ್ಳುತ್ತಿವೆ.

ಸರ್ಕಾರಿ ಸಂಸ್ಥೆಗಳ ಕಳಪೆ ವ್ಯವಸ್ಥೆ, ಜನರ ಉತ್ತಮ ಗುಣಮಟ್ಟದ ಬಯಕೆ, ಪ್ರತಿಷ್ಠೆ ಹೀಗೆ ಹಲವು ಅಂಶಗಳು ಇದರ ಹಿಂದಿವೆ. ಬಹುತೇಕ ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ಶಾಲೆಗಳು ಭಾರಿ ಮೊತ್ತವನ್ನು ಜನರಿಂದ ವಸೂಲಿ ಮಾಡುತ್ತಿವೆ ಎನ್ನುವ ಆರೋಪಗಳಿವೆ. ಖಾಸಗಿ ಶಾಲೆಗಳ ಅತಾರ್ಕಿಕ ಶುಲ್ಕ ವಸೂಲಿಗೆ ಸರ್ಕಾರ ಅಂಕುಶ ಹಾಕಬೇಕು ಎನ್ನುವ ಒತ್ತಾಯ ಹಲವು ವರ್ಷಗಳಿಂದ ಕೇಳಿಬರುತ್ತಲೇ ಇದೆ.


### ಮಕ್ಕಳ ದಾಖಲಾತಿ: ಯಾವ ಶಾಲೆಗೆ ಎಷ್ಟು? (ಶೇಕಡಗಳಲ್ಲಿ)




### ದೇಶದಲ್ಲಿ ಶಾಲಾ ಶಿಕ್ಷಣಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಮಾಡಲಾಗುತ್ತಿರುವ ವಾರ್ಷಿಕ ಸರಾಸರಿ ವೆಚ್ಚ (ರೂಪಾಯಿಗಳಲ್ಲಿ)





### ದೇಶದಲ್ಲಿ ಶಾಲೆಗೆ ದಾಖಲಾದ ಮಕ್ಕಳಲ್ಲಿ ಖಾಸಗಿ ಟ್ಯೂಷನ್ ಪಡೆದವರ ಪ್ರಮಾಣ (2025)




2025–26ನೇ ಶೈಕ್ಷಣಿಕ ವರ್ಷದಲ್ಲಿ ದೇಶದಾದ್ಯಂತ ದಾಖಲಾದ ಒಟ್ಟು ಮಕ್ಕಳಲ್ಲಿ ಗ್ರಾಮೀಣ ಭಾಗದ ಶೇ 25.5ರಷ್ಟು ಮಕ್ಕಳು ಖಾಸಗಿ ಟ್ಯೂಷನ್‌ಗೆ ಹೋಗಿದ್ದರೆ, ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇ 30.7ರಷ್ಟಿತ್ತು.

### ದೇಶದಲ್ಲಿ ಖಾಸಗಿ ಟ್ಯೂಷನ್‌ಗೆ ಪ್ರತಿ ವಿದ್ಯಾರ್ಥಿಗೆ ಮಾಡಿದ ಸರಾಸರಿ ವೆಚ್ಚ (2025) (ರೂಪಾಯಿಗಳಲ್ಲಿ)




## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪ್ರಧಾನಿ ನರೇಂದ್ರ ಮೋದಿ ಅವರು ಹೋಟೆಲ್ ಒಂದರಲ್ಲಿ ಮುಖಕ್ಕೆ ಮಸಾಜ್ ಮಾಡಿಸಿಕೊಳ್ಳುತ್ತಿರುವ ವಿಡಿಯೊವೊಂದು ಸೋರಿಕೆಯಾಗಿದೆ ಎಂದು ಪ್ರತಿಪಾದಿಸುತ್ತಾ ‘ಎಕ್ಸ್’ನಲ್ಲಿ ಒಂದು ವಿಡಿಯೊ ತುಣುಕನ್ನು ಪೋಸ್ಟ್ ಮಾಡಲಾಗಿದೆ. ಇದನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಟುಕಾಟ ನಡೆಸಿದಾಗ ಪರ್ದೀಪ್ ಕೌರ್ ಧಿಲ್ಲಾನ್ ಎಂಬ ಕಂಟೆಂಟ್ ಕ್ರಿಯೇಟರ್, ತಮ್ಮ ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿ ಇದೇ ವಿಡಿಯೊವನ್ನು ಪೋಸ್ಟ್ ಮಾಡಿರುವುದು ಕಂಡು ಬಂತು. ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ 12ರಂದು ವಿಡಿಯೊವನ್ನು ಪೋಸ್ಟ್ ಮಾಡಿದ್ದರು. ಅದರಲ್ಲಿ #ಮಸಾಜ್‌ಟೈಮ್ #ರಿಲ್ಯಾಕ್ಸ್‌ಮೋಡ್ #ಸೆಲ್ಫ್‌ಕೇರ್ ಮುಂತಾದ ಹ್ಯಾಷ್‌ಟ್ಯಾಗ್‌ಗಳನ್ನೂ ಬಳಸಿದ್ದರು.

ಫೇಸ್‌ಬುಕ್‌ನ ಅವರ ಖಾತೆಯನ್ನು ಪರಿಶೀಲಿಸಿದಾಗ ಅವರು, ಅಮೆರಿಕದ ನ್ಯೂಜೆರ್ಸಿಯಲ್ಲಿ ವಾಸಿಸುತ್ತಿದ್ದಾರೆ ಎಂದು ತಿಳಿಯಿತು. ಅವರ ಖಾತೆಯಲ್ಲಿನ ಇತರ ಪೋಸ್ಟ್‌ಗಳನ್ನು ಗಮನಿಸಿದಾಗ, ಈ ವಿಡಿಯೊದಲ್ಲಿರುವುದು (ಮಸಾಜ್ ಮಾಡಿಸಿಕೊಳ್ಳುತ್ತಿರುವವರು) ಅವರ ಪತಿ ಜಸ್ಪಾಲ್ ಸಿಂಗ್ ಸರಾಯ್ ಎಂಬುದು ಗೊತ್ತಾಯಿತು. ಧಿಲ್ಲೋನ್ ಅವರು ತಮ್ಮ ಹಲವು ಪೋಸ್ಟ್‌ಗಳಲ್ಲಿ ಸರಾಯ್ ಅವರನ್ನು ಟ್ಯಾಗ್ ಕೂಡ ಮಾಡಿದ್ದಾರೆ. ಹಾಗಾಗಿ, ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿರುವವರು ಮೋದಿ ಅವರಲ್ಲ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ಮಿತಿ ಮತ್ತು ಸಾಧ್ಯತೆಗಳ ತಗಾದೆ



ನುಡಿ ಬೆಳಗು

ವಾಸುದೇವ ನಾಡಿಗ್

ಕೊಪ್ಪಳದ ಗವಿಸಿದ್ದೇಶ್ವರ ಮಠದ ಸ್ವಾಮೀಜಿಗಳು ತಮ್ಮ ಒಂದು ಪ್ರವಚನದಲ್ಲಿ ಈ ದೃಷ್ಟಾಂತವನ್ನು ಬಳಸುತ್ತಾರೆ. ಒಂದು ಕಾಗೆ. ಅದಕ್ಕೆ ಸುಂದರವಾದ ದನಿ ಇಲ್ಲ, ಸುಂದರವಾದ ಶರೀರ, ಬಣ್ಣವಿಲ್ಲ. ಆದರೂ ಅದು ಸಂತೋಷವಾಗಿ ಇರುವುದನ್ನು ನೋಡಿ ಕೋಗಿಲೆ ಮತ್ತು ನವಿಲುಗಳಿಗೆ ಅಚ್ಚರಿ; ಚಂದದ ಬಣ್ಣ, ದನಿ ಇರದೇ ಇದ್ದರೂ ಖುಷಿಯಾಗಿ ಹಾರಾಡಿಕೊಂಡಿರುವ ಬಗ್ಗೆ. ಎರಡೂ ಕೇಳಿಯೇ ಬಿಡುತ್ತವೆ. ಚಂದದ ದನಿ, ಚಂದದ ಬಣ್ಣ ಎರಡೂ ಇರದ ನೀನು ಸದಾ ಖುಷಿಯಿಂದ ಇರಲು ಏನು ಕಾರಣ? ಅದಕ್ಕೆ ಕಾಗೆ ಬಹಳ ಮಾರ್ಮಿಕವಾಗಿ ಉತ್ತರ ಕೊಡುತ್ತದೆ: ‘ನಿಮ್ಮಿಬ್ಬರ ದನಿ ಬಣ್ಣ ನರ್ತನವನ್ನು ಕಂಡು ನಾನು ಸಂತೋಷಪಡುತ್ತೇನೆ ಅಷ್ಟು ಸಾಕು. ನನಗೇ ನನ್ನ ಬಗ್ಗೆ ಈ ರೀತಿ ಯೋಚನೆ ಇಲ್ಲ. ನಾನು ನನಗೆ ಸಮಸ್ಯೆಯೇ ಅಲ್ಲ. ನಿಮ್ಮದೇನು ಸಮಸ್ಯೆ?’

ಇದೇ ನಮ್ಮ ಸಮಸ್ಯೆ ಅನಿಸುತ್ತದೆ. ಬೇರೆಯವರಿಗೆ ಇರದ ಸಮಸ್ಯೆಯನ್ನು ಅವರ ತಲೆಯೊಳಗೆ ಹಾಕಿ ಮಜಾ ಮಾಡುವ ಪ್ರವೃತ್ತಿ ಅದು. ಉಳ್ಳವರ ಶಿವಾಲಯದ ಕತೆಯೇ ಇದು. ಕೂದಲಿದ್ದವರು ಹೇಗೆ ಬೇಕಾದರೂ ಬಾಚಬಹುದು. ಇನ್ನೊಬ್ಬರ ದೇಹ, ಇನ್ನೊಬ್ಬರ ಮನೆ, ಅವರ ಬಳಿ ಇರುವ ಭೌತಿಕ ವಸ್ತುಗಳು ಅವು ಅವರವು. ಅವುಗಳ ಜೊತೆಗೆ ನಿರಾಳವಾಗಿ ಹೊಂದಿಕೊಂಡು ಬಾಳು ನಡೆಸುತ್ತಿರುತ್ತಾರೆ. ಅವರಿಗೆ ಏನೂ ಸಮಸ್ಯೆ ಇರುವುದಿಲ್ಲ. ಇದ್ದವರು ಹೋಗಿ ಹೊಸ ಹೊಸ ಸಮಸ್ಯೆಗಳನ್ನು ಹುಟ್ಟು ಹಾಕಿ ಬರುತ್ತಾರೆ. ಆ ಮೂರು ಜನರ ಪುಟ್ಟ ಸಂಸಾರಕ್ಕೆ ವೆಸ್ಪಾ, ಹೋಂಡಾದಂತಹ ಗಾಡಿ ಸಾಕಿತ್ತು. ಅದು ಅವರಿಗೆ ಸಮಸ್ಯೆ ಎನಿಸುತ್ತಲೇ ಇರಲಿಲ್ಲ. ಆದರೆ ಹೋದವರು ತಮ್ಮ ಬಳಿ ಇರುವ ಹೊಸ ಆವೃತ್ತಿಯ ಕಾರು, ಅದರ ಅನುಕೂಲ, ಲಭ್ಯತೆ, ಮಾಸಿಕ ಕಂತುಗಳ ಬಗ್ಗೆ ಭಾಷಣ ಹೊಡೆದು, ಕಾರು ನಿಲ್ಲಿಸುವ ಜಾಗ, ಖರ್ಚು, ಸಾಲ ಎಲ್ಲ ಹೊರೆಯನ್ನು ಹೊರಿಸಿ ಬಂದುಬಿಡುತ್ತಾರೆ. ಕೋಗಿಲೆಯ ಕಂಠ, ನವಿಲಿನ ನರ್ತನ, ಬಣ್ಣ ನೋಡಿ ಖುಷಿಪಡುತ್ತಿದ್ದ ಕಾಗೆಯ ನಿಲುವೇ ಬೇರೆ. ಬಾಳಿನ ಗುರಿಯೇ ಬೇರೆ. ಇದ್ದುದರಲ್ಲೇ ತೃಪ್ತಿ ಮತ್ತು ಅಂಗೈನ ನೆಲ್ಲಿಕಾಯಿ ಮುಖ್ಯವೇ ಹೊರತು ಆಕಾಶದ ಮಲ್ಲಿಗೆ ಅಲ್ಲ.


ಇದು ತಮ್ಮ ಪಾಡಿಗೆ ತಾವು ತಮ್ಮ ಹಾಸಿಗೆಯಲ್ಲಿ ಕಾಲು ಚಾಚಿ ಮಲಗಿದವರ ನಿದ್ದೆ ಹಾಳು ಮಾಡುವವರ ಸಮಸ್ಯೆ. ಕೆಲವೊಂದು ಮಿತಿಗಳನ್ನು ಒಪ್ಪಿಕೊಳ್ಳುವುದೂ ವಿವೇಕವೇ ಎನ್ನುವುದಾದರೆ ಅಂತಹ ವಿವೇಕವನ್ನು ಗೌರವಿಸೋಣ. ‘ಮಿತಿ ಮೀರು’ ಮತ್ತು ‘ಸಾಧ್ಯತೆಗಳನ್ನು ಹಿಗ್ಗಿಸಿಕೋ’ ಎಂಬ ಮಾತಿನಲ್ಲಿ ಬಹಳ ಅರ್ಥವಿದೆ. ನಾಲ್ಕು ಗೋಡೆಗಳ ನಡುವೆಯೇ ಜೀವ ಸವೆಸದೆ ಲೋಕವನ್ನು ನೋಡುವ, ಕಲಿಯುವ, ಬೆರೆಯುವ ಸಾಧ್ಯತೆ. ಆದರೆ ಎಪ್ಪತ್ತು ಸಾವಿರ ಬೆಲೆಯ ಬೈಕನ್ನೇ ನಿಭಾಯಿಸಲಾಗದೆ ಅನಗತ್ಯವಾಗಿ ದುಬಾರಿ ಕಾರನ್ನು ಖರೀದಿಸಿ ಜೀವಮಾನವಿಡೀ ಪರಿತಪಿಸುವುದು ‘ಮಿತಿ ಮೀರುವುದು’ ಅನಿಸುವುದಿಲ್ಲ. ದೇಹ ಬಣ್ಣ ಆಕಾರ ಆರೋಗ್ಯ ಅವರವರ ಸ್ವತ್ತು. ಅವರವರು ತಮಗೆ ಸಿಕ್ಕ ಚೆಲುವನ್ನು ಒಲವನ್ನು ಬಾಳನ್ನು ಹಾಗಾಗೇ ಸ್ವೀಕರಿಸಿ ಚೆಂದ ಉಸಿರಾಡುತ್ತಿರುವಾಗ ಅಂತಹ ಜೀವನ ಕೋಗಿಲೆಯ ಮಧುರ ಕಂಠ ಮತ್ತು ನವಿಲಿನ ಬಣ್ಣದ ಮೈ ರೆಕ್ಕೆಯನ್ನೂ ನಾಚಿಸಬಲ್ಲದು. ಒಮ್ಮೆ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ‘ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ...’ ಹಾಡನ್ನು ಕೇಳೋಣ. ❖

## ಗುಂಡಣ್ಣ




## ಪದಬಂಧ 6381

ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1. ಮನದೊಳಗಿರುವ ವಂಶ! (4)
3. ಒಪ್ಪವಾಗಿ ಬಂದಿರುವ ಸೌಕರ್ಯ (4)
5. ಮಧುರವಾದ ಧ್ವನಿ (4)
7. ಸ್ವಾಭಾವಿಕವಾದುದು ಸಜದಲ್ಲಿದೆ! (3)
8. ಯಾವುದೇ ಅಪರಾಧವನ್ನು ಮಾಡದಿರುವವನು (5)
12. ಸೂಕ್ಷ್ಮವಾದ ಪರಿಶೀಲನೆ (3)
13. ಪರಸ್ಪರ ಸಹಾಯ (4)
15. ಅದೇ ತಾನೆ ಕಡೆದ ಹೊಸಬೆಣ್ಣೆ (4)
16. ವರ ಪಡೆದಿರುವ ಬೇಡ (4)

**ಮೇಲಿಂದ ಕೆಳಕ್ಕೆ**

1. ಇನ್ನೂ ಮರಿ! ಈ ಹೆಣ್ಣುದುಂಬಿ! (4)
2. ತವರಿನವರು ನೀಡಿರುವ ಲೋಹ (3)
4. ಅವಶ್ಯಕ ವಸ್ತು (4)
6. ವರನಲ್ಲಿ ಪ್ರತಿನಿಧಿ ಕಾಣಿಸಿದನೇ? (3)
7. ಸತ್ತವರನ್ನು ಹೂಳುವ ಸ್ಥಳ (3)
8. ಪರೀಕ್ಷೆಯನ್ನು ಎದುರು ನೋಡುವುದು! (3)
9. ರಾಯರಿಂದ ಬಂದಿರುವ ನಿರೂಪ (3)
10. ಮನೆಯನ್ನು ಹೀಗೂ ಹೇಳುತ್ತಾರೆ (4)
11. ಪುರದಲ್ಲಿ ದೊರೆತ ಸನ್ಮಾನ (4)
14. ವನದ ಕೊನೆಗೆ ಮಾಡಿದ ಯಜ್ಞ (3)

### 6380ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಜನಗಣತಿ 4.ಸಂಕುಲ 5.ಲಷ್ಕರು 6.ಹವನ 8.ಪ್ರಶಸ್ತ 9.ವೀಕ್ಷಕ 11.ಕಳಶ 12.ರಮಣ 13.ಲವಣ 15.ಕಲಭ 17.ದಾಸ್ತಾನು 18.ವಸತಿಗೃಹ

**ಮೇಲಿಂದ ಕೆಳಕ್ಕೆ:**
1.ಜಲ 2.ಗಡವ 3.ತಿಲ 6.ಹಸ್ತಕೌಶಲ 7.ನವೀಕರಣ 8.ಪ್ರತೀಕ 10.ಕಲ್ಯಾಣ 14.ವರ್ಧಂತಿ 16.ಭವ 17.ದಾಹ

## ಸುಡೊಕು 6764

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 3 | 9 | | 2 | | 5 | | 6 | |
| | | | 4 | 3 | | 8 | | 5 |
| | 4 | 5 | | | 9 | | 3 | |
| 4 | 6 | | 9 | | 7 | | | |
| | | | | 4 | | 1 | | 6 |
| 8 | | 7 | 5 | | 6 | | 4 | 9 |
| | | 4 | | | 2 | | | 7 |
| 7 | | | | | | 6 | | 3 |
| | 8 | 1 | 7 | | | 2 | | |

### 6763 ಸುಡೊಕು

| | | | | | | | | |
|---|---|---|---|---|---|---|---|---|
| 6 | 7 | 9 | 3 | 5 | 4 | 2 | 1 | 8 |
| 5 | 2 | 4 | 1 | 6 | 8 | 9 | 3 | 7 |
| 1 | 8 | 3 | 2 | 7 | 9 | 6 | 5 | 4 |
| 8 | 6 | 7 | 9 | 3 | 5 | 1 | 4 | 2 |
| 2 | 4 | 5 | 6 | 1 | 7 | 3 | 8 | 9 |
| 9 | 3 | 1 | 4 | 8 | 2 | 5 | 7 | 6 |
| 4 | 1 | 8 | 5 | 9 | 6 | 7 | 2 | 3 |
| 3 | 9 | 2 | 7 | 4 | 1 | 8 | 6 | 5 |
| 7 | 5 | 6 | 8 | 2 | 3 | 4 | 9 | 1 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ವೈಶಾಖ ಶುಕ್ಲ ಷಷ್ಠಿ ಗಂ. 22-50 ನಕ್ಷತ್ರ: ಆರ್ದ್ರ 22-13 ಯೋಗ: ಅತಿಗಂಡ ಗಂ. 09-08 ಕರಣ: ಕೌಲವ ಗಂ. 12-02 ಮೇಷ ಮಾಸದ 09 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-17 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 3 ಜುಲ್ಕಾದಾ ದಿನ ವಿಶೇಷ : ಶ್ರೀ ರಾಮಾನುಜಾಚಾರ್ಯ ಜಯಂತಿ ಅದೃಷ್ಟ ಸಂಖ್ಯೆ : 7, 11

**ಮೇಷ:** ಹೆಂಡತಿಯ ಆರೋಗ್ಯದ ವಿಚಾರವಾಗಿ ವೈದ್ಯರಲ್ಲಿ ಸಮಾಲೋಚನೆ ನಡೆಸಬೇಕಾಗಬಹುದು. ಸಂಜೆಯ ವೇಳೆ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರುವುದು.

**ವೃಷಭ:** ಕಾಗದದ ವ್ಯಾಪಾರದಲ್ಲಿ ಮಂದಗತಿಯ ನಡೆಯಿಂದ ಅಭಿವೃದ್ಧಿ ಖಚಿತವಾಗಿರುತ್ತದೆ. ವಾತಾವರಣ ಸಂತಸದಾಯಕವಾಗಿರುತ್ತದೆ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚುವುದು. ಕೃಷಿಕರಿಗೆ ಸಂಪಾದನೆ ಹೆಚ್ಚಲಿದೆ.

**ಮಿಥುನ:** ಅಪರಿಚಿತರಿಂದ ಮೋಸ ಆಗಬಹುದು, ಆದ್ದರಿಂದ ಅಂಥವರ ಜತೆ ವ್ಯಾಪಾರ ನಡೆಸುವುದು ಸರಿಯಲ್ಲ. ನಡವಳಿಕೆಯನ್ನು ಕೊಂಚ ಹಿಡಿತದಲ್ಲಿ ಇಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು.

**ಕರ್ಕಾಟಕ:** ಅರೆ ಸರ್ಕಾರಿ ಇಲಾಖೆಯಲ್ಲಿ ವೃತ್ತಿಯಲ್ಲಿರುವವರಿಗೆ ಹೆಚ್ಚಿನ ಅನುಕೂಲಗಳಾಗುವ ಸಾಧ್ಯತೆ ಇದೆ. ಎಲ್ಲವನ್ನೂ ಎದುರಿಸಬಲ್ಲೆನೆಂಬ ಮಾನಸಿಕ ಧೈರ್ಯ ಇರಲಿ. ನ್ಯಾಯಾಂಗ ಇಲಾಖೆಯವರಿಗೆ ವಿಚಿತ್ರ ಅನುಭವವಾಗುವುದು.

**ಸಿಂಹ:** ಏಕಾಂಗಿಯಾಗಿ ಮತ್ತು ಹೆಚ್ಚು ಸ್ವತಂತ್ರವಾಗಿರಲು ಇಚ್ಛಿಸಿದಲ್ಲಿ ಉತ್ತಮ ಅವಕಾಶಗಳು ಎದುರಾಗಲಿವೆ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ತೆಗೆದುಕೊಳ್ಳಬಹುದು. ಪಾಲುದಾರಿಕೆಯಲ್ಲಿ ನಿರ್ಲಿಪ್ತತೆಯಿಂದ ಇರುವುದು ಉತ್ತಮ.

**ಕನ್ಯಾ:** ಸ್ವ ಉದ್ಯೋಗಿಗಳು ಕೈತಪ್ಪಿ ಹೋಗಿದ್ದ ಕೆಲಸಗಳನ್ನು ಮರಳಿ ಪಡೆದುಕೊಳ್ಳುವಿರಿ. ಕೆಲಸಗಾರರಲ್ಲಿ ಸಮಾಧಾನ ಚಿತ್ತದಿಂದಿರಿ, ಇಲ್ಲವಾದರೆ ಮಾನಹಾನಿಯಾಗಬಹುದು. ಅರಣ್ಯ ಪಾಲಕರಿಗೆ ಬಡ್ತಿ ಸಂಭವವಿದೆ.

**ತುಲಾ:** ಜೀವನದ ಯಾವುದೇ ರಂಗದಲ್ಲಾದರೂ ನಿಮ್ಮ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮ್ಮಲ್ಲಿರುವುದು ಮತ್ತು ಈ ದಿನ ಮಾರ್ಗ ಗೋಚರವಾಗುವುದು. ನಾಯಕತ್ವದ ಸ್ಥಾನಕ್ಕೆ ಆಯ್ಕೆಯಾಗುವ ಲಕ್ಷಣಗಳಿವೆ.

**ವೃಶ್ಚಿಕ:** ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಪರದಾಟವಿಲ್ಲದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ನಿಮಗಿರುವ ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ. ಪರೀಕ್ಷೆಗಳಲ್ಲಿ ಜಯ ಗಳಿಸುವಿರಿ.


**ಧನು:** ಪರೋಪಕಾರ ಕಷ್ಟವೆನಿಸಿದರೆ ಸುಮ್ಮನಿರಿ, ಉಪದ್ರವ ಮಾಡಬೇಡಿ. ಔಷಧಿಗಳ ಬಳಕೆಯಲ್ಲಿ ಜ್ಞಾನವಿರಲಿ ಮತ್ತು ನಿಮ್ಮ ಸ್ವ ಇಚ್ಛೆಯಂತೆ ಸೇವಿಸಬೇಡಿ. ಅಸಾಧ್ಯ ಕಾರ್ಯಗಳನ್ನೂ ಸಾಧಿಸುವ ಮನೋಬಲ ನಿಮ್ಮಲ್ಲಿದೆ.

**ಮಕರ:** ಸಂಬಂಧಿಗಳ ಅಪಹಾಸ್ಯದ ಮಾತುಗಳಿಂದ ನಿಮ್ಮಲ್ಲಿನ ಆತ್ಮವಿಶ್ವಾಸ ಇಮ್ಮಡಿಗೊಂಡು ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು.

**ಕುಂಭ:** ಭಾಷಣ, ಚಿತ್ರಕಲೆಯಲ್ಲಿನ ನಿಮ್ಮ ಆಸಕ್ತಿಯಿಂದಾಗಿ, ಹೆಚ್ಚಿನ ಕಲಿಕೆಗಾಗಿ ಸಮಯವನ್ನು ಮೀಸಲಿಡುವ ತೀರ್ಮಾನ ಮಾಡಿ. ದಾಯಾದಿ ವರ್ಗದವರಿಂದ ನಿಮ್ಮ ಕೆಲಸಕ್ಕೆ ಅಪರೂಪಕ್ಕೆ ಅನುಕೂಲ ಉಂಟಾಗಲಿದೆ.

**ಮೀನ:** ನಿರ್ಧಾರಗಳನ್ನು ಮೇಲಧಿಕಾರಿಗಳಿಗೆ ಅರ್ಥವಾಗುವ ರೀತಿಯಲ್ಲಿ ಸರಿಯಾಗಿ ಸ್ಪಷ್ಟಪಡಿಸುವುದು ಒಳ್ಳೆಯದು. ಜೀವನ ಶೈಲಿಯನ್ನು ಇನ್ನೊಬ್ಬರ ಬಲವಂತದ ಮೇಲೆ ಬದಲಾಯಿಸಿಕೊಳ್ಳಬೇಕಾಗುತ್ತದೆ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**
ಹಿಂದಿನ ಅಂತ್ಯ: 24,364
ಇಂದಿನ ಅಂತ್ಯ: 24,576
ದಿನದ ಕನಿಷ್ಠ: 24,354
211

**ಮೊಟ್ಟೆ ಧಾರಣೆ** (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹570
12 ಕ್ಕೆ ₹78
ಮೈಸೂರು: 100 ಕ್ಕೆ ₹580

**ರಾಮನಗರ ರೇಷ್ಮೆಗೂಡು**
ಮಿಶ್ರತಳಿ(ಸಿ.ಬಿ) ₹333-695
ದ್ವಿತಳಿ (ಬಿ.ವಿ) ₹280-770

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹229
ಆರ್‌ಎಸ್‌ಎಸ್-5 ₹223.50
ಗುಡ್ ಲಾಟ್ ₹201

**ಮುದ್ರೆ-ಮನೆ ಕಾಫಿ** (50 ಕೆಜಿಗೆ)
ಎಪಿ ₹23100
ಪಿಸಿ ₹13850
ಆರ್‌ಪಿ ₹18100
ಆರ್‌ಸಿ ₹9725

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)
ಅರಸೀಕೆರೆ ₹35000-35000
ದಾವಣಗೆರೆ ₹13000-13000

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1660 (1670)
ಸೋಯಾ (ರಿಫೈನ್ಡ್) ₹1520(1500)
ಸೂರ್ಯಕಾಂತಿ (ರಿಫೈನ್ಡ್) ₹1670(1665)
ಪಾಮೋಲಿನ್ ₹1420 (1425)

**ಈರುಳ್ಳಿ ಧಾರಣೆ** (ಪ್ರತಿ ಕ್ವಿಂಟಾಲ್) ಬೆಂಗಳೂರು
ದೊಡ್ಡ ₹1000-1300
ಮಧ್ಯಮ ₹600-1000
ಸಣ್ಣ ₹300-600

## ಆ್ಯಪಲ್ ಕಂಪನಿಗೆ ಜಾನ್ ಟರ್ನಸ್ ಹೊಸ ಸಿಇಒ

ನವದೆಹಲಿ (ಪಿಟಿಐ): ಐಫೋನ್ ತಯಾರಿಕಾ ಕಂಪನಿ ಆ್ಯಪಲ್‌ನ ಸಿಇಒ ಟಿಮ್ ಕುಕ್ ಅವರು ತಮ್ಮ ಸ್ಥಾನದಿಂದ ಕೆಳಗಿಳಿಯಲಿದ್ದಾರೆ. ಸಿಇಒ ಹುದ್ದೆಗೆ ಅದೇ ಕಂಪನಿಯಲ್ಲಿ ಬಹುಕಾಲದಿಂದ ಕೆಲಸ ಮಾಡುತ್ತಿರುವ ಜಾನ್ ಟರ್ನಸ್ ಅವರು ಬರಲಿದ್ದಾರೆ.


ಜಾನ್ ಟರ್ನಸ್

ಟಿಮ್ ಕುಕ್ ಅವರು ಸಿಇಒ ಹುದ್ದೆಯಲ್ಲಿ ಒಂದೂವರೆ ದಶಕ ಇದ್ದರು. ಈ ಅವಧಿಯಲ್ಲಿ ಕಂಪನಿಯು ಸ್ಥಿರವಾದ ಬೆಳವಣಿಗೆ ದಾಖಲಿಸಿದೆ.

ಕಂಪನಿಯು ಮಾರುಕಟ್ಟೆಯಲ್ಲಿ ಹೊಂದಿರುವ ಪಾಲನ್ನು ಉಳಿಸಿಕೊಳ್ಳುವ, ಎ.ಐ. ಆಧಾರಿತ ವ್ಯವಸ್ಥೆಗಳಲ್ಲಿ ಕಂಪನಿಯ ಮುಂದಿನ ಹಂತದ ಬೆಳವಣಿಗೆಯನ್ನು ಸಾಧ್ಯವಾಗಿಸುವ ಹೊಣೆಯು ಹೊಸ ಸಿಇಒ ಟರ್ನಸ್ ಅವರ ಮೇಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಟಿಮ್ ಕುಕ್ ಅವರು ಕಂಪನಿಯ ಸೇವಾ ಜಾಲವನ್ನು ವಿಸ್ತರಿಸಿದ್ದರು. ಟರ್ನಸ್ ಅವರಿಗೆ ಹಿಂದೆಂದೂ ಕಾಣದಂತಹ ಅವಕಾಶಗಳು ಲಭ್ಯ ಆಗಬಹುದಾದರೂ, ಕಂಪನಿಯ ಎ.ಐ ಕಾರ್ಯತಂತ್ರಕ್ಕೆ ವೇಗ ನೀಡುವ ವಿಚಾರದಲ್ಲಿ, ಕಂಪನಿಯ ಮುಂದಿನ ಹಂತದ ಬೆಳವಣಿಗೆ ಸಾಧ್ಯವಾಗಿಸುವಲ್ಲಿ ಅವರ ಮುಂದೆ ಬಹಳ ನಿರೀಕ್ಷೆಗಳಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

# ದರ ಕುಸಿತ: ರೈತರ ಕಣ್ಣೀರು

### ಈರುಳ್ಳಿಗೆ ತಗ್ಗಿದ ಬೇಡಿಕೆ, ಯಥೇಚ್ಛವಾಗಿ ಬೆಳೆದಿದ್ದವರಿಗೆ ತಲೆನೋವು

• ಚಂದ್ರಶೇಖರ ಕೋಳೇಕರ

ಆಲಮಟ್ಟಿ (ವಿಜಯಪುರ ಜಿಲ್ಲೆ): ವಿಜಯಪುರ ಜಿಲ್ಲೆಯ ನಿಡಗುಂದಿ, ಕೊಲ್ಹಾರ ಮತ್ತು ಬಸವನ ಬಾಗೇವಾಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬೇಸಿಗೆಯಲ್ಲಿ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವ 'ತೆಲಗಿ' ತಳಿಯ ಈರುಳ್ಳಿ ಬೆಲೆ ಕ್ವಿಂಟಲ್‌ಗೆ ₹700ಕ್ಕೆ ಕುಸಿದಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಏಪ್ರಿಲ್ ಮೊದಲ ವಾರದಲ್ಲಿ ಈರುಳ್ಳಿ ಬೆಲೆ ಕ್ವಿಂಟಲ್‌ಗೆ ₹1 ಸಾವಿರದಿಂದ ₹1,500 ಇತ್ತು. ವಾರದ ಈಚೆಗೆ ಏಕಾಏಕಿ ದರ ಕುಸಿದಿದೆ. ಕಳೆದ ಮುಂಗಾರಿನಲ್ಲಿ ಸ್ಥಳೀಯವಾಗಿ ಕ್ವಿಂಟಲ್‌ಗೆ ₹1,500 ದರ ಸಿಕ್ಕಿತ್ತು. ಇದರಿಂದ ಉತ್ತೇಜಿತರಾಗಿದ್ದ ಈ ಭಾಗದ ರೈತರು ಯಥೇಚ್ಛವಾಗಿ ಈರುಳ್ಳಿ ಬಿತ್ತನೆ ಮಾಡಿದ್ದರು. ಆದರೆ, ಇದೀಗ ದರ ಕುಸಿತ ರೈತರಿಗೆ ಏಟು ನೀಡಿದೆ.

> ಅಡುಗೆ ಅನಿಲ ಸಿಲಿಂಡರ್ ಕೊರತೆಯಿಂದ ಬಹುತೇಕ ಹೋಟೆಲ್, ಡಾಬಾಗಳು ಮುಚ್ಚಿವೆ. ಕೆಲವು ಹೋಟೆಲ್‌ನವರು ಕೆಲವು ಆಹಾರ ಪದಾರ್ಥಗಳ ತಯಾರಿಕೆ ನಿಲ್ಲಿಸಿದ್ದಾರೆ. ಇದರಿಂದ ಈರುಳ್ಳಿ ದರ ಕುಸಿದಿದೆ
> **ಅಲ್ಲಾಬಕ್ಷ ಬಿಜಾಪುರ,** ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ

'ಸ್ಥಳೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಕ್ವಿಂಟಲ್‌ಗೆ ₹600 ರಿಂದ ₹700ರ ದರದಲ್ಲಿ ಮಾರಾಟವಾಗುತ್ತಿದೆ. ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬೈ ಸೇರಿ ಇತರೆ ಮಹಾನಗರಗಳಿಗೆ ಈರುಳ್ಳಿ ಮೂಟೆಗಳನ್ನು ಕಳುಹಿಸಬಹುದು. ಆದರೆ, ವಾಹನ ಬಾಡಿಗೆ ಸೇರಿ ಹೆಚ್ಚಿನ ಖರ್ಚು ಬರುತ್ತದೆ. ಅಲ್ಲಿ ಕ್ವಿಂಟಲ್‌ಗೆ ₹1,000 ಸಿಕ್ಕರೂ ನಮಗೆ ನಷ್ಟವೇ ಆಗುತ್ತದೆ. ಲಾಭ ಆಗುವುದಿಲ್ಲ' ಎಂದು ಮಸೂತಿ ಗ್ರಾಮದ ಈರುಳ್ಳಿ ಬೆಳೆಗಾರ ಆನಂದ ಬಿಷ್ಟಗೊಂಡ ಹೇಳಿದರು.


ವಿಜಯಪುರ ಜಿಲ್ಲೆಯ ಗೊಳಸಂಗಿ ಗ್ರಾಮದಲ್ಲಿ ಬೆಳೆದಿರುವ ಈರುಳ್ಳಿಯನ್ನು ರೈತರು ರಾಶಿ ಮಾಡಿದರು

'ಕಡಿಮೆ ಗುಣಮಟ್ಟ ಹೊಂದಿರುವ ಈರುಳ್ಳಿ ಕೇಳುವವರೇ ಇಲ್ಲ, ಹೀಗಾಗಿ ಹೊಲದಲ್ಲಿಯೇ ಬಿಡಬೇಕಾದ ಪರಿಸ್ಥಿತಿ ಬಂದೊದಗಿದೆ' ಎಂದು ಮಸೂತಿ ಗ್ರಾಮದ ರೈತ ವೈ.ಕೆ. ಹೂಗಾರ ಅಳಲು ತೋಡಿಕೊಂಡರು.

'ಒಂದು ಎಕರೆಯಲ್ಲಿ ಈರುಳ್ಳಿ ಬೆಳೆಯಲು ಬೀಜ, ಸಸಿ ನಾಟಿ, ಗೊಬ್ಬರ, ಕೂಲಿ ಸೇರಿ ಕನಿಷ್ಠ ₹60 ಸಾವಿರದಿಂದ ₹70 ಸಾವಿರ ಖರ್ಚಾಗುತ್ತದೆ.ಇದೀಗ ಸಿಗುತ್ತಿರುವ ದರ ಮಾಡಿದ ಖರ್ಚಿಗೂ ಸಾಲುತ್ತಿಲ್ಲ' ಎಂದು ರೈತರು ಬೇಸರ ವ್ಯಕ್ತಪಡಿಸಿದರು.

'ಕಬ್ಬು ಬೆಳೆಯುವ ರೈತರ ನೆರವಿಗೆ ಕೇಂದ್ರ, ರಾಜ್ಯ ಸರ್ಕಾರಗಳು ಬರುತ್ತವೆ. ಆದರೆ, ಈರುಳ್ಳಿ ಬೆಳೆಗೆ ಬೆಲೆಯೂ ಇಲ್ಲ, ಧ್ವನಿಯೂ ಇಲ್ಲ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬೇಕು' ಎಂದು ಅವರು ಕೋರಿದರು.

### ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅಭಿಪ್ರಾಯ

# 'ಶೇ 100ರಷ್ಟು ಎಥೆನಾಲ್ ಬಳಕೆ ಗುರಿ ಬೇಕು'

ನವದೆಹಲಿ (ಪಿಟಿಐ): ವಾಹನಗಳಲ್ಲಿ ಶೀಘ್ರದಲ್ಲಿಯೇ ಶೇ 100ರಷ್ಟು ಎಥೆನಾಲ್ ಬಳಸುವ ಗುರಿಯನ್ನು ಭಾರತವು ಹೊಂದಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಂಗಳವಾರ ಹೇಳಿದರು.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಇಂಧನ ಪೂರೈಕೆ ವ್ಯವಸ್ಥೆಯಲ್ಲಿ ಕಂಡುಬಂದಿರುವ ಅಡಚಣೆಗಳು, ಇಂಧನ ವಲಯದಲ್ಲಿ ಭಾರತವು ಸ್ವಾವಲಂಬಿ ಆಗುವುದನ್ನು ಅನಿವಾರ್ಯವಾಗಿಸಿವೆ ಎಂದು ಅವರು ಪ್ರತಿಪಾದಿಸಿದರು.


ನಿತಿನ್ ಗಡ್ಕರಿ

'ಇಂದು ನಾವು ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಇಂಧನ ಬಿಕ್ಕಟ್ಟು ಎದುರಿಸುತ್ತಿದ್ದೇವೆ. ಹೀಗಾಗಿ ಇಂಧನ ವಲಯದಲ್ಲಿ ಸ್ವಾವಲಂಬಿ ಆಗುವುದು ನಮಗೆ ಅಗತ್ಯವಾಗಿದೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದರು.

ಶೇ 20ರಷ್ಟು ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ ಬಳಕೆಗೆ ಪ್ರಧಾನಿ ನರೇಂದ್ರ ಮೋದಿ ಅವರು 2023ರ ಏಪ್ರಿಲ್‌ನಲ್ಲಿ ಚಾಲನೆ ನೀಡಿದ್ದಾರೆ. ಬ್ರೆಜಿಲ್‌ನಲ್ಲಿ ಕೆಲವು ವಾಹನಗಳಲ್ಲಿ ಪೂರ್ತಿಯಾಗಿ ಎಥೆನಾಲ್ ಇಂಧನ ಬಳಸಲಾಗುತ್ತಿದೆ.

ಪರಿಸರಪೂರಕ ಜಲಜನಕ ಭವಿಷ್ಯದ ಇಂಧನವಾಗಿದೆ. ಈ ಇಂಧನವು ಹಣಕಾಸಿನ ದೃಷ್ಟಿಯಿಂದ ಅನುಕೂಲಕರ ಆಗಬೇಕು ಎಂದಾದರೆ ಹೈಡ್ರೋಜನ್ ಇಂಧನ ಕೇಂದ್ರಗಳನ್ನು ನಡೆಸುವ ವೆಚ್ಚ ತಗ್ಗಿಸಬೇಕು ಎಂದು ಗಡ್ಕರಿ ಅವರು ಹೇಳಿದರು.

## ಅಡಿಕೆ ಧಾರಣೆ

| | | | | | |
|---|---|---|---|---|---|
| **ಸಾಗರ** | | ಚಾಲಿ | 44150-48699 | ರಾಶಿ | 49700-58000 |
| ಬಿಳಿಗೋಟು | 26269-33299 | ಕೆಂಪುಗೋಟು | 31099-37300 | ತಟ್ಟಿಬೆಟ್ಟೆ | 37419-52119 |
| ಚಾಲಿ | 40269-42899 | ರಾಶಿ | 50569-54099 | **ತೀರ್ಥಹಳ್ಳಿ** | |
| ಕೋಕ | 26299-33699 | **ಚಿತ್ರದುರ್ಗ** | | ಗೊರಬಲು | 41500-41500 |
| ಕೆಂಪುಗೋಟು | 35170-36199 | ಆಪಿ | 54419-54829 | ರಾಶಿ | 49367-51615 |
| ರಾಶಿ | 50609-54829 | ಬೆಟ್ಟೆ | 37449-37889 | ಸಿಪ್ಪೆಗೋಟು | 13000-14000 |
| ಸಿಪ್ಪೆಬೆಟ್ಟೆ | 15699-23589 | ಕೆಂಪುಗೋಟು | 31400-31800 | **ತರೀಕೆರೆ** | |
| **ಕುಂದಾಪುರ** | | ರಾಶಿ | 53939-54369 | ಬೆಟ್ಟೆ | 22000-22000 |
| ಹಳೆ ಚಾಲಿ | 40000-55000 | **ಹೊನ್ನಾಳಿ** | | ರಾಶಿ | 28000-28000 |
| ಹೊಸ ಚಾಲಿ | 40000-47500 | ರಾಶಿ | 25200-27000 | ಸಿಪ್ಪೆಗೋಟು | 12000-14000 |
| **ಸಿದ್ದಾಪುರ** | | ಸಿಪ್ಪೆಗೋಟು | 10000-10000 | ಇತರೆ | 25200-28000 |
| ಬಿಳಿಗೋಟು | 26689-38482 | **ಹೊನ್ನಾವರ** | | **ಪುತ್ತೂರು** | |
| ಚಾಲಿ | 40139-49039 | ಹಳೆ ಚಾಲಿ | 42000-44000 | ಕೋಕ | 20000-34500 |
| ಕೋಕ | 25689-34399 | ಹೊಸ ಚಾಲಿ | 37000-39000 | ಹೊಸತು | 30000-48500 |
| ಕೆಂಪುಗೋಟು | 27069-39089 | **ಯಲ್ಲಾಪುರ** | | **ಶಿವಮೊಗ್ಗ** | |
| ರಾಶಿ | 48599-53599 | ಆಪಿ | 58096-65299 | ಬೆಟ್ಟೆ | 52119-64589 |
| ತಟ್ಟಿಬೆಟ್ಟೆ | 37289-42000 | ಬಿಳಿಗೋಟು | 16109-42461 | ಗೊರಬಲು | 19010-42799 |
| **ಶಿರಸಿ** | | ಚಾಲಿ | 38299-49100 | ರಾಶಿಇಡಿ | 45899-57506 |
| ಬೆಟ್ಟೆ | 42501-51819 | ಕೋಕ | 15601-35412 | ಸರಕು | 56859-95896 |
| ಬಿಳಿಗೋಟು | 26599-38600 | ಕೆಂಪುಗೋಟು | 22009-39899 | | |

# ಪಿಎನ್‌ಜಿ ಸಂಪರ್ಕಕ್ಕೆ ವೇಗ

ನವದೆಹಲಿ (ಪಿಟಿಐ): ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಕೆಗೆ ಇನ್ನಷ್ಟು ಒತ್ತು ನೀಡಲು ಕೇಂದ್ರ ಸರ್ಕಾರ ಆರಂಭಿಸಿದ್ದು, ಮಾರ್ಚ್‌ನಿಂದ ಇದುವರೆಗೆ 5.01 ಲಕ್ಷಕ್ಕಿಂತ ಹೆಚ್ಚಿನ ಸಂಪರ್ಕಗಳಿಗೆ ಅನಿಲ ಪೂರೈಕೆ ಆರಂಭಿಸಲಾಗಿದೆ. ಹೊಸ ಸಂಪರ್ಕ ಕೋರಿ 5.68 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಎಲ್‌ಪಿಜಿ ಪೂರೈಕೆಗೆ ಅಡ್ಡಿ ಉಂಟುಮಾಡಿದೆ. ಹೀಗಾಗಿ ಮನೆಗಳಲ್ಲಿ ಅಡುಗೆ ಮಾಡುವುದಕ್ಕೆ ಹಾಗೂ ಕೈಗಾರಿಕಾ ಉದ್ದೇಶಗಳಿಗೆ ಪಿಎನ್‌ಜಿ ಬಳಕೆ ಹೆಚ್ಚಬೇಕು ಎಂದು ಕೇಂದ್ರ ಸರ್ಕಾರ ಬಯಸುತ್ತಿದೆ.

**ಮುಖ್ಯಾಂಶಗಳು**
- ಹೊಸ ಸಂಪರ್ಕ ಕೋರಿ 5.68 ಲಕ್ಷಕ್ಕಿಂತ ಹೆಚ್ಚು ಅರ್ಜಿ
- ಹೊಸದಾಗಿ 5.01 ಲಕ್ಷ ಸಂಪರ್ಕಗಳಿಗೆ ಪಿಎನ್‌ಜಿ ಪೂರೈಕೆ ಆರಂಭ

'ಈ ವರ್ಷದ ಮಾರ್ಚ್ ನಂತರದಲ್ಲಿ ಹೊಸದಾಗಿ 5.01 ಲಕ್ಷ ಸಂಪರ್ಕಗಳಿಗೆ ಪಿಎನ್‌ಜಿ ಪೂರೈಕೆ ಆರಂಭಿಸಲಾಗಿದೆ' ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಯುದ್ಧ ಆರಂಭಕ್ಕೂ ಮೊದಲೇ ನೀಡಿದ್ದ ಸಂಪರ್ಕಗಳು, ಯುದ್ಧ ಆರಂಭವಾದ ನಂತರ ಕೊಡಲಾದ ಸಂಪರ್ಕಗಳು ಇವುಗಳಲ್ಲಿ ಸೇರಿವೆ.

ಏಪ್ರಿಲ್ 19ರವರೆಗೆ 39,400 ಮಂದಿ ಪಿಎನ್‌ಜಿ ಗ್ರಾಹಕರು ತಮ್ಮ ಎಲ್‌ಪಿಜಿ ಸಂಪರ್ಕ ವಾಪಸ್ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮನೆಬಳಕೆ ಎಲ್‌ಪಿಜಿ ಪೂರೈಕೆಯು ಸ್ಥಿರವಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

## ಪ್ರಶ್ನೋತ್ತರ


**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಅನಿಲ್ ಕುಮಾರ್,** ಧಾರವಾಡ

- **ಪ್ರಶ್ನೆ: ನಾನು ಸರ್ಕಾರಿ ಸಾಲಪತ್ರ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಆಸಕ್ತನಿದ್ದೇನೆ. ಇದನ್ನು ಯಾವ ರೀತಿ ಖರೀದಿ ಮತ್ತು ಮಾರಾಟ ಮಾಡಬಹುದು? ಇವನ್ನು ನಮ್ಮ ಟ್ರೇಡಿಂಗ್ ಖಾತೆಯ ಮೂಲಕ ವ್ಯವಹರಿಸಬಹುದೇ? ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಕೋರಿಕೆ.**

**ಉತ್ತರ:** ನೀವು ಯಾವುದೇ ಆರ್ಥಿಕ ಅಪಾಯ ಇರದ ಮತ್ತು ನಿರಂತರವಾಗಿ ನಿಶ್ಚಿತ ಬಡ್ಡಿ ಆದಾಯ ಪಡೆಯುವ ಉದ್ದೇಶದಿಂದ ಹೂಡಿಕೆ ಮಾಡುವುದಿದ್ದರೆ ಸರ್ಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸೂಕ್ತ. ಇದು ನಿಮ್ಮ ಬಂಡವಾಳಕ್ಕೆ ಭದ್ರತೆ ಹಾಗೂ ಹಾಗೂ ಸ್ಥಿರ ಆದಾಯ ನೀಡುತ್ತದೆ. ಈ ಸಾಲಪತ್ರಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ಆಗಾಗ ಬಿಡುಗಡೆ ಮಾಡುತ್ತಿರುತ್ತವೆ.

ಭಾರತದಲ್ಲಿ ಸರ್ಕಾರಿ ಬಾಂಡ್‌ಗಳನ್ನು ಪ್ರಾಥಮಿಕ ಮಾರುಕಟ್ಟೆ ಮತ್ತು ದ್ವಿತೀಯ ಮಾರುಕಟ್ಟೆ ಮೂಲಕ ಖರೀದಿ ಹಾಗೂ ಮಾರಾಟ ಮಾಡಲು ಸಾಧ್ಯ. ಪ್ರಾಥಮಿಕ ಮಾರುಕಟ್ಟೆಯಲ್ಲಿ ಸರ್ಕಾರ ಹೊಸ ಬಾಂಡ್‌ಗಳನ್ನು ಹರಾಜು ಮೂಲಕ ಬಿಡುಗಡೆ ಮಾಡುತ್ತದೆ. ಅದಾಗಲೇ ಹೊರಬಂದ ಬಾಂಡ್‌ಗಳನ್ನು ದ್ವಿತೀಯ ಮಾರುಕಟ್ಟೆಯಲ್ಲಿ ಇತರ ಹೂಡಿಕೆದಾರರಿಂದ ಖರೀದಿಸಬಹುದು.

ಪ್ರಾಥಮಿಕ ಮಾರುಕಟ್ಟೆಯಲ್ಲಿ ನೀವು ಆರ್‌ಬಿಐ ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ ನೇರವಾಗಿ ಸರ್ಕಾರದಿಂದ ಸಾಲಪತ್ರ ಖರೀದಿಸಬಹುದು. ಈ ಪೋರ್ಟಲ್‌ನಲ್ಲಿ ಖಾತೆ ತೆರೆಯುವುದರಿಂದ, ಟ್ರೆಜರಿ ಬಿಲ್‌ಗಳು (ಟಿ-ಬಿಲ್), ಸರ್ಕಾರಿ ಬಾಂಡ್‌ಗಳಲ್ಲಿ (ಜಿ-ಸೆಕ್ಯುರಿಟೀಸ್) ಹೂಡಿಕೆ ಮಾಡಲು ಆಗುತ್ತದೆ. ಇದು ಮಧ್ಯವರ್ತಿಗಳ ಅಗತ್ಯವಿಲ್ಲದ ಸರಳ ಹಾಗೂ ಪಾರದರ್ಶಕ ವಿಧಾನ.

ದ್ವಿತೀಯ ಮಾರುಕಟ್ಟೆಯಲ್ಲಿ ಸರ್ಕಾರಿ ಬಾಂಡ್‌ಗಳನ್ನು ಎನ್‌ಎಸ್‌ಇ ಮತ್ತು ಬಿಎಸ್‌ಸಿ ಮುಖಾಂತರ ಖರೀದಿ ಮತ್ತು ಮಾರಾಟ ಮಾಡಬಹುದು. ನೀವು ಈಗಾಗಲೇ ಟ್ರೇಡಿಂಗ್ ಮತ್ತು ಡಿಮ್ಯಾಟ್ ಖಾತೆ ಹೊಂದಿದ್ದರೆ, ಅದೇ ಖಾತೆಯ ಮೂಲಕ ದ್ವಿತೀಯ ಮಾರುಕಟ್ಟೆಯಲ್ಲಿ ಮೇಲೆ ಹೇಳಿರುವ ಹೂಡಿಕೆಗಳನ್ನು ಮಾಡಬಹುದು. ಆದರೆ ಇಲ್ಲಿ ಕೆಲವೊಮ್ಮೆ ದ್ರವ್ಯತೆ ಕಡಿಮೆ ಇರುವ ಸಾಧ್ಯತೆ ಇದೆ. ಈ ವಿಧಾನದಲ್ಲಿ ಬಾಂಡ್ ಮೇಲೆ ಸಿಗುವ ಬಡ್ಡಿಯ ಉತ್ಪಾದಕತೆ ದರದಲ್ಲಿ ವ್ಯತ್ಯಾಸವಿರುತ್ತದೆ. ಬಾಂಡ್ ಮಾರುಕಟ್ಟೆ ಮೌಲ್ಯ ಮುಖಬೆಲೆಗಿಂತ ಕಡಿಮೆ ಇದ್ದಾಗ ಅಥವಾ ಕುಸಿದಾಗ, ಬಡ್ಡಿಯ ಉತ್ಪಾದಕತೆ ದರ ಅಧಿಕವಾಗುತ್ತದೆ ಮತ್ತು ಇದರ ತದ್ವಿರುದ್ಧ ಸನ್ನಿವೇಶದಲ್ಲಿ ಬಡ್ಡಿಯ ಉತ್ಪಾದಕತೆ ದರ ಕಡಿಮೆಯಾಗುತ್ತದೆ.

ಬಾಂಡ್‌ಗಳಲ್ಲಿ ಲಾಭವು ಸಾಮಾನ್ಯವಾಗಿ ನಿಶ್ಚಿತ ಬಡ್ಡಿ ರೂಪದಲ್ಲಿ ಬರುತ್ತದೆ. ಆರ್‌ಬಿಐ ನಿಗದಿಪಡಿಸುವ ಬಡ್ಡಿದರ ಬದಲಾವಣೆಗಳಿಗೆ ಅನುಗುಣವಾಗಿ ಬಾಂಡ್ ಮಾರುಕಟ್ಟೆ ಬೆಲೆಯಲ್ಲಿ ಏರಿಳಿತ ಕಂಡುಬರುತ್ತದೆ. ಜನರ ಒಲವು ಅಧಿಕ ಉತ್ಪಾದಕತೆ ದರ ಇರುವ ಬಾಂಡ್‌ಗಳತ್ತ ಹೋದಂತೆಲ್ಲ ಮಾರುಕಟ್ಟೆ ಮೌಲ್ಯದಲ್ಲೂ ಕುಸಿತ ಕಾಣಸಿಗುತ್ತದೆ. ನೀವು ಹೆಚ್ಚಾಗಿ ಟ್ರೇಡಿಂಗ್ ಉದ್ದೇಶದಿಂದ ವ್ಯವಹರಿಸುವುದಾದರೆ, ನಿಮ್ಮ ಡಿಮ್ಯಾಟ್ ಖಾತೆಯ ಮೂಲಕವೂ ಸರ್ಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಆದರೆ ದೀರ್ಘಾವಧಿ, ಸುರಕ್ಷಿತ ಹೂಡಿಕೆಗಾಗಿ ಆರ್‌ಬಿಐ ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ ವ್ಯವಹರಿಸುವುದು ಅನುಕೂಲಕರ. ನಿಮ್ಮ ಹೂಡಿಕೆಯ ಗುರಿ ಮತ್ತು ಅವಧಿಯನ್ನು ಪರಿಗಣಿಸಿ, ಸರಿಯಾದ ವಿಧಾನವನ್ನು ಆಯ್ಕೆ ಮಾಡಿ.

**ಕೃಷ್ಣಪ್ರಸಾದ್,** ರಾಜರಾಜೇಶ್ವರಿ ನಗರ, ಬೆಂಗಳೂರು

- **ಪ್ರಶ್ನೆ: ನಾನು ಖಾಸಗಿ ಕಂಪನಿಯ ಉದ್ಯೋಗಿ. ವಯಸ್ಸು 45 ವರ್ಷ. ನನ್ನ ಪತ್ನಿ ಗೃಹಿಣಿ ಹಾಗೂ ನನಗೆ ಇಬ್ಬರು ಮಕ್ಕಳು ಇದ್ದಾರೆ. ನನ್ನ ವಾರ್ಷಿಕ ವೇತನ ಸುಮಾರು ₹10 ಲಕ್ಷ. ಇತ್ತೀಚೆಗೆ ನಾನು ಹೊಸ ಆದಾಯ ತೆರಿಗೆ ಪದ್ಧತಿಯನ್ನು ಅನುಸರಿಸುತ್ತಿದ್ದೇನೆ. ಆದರೆ ಹಿಂದಿನ ಅವಧಿಯಲ್ಲಿ ತೆರಿಗೆ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ಕೆಲವು ನಿಗದಿತ ಉಳಿತಾಯ, ಹೂಡಿಕೆ ಮತ್ತು ವಿಮಾ ಕಂತುಗಳ ಪಾವತಿ ಮಾಡಿದ್ದೆ. ಅವುಗಳಲ್ಲಿ ಎಂಡೋಮೆಂಟ್ ಇನ್ಶೂರೆನ್ಸ್, ಇಎಲ್‌ಎಲ್‌ಎಸ್ ಮತ್ತು ನಿಶ್ಚಿತ ಠೇವಣಿಗಳೂ ಸೇರಿವೆ.**

**ಈ ಹಂತದ ನಂತರ ನಾನು ಹೆಚ್ಚುವರಿ ಉಳಿತಾಯ ಅಥವಾ ಹೂಡಿಕೆ ಮಾಡಲು ಮುಂದಾಗಿಲ್ಲ. ಈಗ ನನ್ನಲ್ಲಿ ಯಾವುದೇ ಮ್ಯೂಚುವಲ್ ಫಂಡ್ ಅಥವಾ ಮಾಸಿಕ ಉಳಿತಾಯ ಯೋಜನೆಗಳಿಲ್ಲ. ಆದ್ದರಿಂದ ಭವಿಷ್ಯಕ್ಕಾಗಿ ಹೇಗೆ ಉಳಿತಾಯ ಮಾಡಬಹುದು ಎಂಬ ಬಗ್ಗೆ ಮಾಹಿತಿ ಬೇಕಾಗಿದೆ. ನನಗೆ ಎಸ್‌ಐಪಿ ಮೂಲಕ ಹೂಡಿಕೆ ಮಾಡುವ ಆಸಕ್ತಿ ಇದೆ. ಆದರೆ ಯುದ್ಧದಿಂದಾಗಿ ಆರ್ಥಿಕ ಪರಿಸ್ಥಿತಿ ಸ್ವಲ್ಪ ಅಪಾಯಕರವಾಗಿರುವಂತೆ ಕಾಣುತ್ತಿದೆ. ಜೊತೆಗೆ, ನನಗೆ ಇನ್ನು 15 ವರ್ಷಗಳ ಸೇವಾ ಅವಧಿ ಮಾತ್ರ ಉಳಿದಿರುವುದರಿಂದ, ನಮ್ಮ ಭವಿಷ್ಯದ ಆರ್ಥಿಕ ಅಗತ್ಯಗಳನ್ನು ಪೂರೈಸಲು ಸಹಾಯಕವಾಗುವ ಸೂಕ್ತ ಹೂಡಿಕೆ ಯೋಜನೆ ಯಾವುದು ಎಂಬುದನ್ನು ತಿಳಿಸಿ.**

**ಉತ್ತರ:** ನೀವು ಈಗಿನಿಂದಲೇ ಕ್ರಮಬದ್ಧವಾಗಿ ಉಳಿತಾಯ ಮತ್ತು ಹೂಡಿಕೆ ಆರಂಭಿಸುವುದು ಸೂಕ್ತ. ದೀರ್ಘಾವಧಿ ಹೂಡಿಕೆಗೆ ಸರಿಯಾದ ಸಮಯ ಎಂಬುದು ಪ್ರಾಯೋಗಿಕವಾಗಿ ಇಲ್ಲ. ಪ್ರಾರಂಭಿಸುವುದು ತಡವಾದರೂ, 'ಈಗಿನ ಸಮಯವೇ ಉತ್ತಮ ಸಮಯ'. ನೀವು ಈವರೆಗೆ ಹೂಡಿಕೆಗಳಲ್ಲಿ ಹೆಚ್ಚಿನ ಗಮನ ನೀಡಿರದಿದ್ದರೂ, ಮುಂದಿನ 15 ವರ್ಷಗಳನ್ನು ಯೋಜಿತವಾಗಿ ಬಳಸಿಕೊಳ್ಳುವ ಅವಕಾಶವಾಗಿ ಪರಿಗಣಿಸುವುದು ಸೂಕ್ತ. ಷೇರು, ಮ್ಯೂಚುವಲ್ ಫಂಡ್, ಚಿನ್ನ-ಬೆಳ್ಳಿ ಇತ್ಯಾದಿ ಹೂಡಿಕೆಗಳು ಹಣದುಬ್ಬರವನ್ನು ಹಿಂದಿಕ್ಕಿ ಸಾಮಾನ್ಯ ಠೇವಣಿಗಳಿಗಿಂತ ಹೆಚ್ಚಿನ ಲಾಭ ನೀಡಬಲ್ಲ ಕ್ಷಮತೆ ಹೊಂದಿವೆ.

ಭಾರತದ ಆರ್ಥಿಕತೆ ಇತರ ದೇಶಗಳಿಗಿಂತ ಉತ್ತಮ ಬೆಳವಣಿಗೆ ಕಾಣುತ್ತಿದೆ. ನಮ್ಮ ದೇಶದ ಜನಸಂಖ್ಯೆ, ಬಳಕೆದಾರರ ಬೇಡಿಕೆ ಮತ್ತು ಮಧ್ಯಮ ವರ್ಗದ ಆರ್ಥಿಕ ಅಭಿವೃದ್ಧಿ ದೀರ್ಘಾವಧಿ ಹೂಡಿಕೆಗಳಿಗೆ ನಮ್ಮಲ್ಲಿ ಉತ್ತಮ ಅವಕಾಶ ಕಲ್ಪಿಸುತ್ತಿವೆ. ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್ ಹೂಡಿಕೆ ಪ್ರಾರಂಭಿಸುವುದು ತಡವಾಗಿದ್ದರೂ ಅದು ಅತ್ಯಂತ ಅನುಕೂಲಕರ ಹೂಡಿಕೆ. ಯುದ್ಧ ಪರಿಸ್ಥಿತಿ ಅಥವಾ ಜಾಗತಿಕ ಅನಿಶ್ಚಿತತೆಗಳು ಈಗಿನ ಕಾಲದಲ್ಲಿ ಸಾಮಾನ್ಯ; ಕಳೆದ ಎರಡು ಮೂರು ವರ್ಷಗಳಿಂದ ಇವು ಎಂದಿನ ಸಂಗತಿಗಳಾಗಿವೆ. ದೀರ್ಘಾವಧಿಯಲ್ಲಿ ಮಾರುಕಟ್ಟೆಗಳು ಆರ್ಥಿಕತೆಯ ಗಟ್ಟಿತನವನ್ನೇ ಮೂಲವಾಗಿ ಆಧರಿಸಿ ಮುಂದುವರಿಯುತ್ತವೆ. ಈ ನಡುವೆ ಇರುವ ಏರಿಳಿತಗಳು ಅಲ್ಪಾವಧಿಯವು.

ನಿಮಗೆ ಈ ಹಂತದಲ್ಲಿ ಸಮತೋಲನದ ಹೂಡಿಕೆ ಅಗತ್ಯ. ಒಂದು ಭಾಗವನ್ನು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಮತ್ತು ಮತ್ತೊಂದು ಭಾಗವನ್ನು ಡೆಟ್ ಹೂಡಿಕೆಗಳಲ್ಲಿ ತೊಡಗಿಸುವುದು ಸೂಕ್ತ. ತಿಂಗಳಿಗೆ ನಿಶ್ಚಿತ ಮೊತ್ತವನ್ನು ಎಸ್‌ಐಪಿ ಮೂಲಕ ಹೂಡಿಕೆ ಮಾಡುವುದರಿಂದ 15 ವರ್ಷಗಳಲ್ಲಿ ಉತ್ತಮ ನಿಧಿ ಒಗ್ಗೂಡಿಸಲು ಸಾಧ್ಯ. ಭಯದಿಂದ ಹೂಡಿಕೆ ಮುಂದೂಡುವುದಕ್ಕಿಂತ, ಗುರಿ ಆಧಾರಿತ, ಶಿಸ್ತಿನ ಹೂಡಿಕೆ ವಿಧಾನವನ್ನು ಈಗಲೇ ಆರಂಭಿಸುವುದು ಉತ್ತಮ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in



# ಮಾತುಕತೆ: ಮುಗಿಯದ ಗೊಂದಲ

ಒಂದನೇ ಪುಟದಿಂದ...

'ವ್ಯಾನ್ಸ್ ಅವರು ಮಂಗಳವಾರ ಬೆಳಿಗ್ಗೆ ಇಸ್ಲಾಮಾಬಾದ್‌ಗೆ ತೆರಳಲು ಉದ್ದೇಶಿಸಿದ್ದರು. ಅಲ್ಲಿ ಬುಧವಾರದಿಂದ ಮಾತುಕತೆಗಳು ಆರಂಭವಾಗಬೇಕಿದ್ದವು. ಆದರೆ, ಇರಾನ್‌ನಿಂದ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ರಾಜತಾಂತ್ರಿಕ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ, ಪ್ರವಾಸವನ್ನು ರದ್ದುಪಡಿಸಿಲ್ಲ' ಎಂದು ಅಧಿಕಾರಿ ಹೇಳಿದ್ದಾರೆ.

ಎರಡನೇ ಸುತ್ತಿನ ಮಾತುಕತೆಯಲ್ಲಿ ಇರಾನ್ ತನ್ನ ಭಾಗವಹಿಸುವಿಕೆಯನ್ನು ಅಧಿಕೃತವಾಗಿ ದೃಢಪಡಿಸಿಲ್ಲ. ಆದರೆ, ತನ್ನ ನಿಯೋಗವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಯೋಜನೆ ರೂಪಿಸುತ್ತಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಬ್ಬರು ಅಧಿಕಾರಿಗಳು ಹೇಳಿದ್ದಾರೆ. ಅಮೆರಿಕದ ನಿಯೋಗದಲ್ಲಿ ವ್ಯಾನ್ಸ್, ಇರಾನ್‌ನ ನಿಯೋಗದಲ್ಲಿ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಅವರು ಮಾತುಕತೆಯಲ್ಲಿ ಪಾಲ್ಗೊಳ್ಳಬೇಕಿತ್ತು.

**ಬೆದರಿಕೆ ಇದ್ದಾಗ ಮಾತುಕತೆ ಇಲ್ಲ:** 'ಬೆದರಿಕೆಗಳ ನೆರಳಿನಲ್ಲಿ ನಾವು ಮಾತುಕತೆಗೆ ಮುಂದಾಗುವುದಿಲ್ಲ' ಎಂದು ಖಾಲೀಬಾಫ್ ಅವರು ಮಂಗಳವಾರ ಬೆಳಿಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಒಪ್ಪಂದಕ್ಕೆ ಬರದಿದ್ದರೆ ಇರಾನ್‌ನ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳನ್ನು ಗುರಿಯಾಗಿಸುವ ಟ್ರಂಪ್ ಅವರ ಎಚ್ಚರಿಕೆಯನ್ನು ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದರು.

'ಇರಾನ್‌ನ ಯಾವುದೇ ನಿಯೋಗ ಇದುವರೆಗೂ ಇಸ್ಲಾಮಾಬಾದ್‌ಗೆ ಪ್ರಯಾಣಿಸಿಲ್ಲ' ಎಂದು ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ವರದಿ ಮಾಡಿದೆ.

ಮಾತುಕತೆಯ ಸಮಯ ಮತ್ತು ತಾಣದ ಬಗ್ಗೆ ಪಾಕಿಸ್ತಾನ ಕೂಡ ಅಧಿಕೃತವಾಗಿ ಏನೂ ಹೇಳಿಲ್ಲ. ಅಮೆರಿಕ ಮತ್ತು ಇರಾನ್‌ನ ನಿಯೋಗಗಳ ಸುರಕ್ಷತೆ ಖಾತರಿಪಡಿಸಲು ಇಸ್ಲಾಮಾಬಾದ್‌ನಲ್ಲಿ ಬಿಗಿ ಭದ್ರತೆ ಏರ್ಪಡಿಸಲಾಗಿದೆ.

'ಮಾತುಕತೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ಇರಾನ್ ಕಡೆಯಿಂದ ಪ್ರತಿಕ್ರಿಯೆಗಾಗಿ ಇನ್ನೂ ಕಾಯುತ್ತಿದ್ದೇವೆ' ಎಂದು ಪಾಕಿಸ್ತಾನದ ಸಂವಹನ ಸಚಿವ ಅತಾವುಲ್ಲಾ ತರಾರ್ ಹೇಳಿದ್ದಾರೆ.

**ಚೀನಾ ಒತ್ತಾಯ:** ಎರಡೂ ಕಡೆಯವರು ಶಾಂತಿ ಮಾತುಕತೆಗೆ ಮುಂದಾಗಬೇಕು ಎಂದು ಚೀನಾ ಒತ್ತಾಯಿಸಿದೆ. 'ಪಶ್ಚಿಮ ಏಷ್ಯಾ ಸಂಘರ್ಷವು ಯುದ್ಧ ಮತ್ತು ಶಾಂತಿಯ ನಡುವಿನ ಪರಿವರ್ತನೆಯ ನಿರ್ಣಾಯಕ ಹಂತದಲ್ಲಿದೆ. ಎಲ್ಲ ಭಾಗೀದಾರರು ಪ್ರಾಮಾಣಿಕತೆಯನ್ನು ತೋರಿಸಿ, ಮಾತುಕತೆ ಮೂಲಕ ಸಮಸ್ಯೆಯ ಪರಿಹಾರಕ್ಕೆ ಬದ್ಧವಾಗಿರಬೇಕು' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಹೇಳಿದ್ದಾರೆ.

ಅಮೆರಿಕ, ಇರಾನ್ ನಡುವಿನ ಮಾತುಕತೆಯನ್ನು ಸುಗಮಗೊಳಿಸಲು ಪಾಕಿಸ್ತಾನ ನಡೆಸುತ್ತಿರುವ ಪ್ರಯತ್ನಗಳಿಗೆ ಚೀನಾ ಬೆಂಬಲ ವ್ಯಕ್ತಪಡಿಸಿದೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಮಂಗಳವಾರ ತಿಳಿಸಿದೆ.

### 'ಇರಾನ್‌ಗೆ ಚೀನಾ 'ಉಡುಗೊರೆ' ಸಾಗಿಸುತ್ತಿದ್ದ ಹಡಗು'

ಒಂದನೇ ಪುಟದಿಂದ...

'ಹಡಗಿನಲ್ಲಿ ಚೀನಾದಿಂದ ಇರಾನ್‌ಗೆ 'ಉಡುಗೊರೆ' ಸಾಗಿಸಲಾಗುತ್ತಿತ್ತು. ಅದು ಅಷ್ಟೊಂದು ಒಳ್ಳೆಯ ಉಡುಗೊರೆ ಆಗಿರಲಿಲ್ಲ. ನನಗೆ ಸ್ವಲ್ಪ ಅಚ್ಚರಿಯಾಗಿದೆ' ಎಂದು ಸಿಎನ್‌ಬಿಸಿಗೆ ತಿಳಿಸಿದ್ದಾರೆ.

ಇರಾನ್‌ಗೆ ಯಾವುದೇ ಶಸ್ತ್ರಾಸ್ತ್ರ ಪೂರೈಸುವುದಿಲ್ಲ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ತಮಗೆ ಭರವಸೆ ನೀಡಿದ್ದಾಗಿ ಟ್ರಂಪ್ ಅವರು ಒಂದು ವಾರದ ಹಿಂದೆ ಹೇಳಿದ್ದರು.

'ಕ್ಷಿಪಣಿಗಳನ್ನು ನಿರ್ಮಿಸಲು ಅಗತ್ಯವಿರುವ ರಾಸಾಯನಿಕ ವಸ್ತುಗಳನ್ನು ಹಡಗಿನಲ್ಲಿ ಚೀನಾದಿಂದ ಇರಾನ್‌ಗೆ ಸಾಗಿಸಲಾಗುತ್ತಿತ್ತು' ಎಂದು ಈ ಹಿಂದೆ ವಿಶ್ವಸಂಸ್ಥೆಗೆ ಅಮೆರಿಕದ ರಾಯಭಾರಿಯಾಗಿದ್ದ ನಿಕಿ ಹ್ಯಾಲೆ ಅವರು ಆರೋಪಿಸಿದ್ದಾರೆ. ಆದರೆ ಈ ಆರೋಪವನ್ನು ಚೀನಾ ಅಲ್ಲಗಳೆದಿದೆ. 'ನನಗೆ ತಿಳಿದಿರುವ ಮಾಹಿತಿ ಪ್ರಕಾರ, ಅದು ವಿದೇಶಿ ಧ್ವಜ ಹೊಂದಿರುವ ಸರಕು ಸಾಗಣೆ ಹಡಗು. ಆ ಹಡಗಿಗೆ ಚೀನಾದ ಜತೆ ನಂಟು ಇದೆ ಎಂಬ ವರದಿಯನ್ನು ಅಲ್ಲಗಳೆಯುತ್ತೇವೆ' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಹೇಳಿದ್ದಾರೆ.

**ಪ್ರಮುಖ ಬೆಳವಣಿಗೆ**
- ಎರಡು ವಾರಗಳ ಕದನ ವಿರಾಮ ವಿಸ್ತರಿಸುವಂತೆ ಇರಾನ್ ಹಾಗೂ ಅಮೆರಿಕವನ್ನು ಒತ್ತಾಯಿಸಿದ ಪಾಕಿಸ್ತಾನ
- ಇರಾನ್ ಜತೆ ನಂಟು ಹೊಂದಿರುವ ಆರೋಪದಲ್ಲಿ ಸಂಘಟನೆಯೊಂದರ ಸದಸ್ಯರನ್ನು ಯುಎಇ ಪೊಲೀಸರು ಬಂಧಿಸಿರುವ ಘಟನೆಯನ್ನು ಇರಾನ್ ಖಂಡಿಸಿದೆ
- ಗಾಜಾದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಐವರು ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ
- ಗಲ್ಲು ಶಿಕ್ಷೆಗೆ ಗುರಿಯಾಗಿರುವ ಎಂಟು ಮಹಿಳೆಯರನ್ನು ಬಿಡುಗಡೆ ಮಾಡುವಂತೆ ಇರಾನ್‌ಗೆ ಟ್ರಂಪ್ ಒತ್ತಾಯಿಸಿದ್ದಾರೆ
- ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ರಕ್ಷಣಾ ಪಡೆಗಳ ಮುಖ್ಯಸ್ಥ ಆಸಿಮ್ ಮುನೀರ್ ಅವರ ಹೆಸರುಗಳನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಶಿಫಾರಸು ಮಾಡುವ ನಿರ್ಣಯವನ್ನು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಅಸೆಂಬ್ಲಿಯಲ್ಲಿ ಮಂಗಳವಾರ ಮಂಡಿಸಲಾಗಿದೆ

**ಮುಂಬೈ ಧಾರಣೆ (ಶೇಂಗಾ)**
21-04-2026

| | |
|---|---|
| ಜಾವಾ 70/80(ಹೊಸ) | 11100-11200 |
| ಜಾವಾ 80/90(ಹೊಸ) | 10400-10500 |
| ದಪ್ಪ ಮಧ್ಯಪ್ರದೇಶ (ಹೊಸ) | 8200-8300 |
| ದಪ್ಪ ಗುಜರಾತ್ (ಹೊಸ) | 9300-9400 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1670 (1680) |
| ಒಂದು ವಾರದ ಡೆಲಿವರಿ | 1665(1675) |
| ಪಾಮ್ ವಾರದ ಡೆಲಿವರಿ | 1418(1423) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1560(1565) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,51,400 (1,52,100) |
| ಬೆಳ್ಳಿ ಕೆ.ಜಿಗೆ | 2,49,500 (2,52,500) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

## ನಿಷೇಧ ವಿಸ್ತರಿಸಿದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ತನ್ನ ವಾಯು ಪ್ರದೇಶವನ್ನು ಬಳಸುವುದಕ್ಕೆ ಭಾರತದ ವಿಮಾನಗಳಿಗೆ ವಿಧಿಸಿರುವ ನಿರ್ಬಂಧದ ಅವಧಿಯನ್ನು ಪಾಕಿಸ್ತಾನವು ಮೇ 24ರವರೆಗೆ ವಿಸ್ತರಿಸಿದೆ.

ಪಹಲ್ಗಾಮ್‌ನಲ್ಲಿನ ಭಯೋತ್ಪಾದಕರ ದಾಳಿಯ ಬಳಿಕ 2025ರ ಏ. 24ರಿಂದ ಪಾಕಿಸ್ತಾನ ಈ ನಿಷೇಧ ಹೇರಿದೆ. ಈ ನಿರ್ಧಾರದಿಂದಾಗಿ ಭಾರತ ವಿಮಾನಯಾನ ಸಂಸ್ಥೆಗಳಿಗೆ ಕೋಟಿಗಟ್ಟಲೆ ನಷ್ಟವಾಗಿದೆ. ಭಾರತದ ವಾಯುಪಡೆಯ ವಿಮಾನಗಳು ಕೂಡ ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಲು ಅನುಮತಿ ನೀಡಲಾಗಿಲ್ಲ.

# ಹಿಂದಿಗೆ ಅಂಕ: ಹೈಕೋರ್ಟ್ ಆದೇಶ

ಒಂದನೇ ಪುಟದಿಂದ...

ಅಲ್ಲದೇ 'ಈಗಾಗಲೇ ಕರಡು ನಿಯಮ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ತಳ್ಳಿ ಹಾಕಿದೆ. ಆದ್ದರಿಂದ, ತೃತೀಯ ಭಾಷೆಗೆ ಅಂಕ ನೀಡಬೇಕು ಎನ್ನುವ ಆದೇಶವನ್ನು ಮರು ಪರಿಶೀಲನೆ ಮಾಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಾವು ಓದುವಾಗಲೂ ನೀವು ಹೇಳುವ ರೀತಿಯ ಒತ್ತಡವೇ ಇತ್ತು. ಹಾಗಾದರೆ, ನಿಮ್ಮ ಉದ್ದೇಶ ಎಲ್ಲರನ್ನೂ ಪಾಸು ಮಾಡುವುದಾಗಿದೆಯೇ? ನಪಾಸಾಗುತ್ತಿದ್ದಾರೆ ಎಂದಾದರೆ ಹಿಂದಿ ಬೋಧಿಸಲು ಒಳ್ಳೆಯ ಶಿಕ್ಷಕರನ್ನು ನೇಮಿಸಿ' ಎಂದು ಸಲಹೆ ನೀಡಿತು.

'ಗ್ರೇಡ್ ನೀಡುವ ಕುರಿತು ಕರಡು ಅಧಿಸೂಚನೆಯನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದ ಬಳಿಕ ಅಂದರೆ, 2026ರ ಏಪ್ರಿಲ್ 10ರಂದು ಪ್ರಕಟಿಸಲಾಗಿದೆ. ಅಂತಿಮ ಅಧಿಸೂಚನೆಯನ್ನು ಇನ್ನೂ ಹೊರಡಿಸಿಲ್ಲ. ಹೀಗಾಗಿ, ಈ ಹಿಂದಿನ ಆದೇಶದಲ್ಲಿ ಮಧ್ಯಪ್ರವೇಶಿಸಲು ಬಯಸುವುದಿಲ್ಲ. ಕರಡು ನಿಯಮಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಇನ್ನಷ್ಟೇ ಕ್ರಮ ಕೈಗೊಳ್ಳಬೇಕಿದೆ. ಹಾಗಾಗಿ, ರಾಜ್ಯ ಸರ್ಕಾರ ಭವಿಷ್ಯದಲ್ಲಿ ಈ ಸಂಬಂಧ ಕಾನೂನಿನನ್ವಯ ತನ್ನ ಹೆಜ್ಜೆ ಇರಿಸಬಹುದು' ಎಂದು ಸ್ಪಷ್ಟಪಡಿಸಿ ಅರ್ಜಿ ವಿಲೇವಾರಿ ಮಾಡಿತು.

**ಪ್ರಕರಣ:** ಗ್ರೇಡಿಂಗ್ ವ್ಯವಸ್ಥೆಯನ್ನು ಪ್ರಶ್ನಿಸಿ ವಿದ್ಯಾರ್ಥಿಗಳಾದ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್, ಉಡುಪಿಯ ಅನೂಷಾ ಮತ್ತು ಸುದೀಕ್ಷಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, '2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ನೀಡುವುದು ಬೇಡ. ಚಾಲ್ತಿಯಲ್ಲಿರುವ ನಿಯಮದಂತೆ ಅಂಕಗಳನ್ನೇ ನೀಡಿ' ಎಂದು ಇದೇ 15ರಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು.

### ಪರೀಕ್ಷೆ ರದ್ದು ಮಾಡಬಹುದಲ್ಲಾ?

ಒಂದನೇ ಪುಟದಿಂದ...

'ಪಿಯುಸಿಯಲ್ಲಿ ಈಗ ಶೇ 83ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ನೀವು ಎಲ್ಲರನ್ನೂ ಪಾಸ್ ಮಾಡಬೇಕೆಂದಿದ್ದರೆ ಪರೀಕ್ಷೆಯನ್ನೇ ರದ್ದು ಮಾಡಬಹುದಲ್ಲಾ' ಎಂದು ಪ್ರಶ್ನಿಸಿದ ನ್ಯಾಯಪೀಠ, 'ಮುಂದಿನ ಶೈಕ್ಷಣಿಕ ವರ್ಷಕ್ಕೆ ನಿಮಗೆ ಸೂಕ್ತವೆನ್ನಿಸಿದ ಕಾನೂನು ರೂಪಿಸಲು ಸ್ವತಂತ್ರರಾಗಿದ್ದೀರಿ. ಆದರೆ, ಪ್ರಸಕ್ತ ಸಾಲಿಗೆ ತೃತೀಯ ಭಾಷೆಗೆ ಗ್ರೇಡ್ ಬದಲು ಅಂಕಗಳನ್ನೇ ನೀಡಬೇಕು' ಎಂದು ಸರ್ಕಾರಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿ ಮರುಪರಿಶೀಲನಾ ಅರ್ಜಿಯನ್ನು ಇತ್ಯರ್ಥಗೊಳಿಸಿತು.



# ಇಂದು KD ಟ್ರೇಲರ್


ಬಿಡುಗಡೆ ದಿನಾಂಕ ಹಾಗೂ ಪ್ರಚಾರದ ಕುರಿತಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಊಹಾಪೋಹಗಳು ಹರಿದಾಡುತ್ತಿರುವ ಸಂದರ್ಭದಲ್ಲೇ 'KD-ದಿ ಡೆವಿಲ್' ಚಿತ್ರದ ಟ್ರೇಲರ್ ರಿಲೀಸ್ ಮಾಡಲು ನಿರ್ದೇಶಕ ಪ್ರೇಮ್ ಮುಂದಾಗಿದ್ದಾರೆ.

ಬುಧವಾರ (ಏ.22) ಸಂಜೆ 7.02ಕ್ಕೆ 'KD' ಸಿನಿಮಾದ ಟ್ರೇಲರ್ ಬಿಡುಗಡೆಯಾಗಲಿದ್ದು, ಈ ಕುರಿತಾಗಿ ಮಾಹಿತಿ ನೀಡುವ ಪೋಸ್ಟರ್‌ನಲ್ಲಿ ಸಿನಿಮಾ ಏ.30ರಂದು ಬಿಡುಗಡೆಯಾಗಲಿದೆ ಎಂದು ಪುನರುಚ್ಚರಿಸಲಾಗಿದೆ. ಧ್ರುವ ಸರ್ಜಾ ನಟನೆಯ ಆರನೇ ಸಿನಿಮಾ ಇದಾಗಿದೆ. 'KD'ಯು ಒಂದು ಹಾಡಿನ ಮೂಲಕವೇ ದೇಶದಾದ್ಯಂತ ಇತ್ತೀಚೆಗೆ ಸಾಕಷ್ಟು ಸುದ್ದಿಯಾಗಿತ್ತು. ಸಿನಿಮಾ ರಿಲೀಸ್‌ಗೆ ಬೆರಳೆಣಿಕೆಯಷ್ಟೇ ದಿನಗಳಿದ್ದು, ಆನ್‌ಲೈನ್‌ನಲ್ಲಿ ಸಿನಿಮಾದ ನಿರ್ಮಾಣ ಸಂಸ್ಥೆಯಾದ ಕೆವಿಎನ್ ಪ್ರೊಡಕ್ಷನ್ಸ್ ಪ್ರಚಾರ ನಡೆಸುತ್ತಿದೆ. ಆದರೆ ರಾಜ್ಯವ್ಯಾಪಿ ಸುತ್ತಾಟ–ಪ್ರಿರಿಲೀಸ್ ಕಾರ್ಯಕ್ರಮದ ಬಗ್ಗೆ ಯಾವುದೇ ಘೋಷಣೆಯಾಗಿಲ್ಲ.



ಧ್ರುವ ಸರ್ಜಾ

ಚಿತ್ರಕ್ಕೆ ಎದುರಾಗಿದ್ದ ಸೆನ್ಸಾರ್ ಸಮಸ್ಯೆ ಬಗೆಹರಿದಿದೆ ಎಂದು ಚಿತ್ರತಂಡ ತಿಳಿಸಿದೆ. ಬಹುದೊಡ್ಡ ತಾರಾಗಣವಿರುವ ಈ ಸಿನಿಮಾದ 'ಶಿವ ಶಿವ', 'ಸೆಟ್ ಆಗಲ್ಲ', 'ಅಣ್ತಮ್ಮ ಜೋಡೆತ್ತು ಕಣೋ', 'ನುಗ್ಗಿ ಹೊಡಿ' ಹಾಡುಗಳು ಬಿಡುಗಡೆಯಾಗಿವೆ. ಬಾಲಿವುಡ್‌ನ ನಟಿ ನೋರಾ ಫತೇಹಿ ಹೆಜ್ಜೆ ಹಾಕಿದ್ದ 'ಸರ್ಕೆ ನಿನ್ನ...' ಹಾಡಿಗೆ ವಿರೋಧ ಬಂದ ಬೆನ್ನಲ್ಲೇ ಅದನ್ನು ಚಿತ್ರತಂಡ ಯುಟ್ಯೂಬ್‌ನಿಂದ ತೆಗೆದಿದೆ. ಚಿತ್ರದಲ್ಲಿ ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, 'ಕಾಲ ಭೈರವ' ಎಂಬ ಪಾತ್ರಕ್ಕೆ ಅವರು ಬಣ್ಣಹಚ್ಚಿದ್ದಾರೆ. 'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ. ಚಿತ್ರದಲ್ಲಿ ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ತಾರಾಬಳಗದಲ್ಲಿದ್ದಾರೆ. 'KD'-2 ಬರುವ ಮುನ್ಸೂಚನೆಯನ್ನೂ ಪ್ರೇಮ್ ಇತ್ತೀಚೆಗೆ ನೀಡಿದ್ದಾರೆ.



ಜೂ.ಎನ್‌ಟಿಆರ್

# 2027ಕ್ಕೆ ಎನ್‌ಟಿಆರ್–ನೀಲ್

**ತೆಲುಗಿನ** ಜೂನಿಯರ್ ಎನ್‌ಟಿಆರ್ ನಟನೆಯ ಪ್ರಶಾಂತ್ ನೀಲ್ ನಿರ್ದೇಶನದ '#NTRNEEL' ಸಿನಿಮಾ 2027ರ ಜೂನ್ 11ರಂದು ತೆರೆಕಾಣಲಿದೆ.

ಈ ಬಗ್ಗೆ ಜೂ.ಎನ್‌ಟಿಆರ್ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ್ದು, ಸಿನಿಮಾದ ಮೊದಲ ತುಣುಕು ಮೇ 20ರಂದು ಬಿಡುಗಡೆಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಚಿತ್ರದ ಶೀರ್ಷಿಕೆಯನ್ನು ತಂಡ ಇನ್ನಷ್ಟೇ ಘೋಷಿಸಬೇಕಿದೆ. ಈ ಹಿಂದೆ 2026ರ ಜೂನ್ 25ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು. ಸಿನಿಮಾದಲ್ಲಿ ಜೂ.ಎನ್‌ಟಿಆರ್‌ಗೆ ಜೋಡಿಯಾಗಿ 'ಸಪ್ತ ಸಾಗರದಾಚೆ ಎಲ್ಲೋ' ಖ್ಯಾತಿಯ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ. 'ಪುಷ್ಪ', 'ರಂಗಸ್ಥಳಂ' ಮುಂತಾದ ಸಿನಿಮಾಗಳನ್ನು ನಿರ್ಮಾಣ ಮಾಡಿದ ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. 2025ರ ಫೆ.20ರಂದು ಸಿನಿಮಾದ ಶೂಟಿಂಗ್ ಆರಂಭವಾಗಿತ್ತು.



ಪ್ರಶಾಂತ್ ನೀಲ್

ಬಿಗ್‌ಬಜೆಟ್‌ನಲ್ಲಿ ಸಿನಿಮಾ ಅದ್ದೂರಿಯಾಗಿ ತಯಾರಾಗುತ್ತಿದೆ. ಕನ್ನಡದಲ್ಲಿ ಕೆ.ಜಿ.ಎಫ್. ಸಿನಿಮಾ ಸರಣಿ, ತೆಲುಗಿನಲ್ಲಿ 'ಸಲಾರ್' ಬಳಿಕ ಪ್ರಶಾಂತ್ ನೀಲ್ ಈ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದರು. ಮೂಲ ತೆಲುಗು ಜೊತೆಗೆ, ಕನ್ನಡ, ತಮಿಳು, ಹಿಂದಿ ಮತ್ತು ಮಲಯಾಳದಲ್ಲಿ ಡಬ್ ಆಗಿ ಸಿನಿಮಾ ತೆರೆಕಾಣಲಿದೆ. ಈ ಆ್ಯಕ್ಷನ್ ಪ್ಯಾಕ್ಡ್ ಸಿನಿಮಾಗೆ ನೀಲ್ ಅವರೇ ಚಿತ್ರಕಥೆ ಬರೆದಿದ್ದಾರೆ. 'ಕೆ.ಜಿ.ಎಫ್', 'ಸಲಾರ್' ಖ್ಯಾತಿಯ ಭುವನ್ ಗೌಡ ಈ ಚಿತ್ರಕ್ಕೆ ಛಾಯಾಚಿತ್ರಗ್ರಹಣ ಮಾಡುತ್ತಿದ್ದು, ರವಿ ಬಸ್ರೂರ್ ಸಂಗೀತವಿದೆ.

# ಪ್ರೈಂನಲ್ಲಿ ಸೀತಾರಾಮ್

**ಕಳೆದ** ಫೆಬ್ರುವರಿಯಲ್ಲಿ ತೆರೆಕಂಡ ವಿಜಯ ರಾಘವೇಂದ್ರ ನಟನೆಯ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್' ಸಿನಿಮಾ ಇದೀಗ ಅಮೆಜಾನ್ ಪ್ರೈಂ ವಿಡಿಯೊದಲ್ಲಿ ಸ್ಟ್ರೀಮ್ ಆಗುತ್ತಿದೆ.

ಬಿಡುಗಡೆಯಾದ ಮೂರು ದಿನಗಳಲ್ಲೇ ಸಿನಿಮಾವು 2.5 ಕೋಟಿ ನಿಮಿಷಗಳ ವೀಕ್ಷಣೆ ಪಡೆದಿದ್ದು, ಭಾರತದಲ್ಲೇ ಅತಿ ಹೆಚ್ಚು ವೀಕ್ಷಿಸಿದ ಸಿನಿಮಾಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. 2021ರಲ್ಲಿ ತೆರೆಕಂಡ ವಿಜಯ ರಾಘವೇಂದ್ರ ನಟನೆಯ 'ಸೀತಾರಾಮ್ ಬಿನೋಯ್' ಸಿನಿಮಾದ ಸೀಕ್ವೆಲ್ ಇದಾಗಿದೆ. ದೇವಿಪ್ರಸಾದ್ ಶೆಟ್ಟಿ ನಿರ್ದೇಶನದ ಈ ಸಿನಿಮಾವನ್ನು ನಿರ್ದೇಶಕ ಪವನ್ ಒಡೆಯರ್ ಪ್ರಸ್ತುಪಡಿಸಿದ್ದರು. ಸರಣಿ ಕೊಲೆಗಳ ಸುತ್ತ ಸುತ್ತುವ ಈ ಸಿನಿಮಾ ಕಥೆ ಕ್ರೈಂ ಥ್ರಿಲ್ಲರ್ ಜಾನರ್‌ನಲ್ಲಿದೆ. ಸಿನಿಮಾಗೆ ಹೇಮಂತ್ ಆಚಾರ್ ಛಾಯಾಚಿತ್ರಗ್ರಹಣ, ನವನೀತ್ ಶ್ಯಾಮ್ ಸಂಗೀತ ನಿರ್ದೇಶನ, ಶಶಾಂಕ್ ನಾರಾಯಣ್ ಸಂಕಲನ, ಭವಾನಿ ಶಂಕರ್ ಕಲಾ ನಿರ್ದೇಶನವಿದೆ.



ವಿಜಯ ರಾಘವೇಂದ್ರ

# ಆನಂದ್ ಆಡಿಯೊ ಪಾಲಾದ ಅಣ್ಣ ಫ್ರಂ ಮೆಕ್ಸಿಕೊ

**ಧನಂಜಯ** ನಟನೆಯ 'ಅಣ್ಣ ಫ್ರಂ ಮೆಕ್ಸಿಕೊ' ಸಿನಿಮಾದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಖರೀದಿಸಿದೆ.

2023ರಲ್ಲಿ ಸೆಟ್ಟೇರಿದ ಸಿನಿಮಾವನ್ನು ದಿ ರಾಯಲ ಸ್ಟುಡಿಯೋಸ್ ಅಡಿಯಲ್ಲಿ ಸತ್ಯ ರಾಯಲ ನಿರ್ಮಿಸಿದ್ದು. ಐರಾ ಫಿಲ್ಮ್ಸ್ ಕೂಡ ಕೈಜೋಡಿಸಿದೆ. 'ಬಡವ ರಾಸ್ಕಲ್' ಸಿನಿಮಾ ಖ್ಯಾತಿಯ ಶಂಕರ್ ಗುರು ನಿರ್ದೇಶನದ ಈ ಚಿತ್ರವನ್ನು ಜೀ ಸ್ಟುಡಿಯೊಸ್ ಬಿಡುಗಡೆ ಮಾಡಲಿದೆ. 2021ರಲ್ಲಿ ತೆರೆಗೆ ಬಂದ 'ಬಡವ ರಾಸ್ಕಲ್' ಚಿತ್ರದ ಮೂಲಕ ಧನಂಜಯ 'ಡಾಲಿ ಪಿಕ್ಚರ್ಸ್'ನಡಿ ಸಿನಿಮಾ ನಿರ್ಮಾಣ ಕ್ಷೇತ್ರಕ್ಕೆ ಕಾಲಿಟ್ಟಿದ್ದರು. ಶಂಕರ್ ಗುರು–ಧನಂಜಯ ಕಾಂಬಿನೇಷನ್‌ನ ಎರಡನೇ ಸಿನಿಮಾ ಇದಾಗಿದ್ದು, ಆ್ಯಕ್ಷನ್ ಫ್ಯಾಮಿಲಿ ಎಂಟರ್‌ಟೈನರ್ ಜಾನರ್‌ನಲ್ಲಿ ಸಿನಿಮಾ ಕಥೆಯಿದೆ.



ಧನಂಜಯ, ಶಂಕರ್‌ಗುರು

ಸಿನಿಮಾಗೆ ವಾಸುಕಿ ವೈಭವ್ ಸಂಗೀತ ನಿರ್ದೇಶನವಿದ್ದು, 'ಏಕ್ ಲವ್ ಯಾ', 'ಯುಐ' ಖ್ಯಾತಿಯ ರೀಷ್ಮಾ ನಾಣಯ್ಯ ನಾಯಕಿಯಾಗಿ ಧನಂಜಯ ಅವರಿಗೆ ಜೋಡಿಯಾಗಿದ್ದಾರೆ.

---

# 'ಎ' ಪ್ರವರ್ಗದಿಂದ ಶೀಘ್ರ ಹೊರಕ್ಕೆ: ಎಎಫ್‌ಐ ವಿಶ್ವಾಸ

ನವದೆಹಲಿ (ಪಿಟಿಐ): ಡೋಪಿಂಗ್ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿ ಅಥ್ಲೆಟಿಕ್ಸ್ ಇಂಟೆಗ್ರಿಟಿ ಘಟಕವು ಭಾರತವನ್ನು 'ಅತಿ ಹೆಚ್ಚಿನ ಅಪಾಯ ಎದುರಿಸುತ್ತಿರುವ ದೇಶ'ಗಳ ವಿಭಾಗಕ್ಕೆ ಸೇರ್ಪಡೆ ಮಾಡಿರುವುದರಿಂದ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ತೀವ್ರ ಮುಜುಗರಕ್ಕೆ ಒಳಗಾಗಿದೆ.

ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕ (ನಾಡಾ) ಮತ್ತು ಕ್ರೀಡಾ ಸಚಿವಾಲಯದ ಜೊತೆ ಕಾರ್ಯನಿರ್ವಹಿಸಿ ಆದಷ್ಟು ಬೇಗನೇ 'ಎ' ಪ್ರವರ್ಗದಿಂದ ಹೊರಬರಲು ಯತ್ನಿಸುವುದಾಗಿ ಎಎಫ್‌ಐ ಮಂಗಳವಾರ ತಿಳಿಸಿದೆ.

ಉದ್ದೀಪನ ಮದ್ದುಸೇವನೆ ಪರೀಕ್ಷೆಯಲ್ಲಿ ಸತತ ಎರಡು ವರ್ಷ ಅತ್ಯಧಿಕ 'ಪಾಸಿಟಿವ್' ಪ್ರಕರಣಗಳು ಭಾರತದಲ್ಲೇ ದಾಖಲಾಗಿದ್ದವು. ವಿಶ್ವ ಅಥ್ಲೆಟಿಕ್ಸ್‌ನ ಸ್ವತಂತ್ರ ಕಣ್ಗಾವಲು ಸಂಸ್ಥೆಯಾದ ಅಥ್ಲೆಟಿಕ್ಸ್ ಇಂಟೆಗ್ರಿಟಿ ಘಟಕವು (ಎಐಯು) ಸೋಮವಾರ ಭಾರತವನ್ನು 'ಬಿ' ಪ್ರವರ್ಗದಿಂದ 'ಎ' ಪ್ರವರ್ಗಕ್ಕೆ ಸೇರ್ಪಡೆ ಮಾಡಿತ್ತು.

ಇದರಿಂದಾಗಿ ಭಾರತದ ಅಥ್ಲೀಟುಗಳು ಡೋಪಿಂಗ್‌ಗೆ ಸಂಬಂಧಿಸಿ ಈ ಹಿಂದಿಗಿಂತ ಕಟ್ಟುನಿಟ್ಟಾದ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ.

# ರಾಯಲ್ಸ್–ಲಖನೌ ಸೆಣಸಾಟ ಇಂದು

## ಗೆಲುವಿನ ಹಳಿಗೆ ಮರಳಲು ಪೈಪೋಟಿ; ಒತ್ತಡದಲ್ಲಿ ರಿಷಭ್ ಪಂತ್, ರಿಯಾನ್ ಪರಾಗ್

| ಬಲಾಬಲ | ಒಟ್ಟು ಪಂದ್ಯ 6 |
|---|---|
| ರಾಜಸ್ಥಾನ ಜಯ | 4 |
| ಲಖನೌ ಗೆಲುವು | 2 |

**ಇಂದಿನ ಪಂದ್ಯ**

ಲಖನೌ ಸೂಪರ್ ಜೈಂಟ್ಸ್ V/s ರಾಜಸ್ಥಾನ ರಾಯಲ್ಸ್

ತಾಣ: ಲಖನೌ,
ಆರಂಭ: ರಾತ್ರಿ 7.30
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಲಖನೌ (ಪಿಟಿಐ): ಮಧ್ಯಮ ಕ್ರಮಾಂಕದ ಪರದಾಟ ರಾಜಸ್ಥಾನ ರಾಯಲ್ಸ್ ತಂಡವನ್ನು ಚಿಂತೆಗೆ ಹಚ್ಚಿದೆ. ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಬುಧವಾರ ನಡೆಯಲಿರುವ ಪಂದ್ಯದಲ್ಲಿ ಎದುರಿಸಲಿರುವ ಈ ತಂಡವು ಈಗ ಹ್ಯಾಟ್ರಿಕ್ ಸೋಲನ್ನು ತಪ್ಪಿಸುವ ಗುರಿಯಲ್ಲಿದೆ.



ರಿಯಾನ್ ಪರಾಗ್

ರಾಯಲ್ಸ್ ಈ ಬಾರಿಯ ಅಭಿಯಾನವನ್ನು ಸತತ ನಾಲ್ಕು ಗೆಲುವುಗಳೊಂದಿಗೆ ಭರ್ಜರಿಯಾಗಿ ಆರಂಭಿಸಿತ್ತು. ಆದರೆ ನಂತರ ಎದುರಾದ ಎರಡು ಸೋಲುಗಳು ಮಧ್ಯಮ ಕ್ರಮಾಂಕದ ದೌರ್ಬಲ್ಯವನ್ನು ಎತ್ತಿತೋರಿಸಿದೆ.

ಸನ್‌ರೈಸರ್ಸ್‌ನ ಹೊಸ ವೇಗದ ಬೌಲರ್‌ಗಳಾದ ಪ್ರಫುಲ್ ಹಿಂಗೆ ಮತ್ತು ಸಾಕಿಬ್ ಹುಸೇನ್ ದಾಳಿಗೆ ರಾಯಲ್ಸ್ ತಂಡ ಕುಸಿದಿತ್ತು. ನಂತರದ ಪಂದ್ಯದಲ್ಲಿ ರಿಂಕು ಸಿಂಗ್ ಅವರ ಅಜೇಯ ಅರ್ಧಶತಕದ ಪರಿಣಾಮ ಕೋಲ್ಕತ್ತ ನೈಟ್ ರೈಡರ್ಸ್ ಮೊದಲ ಗೆಲುವು ಪಡೆದರೆ, ರಾಯಲ್ಸ್ ಎರಡನೇ ಸೋಲು ಅನುಭವಿಸಿತು.

ನಾಯಕ ರಿಯಾನ್ ಪರಾಗ್ ಸತತವಾಗಿ ವಿಫಲರಾಗಿದ್ದಾರೆ. ಆರು ಇನಿಂಗ್ಸ್‌ಗಳಲ್ಲಿ ಮೂರು ಬಾರಿ ಒಂದಂಕಿ ಮೊತ್ತಕ್ಕೆ ನಿರ್ಗಮಿಸಿದ್ದಾರೆ. ಅವರ ಅತ್ಯಧಿಕ ಗಳಿಕೆ ಬರೇ 20 ರನ್. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ ಮತ್ತು ಧ್ರುವ್ ಜುರೇಲ್ ತಂಡದ ಆಧಾರಸ್ತಂಭ. ಆದರೆ ಈ ಮೂವರೂ ವಿಫಲರಾದಾಗ ತಂಡ ಪೇಚಿಗೆ ಸಿಲುಕಿದೆ.

ಪರಾಗ್ ಪರದಾಟ ಒಂದೆಡೆಯಾದರೆ, ರವೀಂದ್ರ ಜಡೇಜ ಅವರ ಆಟ ಬಿರುಸು ಕಳೆದುಕೊಂಡಿರುವುದು ತಂಡದ ಬೇಗುದಿ ಹೆಚ್ಚಿಸಿದೆ. ಶಿಮ್ರಾನ್ ಹೆಟ್ಮೆಯರ್ (4 ಇನಿಂಗ್ಸ್‌ಗಳಿಂದ 39) ಕೂಡ ಅಬ್ಬರಿಸುತ್ತಿಲ್ಲ. ಕ್ಷೇತ್ರ ರಕ್ಷಣೆಯೂ ಸುಧಾರಿಸಬೇಕಿದೆ. ಕಳೆದ ಪಂದ್ಯದಲ್ಲಿ ಕೆಕೆಆರ್‌ನ ರಿಂಕು ಸಿಂಗ್ ಕೇವಲ 8 ರನ್ ಗಳಿಸಿದ್ದಾಗ ನಾಂಡ್ರೆ ಬರ್ಗರ್ ನೀಡಿದ ಜೀವದಾನ ತಂಡಕ್ಕೆ ದುಬಾರಿಯಾಯಿತು.

ಸತತ ಮೂರು ಸೋಲುಗಳ ನಂತರ ಲಖನೌ ತಂಡ ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನಕ್ಕೆ ಜಾರಿದೆ.

ಸೂರ್ಯವಂಶಿ ಮತ್ತು ಜೈಸ್ವಾಲ್ ಅವರನ್ನು ಆದಷ್ಟು ಬೇಗ ಕಟ್ಟಿಹಾಕುವ ಸವಾಲು ಲಖನೌ ಬೌಲರ್‌ಗಳ ಮುಂದಿದೆ. ಪಂಜಾಬ್ ಕಿಂಗ್ಸ್ ವಿರುದ್ಧ ಲಖನೌ ಬೌಲರ್‌ಗಳು ಬಸವಳಿದಿದ್ದು ಅವರ ಮೇಲೆ ಒತ್ತಡವಿದೆ. ಇದ್ದುದರಲ್ಲಿ ಪ್ರಿನ್ಸ್ ಯಾದವ್ ಮಾತ್ರ ಪರಿಣಾಮಕಾರಿ ಎನಿಸಿದ್ದಾರೆ. ಆವೇಶ್ ಖಾನ್, ಮೊಹಮ್ಮದ್ ಶಮಿ ಕೆಲವು ಪಂದ್ಯಗಳ ಲಕ್ಷ್ಯೇ ಗಮನಸೆಳೆದಿದ್ದಾರೆ.




ರಿಷಭ್ ಪಂತ್

ಲಖನೌ ಬ್ಯಾಟಿಂಗ್ ಕೂಡ ಸ್ಥಿರವಾಗಿಲ್ಲ. ಮಿಚೆಲ್ ಮಾರ್ಷ್ ಜೊತೆ ಆಯುಷ್ ಬಡೋಣಿ ಅವರನ್ನು ಬೇಗನೇ ಆಡಲು ಇಳಿಸುವ ಯತ್ನ ಕೈಹಿಡಿಯಲಿಲ್ಲ. ಮಾರ್ಷ್ ಈ ಬಾರಿ ಒಮ್ಮೆಯೂ ದೊಡ್ಡ ಮೊತ್ತ ಗಳಿಸಿಲ್ಲ. ನಿಕೊಲಸ್ ಪೂರನ್ ಅವರೂ ನಿರಾಸೆ ಮೂಡಿಸಿದ್ದಾರೆ. ನಾಯಕ ರಿಷಭ್ ಪಂತ್ ಸಹ ಸ್ಥಿರ ಪ್ರದರ್ಶನ ನೀಡಿಲ್ಲ. ಹೀಗಾಗಿ ಗೆಲುವಿನ ಹಳಿಗೆ ಮರಳಬೇಕಾದರೆ ತಂಡವು ಬ್ಯಾಟಿಂಗ್, ಬೌಲಿಂಗ್‌ನಲ್ಲಿ ಸುಧಾರಿತ ಪ್ರದರ್ಶನ ನೀಡಬೇಕಾಗಿದೆ.

# ಸಿದ್ಧಾಂತ್ 'ಹ್ಯಾಟ್ರಿಕ್' ಗೋಲು: ಬಾಂಬರ್ಸ್ ತಂಡ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ಧಾಂತ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ



ಬಾಂಬರ್ಸ್ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಮಂಗಳವಾರ 4–2ರಿಂದ ಈಸ್ಟ್ ಇಂಡಿಯಾ ಹಾಕಿ ಕ್ಲಬ್ ತಂಡದ ವಿರುದ್ಧ ಜಯ ಸಾಧಿಸಿತು.

ಶಾಂತಿನಗರದಲ್ಲಿನ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಾಂಬರ್ಸ್ ತಂಡದ ಸಿದ್ಧಾಂತ್ 28ನೇ ನಿಮಿಷದಲ್ಲಿ ಗೋಲು ಗಳಿಸಿ ತಮ್ಮ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಬಳಿಕ, 33ನೇ ಹಾಗೂ 37ನೇ ನಿಮಿಷದಲ್ಲಿ ಕೈಚಳಕ ತೋರಿ ಹ್ಯಾಟ್ರಿಕ್ ಸಾಧಿಸಿದರು. ನಯೀಮ್ (48ನೇ ನಿ.) ಒಂದು ಗೋಲು ಗಳಿಸಿ, ಕಾಣಿಕೆ ನೀಡಿದರು.

ಈಸ್ಟ್ ಇಂಡಿಯಾ ತಂಡದ ಅರುಣ್ (40ನೇ ನಿ.) ಹಾಗೂ ಕೈಫ್ (42ನೇ ನಿ.) ನಿಕಟ ಪೈಪೋಟಿ ತೋರಿದರು. ಆದರೆ, ಸಹ ಆಟಗಾರರಿಂದ ಉತ್ತಮ ಬೆಂಬಲ ದೊರಕದ ಕಾರಣ ತಂಡವು ಸೋಲನುಭವಿಸಬೇಕಾಯಿತು.



ಕೂತಂಡ ಮತ್ತು ಕಾರೇರ ತಂಡದ ಆಟಗಾರರ ಸೆಣಸಾಟ

# ಕೂತಂಡಕ್ಕೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ನಾಪೋಕ್ಲು: ಸಂತೋಷ್ ಅವರ ಆಟದ ಬಲದಿಂದ ಕೂತಂಡ ತಂಡದವರು ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಕಾರೇರ ತಂಡದ ವಿರುದ್ಧ 6–0ಯಿಂದ ಭರ್ಜರಿ ಜಯ ಸಾಧಿಸಿದರು.

ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಂತೋಷ್ ಎರಡು ಗೋಲು ಹೊಡೆದರು. ಅವರೊಂದಿಗೆ ನರೇನ್ ಬೋಪಣ್ಣ, ಸೋಮಣ್ಣ, ಪೂಣಚ್ಚ ಹಾಗೂ ಸಜನ್ ದೇವಯ್ಯ ತಲಾ ಒಂದು ಗೋಲು ಬಾರಿಸಿದರು.

ಅಂಜಪರವಂಡ ತಂಡದವರು 2-0ಯಿಂದ ಮುಂಡಿಯೋಳಂಡ ವಿರುದ್ಧ; ಚೇಂದೀರ ತಂಡದವರು 3-1ರಿಂದ ಕೋಟೆರ ವಿರುದ್ಧ; ಕನ್ನಂಡ 2-1ರಿಂದ ಮೇವಡ ವಿರುದ್ಧ ಜಯ ಗಳಿಸಿದರು.

ಪಾಡೆಯಂಡ ಮತ್ತು ಕಾಯಪಂಡ ತಂಡಗಳ ನಡುವೆ ಸಮಬಲದ ಹೋರಾಟ ನಡೆಯಿತು. ಅಂತಿಮವಾಗಿ, ಪಾಡೆಯಂಡ ತಂಡದವರು 4-3ರಿಂದ ಟೈಬ್ರೇಕರ್‌ನಲ್ಲಿ ಗೆದ್ದರು.

# ಸೋನಿ ತೆಕ್ಕೆಗೆ ಏಷ್ಯನ್ ಗೇಮ್ಸ್ ಪ್ರಸಾರದ ಹಕ್ಕು

ನವದೆಹಲಿ (ಪಿಟಿಐ): ಈ ವರ್ಷದ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಯಲಿರುವ 20ನೇ ಏಷ್ಯನ್ ಗೇಮ್ಸ್ ಕೂಟದ ಪ್ರಸಾರದ ಹಕ್ಕುಗಳನ್ನು 'ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾ' ಖರೀದಿಸಿದೆ.

ಖರೀದಿ ಒಪ್ಪಂದದ ಪ್ರಕಾರ, ಭಾರತ ಹಾಗೂ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ (ಪಾಕಿಸ್ತಾನ, ಶ್ರೀಲಂಕಾ, ಅಫ್ಗಾನಿಸ್ತಾನ, ನೇಪಾಳ ಹಾಗೂ ಬಾಂಗ್ಲಾದೇಶ) ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನ ಟಿ.ವಿ ವಾಹಿನಿಗಳಲ್ಲಿ ಕೂಟದ ನೇರಪ್ರಸಾರ ಮಾಡಲಾಗುತ್ತದೆ. ಸೋನಿ ಲೈವ್ ಮೊಬೈಲ್ ಆ್ಯಪ್‌ನಲ್ಲಿಯೂ ನೇರಪ್ರಸಾರ ಇರಲಿದೆ.

ಕೂಟವು ಜಪಾನ್‌ನ ನಗೊಯಾ ನಗರದಲ್ಲಿ ಸೆ. 19ರಿಂದ ಅಕ್ಟೋಬರ್ 4ರ ವರೆಗೆ ನಡೆಯಲಿದೆ. ಕ್ರಿಕೆಟ್, ಟೆನಿಸ್, ಕಬಡ್ಡಿ, ಅಥ್ಲೆಟಿಕ್ಸ್ ಸೇರಿ 41 ಸ್ಪರ್ಧೆಗಳು ಇರಲಿವೆ.



ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯ ಪದಕ ವಿಜೇತರು (ಎಡದಿಂದ) ಸೊಡಿಕ್ಜಾನ್ ಅಬ್ದುಲೇವ್ (ಬೆಳ್ಳಿ), ಶಿವ ನರ್ವಾಲ್ (ಚಿನ್ನ), ಚಿರಾಗ್ ಶರ್ಮಾ (ಕಂಚು). ಕುಳಿತವರು ಭಾರತ ತಂಡದ ಕೋಚ್ ಜಿತು ರೈ

# ಜೂನಿಯರ್ ಶೂಟಿಂಗ್ ವಿಶ್ವಕಪ್ ಭಾರತದ ಶಿವ ನರ್ವಾಲ್‌ಗೆ ಚಿನ್ನ

ಕೈರೊ (ಪಿಟಿಐ): ದೀರ್ಘಕಾಲದ ನಂತರ ಕಣಕ್ಕೆ ಮರಳಿದ ಪ್ರಮುಖ ಶೂಟರ್ ಶಿವ ನರ್ವಾಲ್ ಅವರು ಮಂಗಳವಾರ ಇಲ್ಲಿ ಆರಂಭವಾದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದು ಸಂಭ್ರಮಿಸಿದರು.



ಪನಾ ಭುಗ್ರಾ

ಚಿರಾಗ್ ಶರ್ಮಾ ಅವರು ಇದೇ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಪನಾ ಭುಗ್ರಾ ಬೆಳ್ಳಿ ಗೆದ್ದುಕೊಂಡರು. ಇದರೊಂದಿಗೆ ಮೊದಲ ದಿನ ಭಾರತ ಮೂರು ಪದಕಗಳನ್ನು ಗೆದ್ದಂತಾಯಿತು.

ಅರ್ಹತಾ ಸುತ್ತಿನ ಉತ್ತಮ ಲಯವನ್ನು ಫೈನಲ್ ಸುತ್ತಿನಲ್ಲೂ ಮುಂದುವರಿಸಿದ ನರ್ವಾಲ್ 241.8 ಸ್ಕೋರ್ ದಾಖಲಿಸಿದರು. ಉಜ್ಬೇಕಿಸ್ತಾನದ ಸೊಡಿಕ್ಜಾನ್ ಅಬ್ದುಲ್ಲೇವ್ 1.8 ಸ್ಕೋರ್ ಅಂತರದಿಂದ ಎರಡನೇ ಸ್ಥಾನ ಗಳಿಸಿದರು. ಚಿರಾಗ್ (218.9) ಮೂರನೇ ಸ್ಥಾನ ಗಳಿಸಿದರು.

ಜೂನಿಯರ್ ಮಹಿಳೆಯರ 10 ಮೀ. ಏರ್‌ರೈಫಲ್‌ನಲ್ಲಿ ಫ್ರಾನ್ಸ್‌ನ ಅನ್ಸಿಲಿನ್ ಬ್ರಾಕ್ಮನ್ (252.0) ಚಿನ್ನ ಗೆದ್ದರೆ, ಪನಾ (250.6) ಬೆಳ್ಳಿ ಮತ್ತು ಫ್ರಾನ್ಸ್‌ನ ಹೆಲೆನ್ ಎಕೇಲ್ ಕಂಚಿನ ಪದಕ ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಮೊದಲ ಸ್ಥಾನ ಪಡೆದಿದ್ದ ಭಾರತದ ಶಾಂಭವಿ ಕ್ಷೀರಸಾಗರ ಫೈನಲ್‌ನಲ್ಲಿ ನಾಲ್ಕನೇ (206.5) ಸ್ಥಾನ ಗಳಿಸಿದರು.

# ಬೋಲಾನಾಥ್‌ಗೆ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ಹಾಕಿ ಇಂಡಿಯಾ ಪ್ರಧಾನ ಕಾರ್ಯದರ್ಶಿ ಭೋಲಾ ನಾಥ್ ಸಿಂಗ್ ಅವರು ತನ್ನ ಆದೇಶವನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿ ನ್ಯಾಯಾಂಗ ನಿಂದನೆ ಎಸಗಿದ್ದಾರೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಶಿಕ್ಷೆಗೆ ಸಂಬಂಧಿಸಿದ ವಿಚಾರಣೆಯನ್ನು ಮೇ 4ರಂದು ನಡೆಸುವುದಾಗಿ ನ್ಯಾ.ಪುರುಷೈಂದ್ರ ಕುಮಾರ್ ಕೌರವ್ ಅವರು ಹೇಳಿದ್ದಾರೆ. ಆದಕ್ಕಿಂತ ಮೊದಲು ತಪ್ಪನ್ನು ತಿದ್ದಿಕೊಂಡು ಶಿಕ್ಷೆಯ ಪ್ರಮಾಣ ಕಡಿಮೆಮಾಡಿಕೊಳ್ಳುವ ಅವಕಾಶವನ್ನು ನ್ಯಾಯಾಲಯ ಅವರಿಗೆ ನೀಡಿದೆ.

ಈ ಹಿಂದೆ, 2025ರ ಜನವರಿ 17ರಂದು ನ್ಯಾಯಾಲಯವು ನೀಡಿದ ಆದೇಶವನ್ನು ಹಾಕಿ ಇಂಡಿಯಾ ಅಧಿಕಾರಿಗಳು ಪಾಲಿಸಿಲ್ಲ ಎಂದು ಹಾಕಿ ಇಂಡಿಯಾದ ಚುನಾಯಿತ ಉಪಾಧ್ಯಕ್ಷೆ ಸಯೀದ್ ಅಸೀಮಾ ಅಲಿ ಅವರು ದೂರಿದ್ದರು.

ಹಾಕಿ ಇಂಡಿಯಾದ ಕಾರ್ಯಕಾರಿ ಮಂಡಳಿ ಸಭೆಗಳಿಗೆ ಹಾಜರಾಗಲು ಅನುಕೂಲವಾಗುವಂತೆ ಅರ್ಜಿದಾರರಿಗೆ ಅಗತ್ಯ ಲಿಂಕ್‌ಗಳನ್ನು ಕಳುಹಿಸಬೇಕು ಎಂದು ನ್ಯಾಯಾಲಯವು ಈ ಮೊದಲು ಹಾಕಿ ಇಂಡಿಯಾ ಅಧಿಕಾರಿಗಳಿಗೆ ಸೂಚಿಸಿತ್ತು. ಆದರೆ 2025ರ ಜುಲೈ 4 ಮತ್ತು ಜುಲೈ 27ರ ಸಭೆಗಳಿಗೆ ಹಾಜರಾಗಲು ತಮಗೆ ಅಗತ್ಯವಿರುವ ಲಿಂಕ್ ಕಳುಹಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ಆ ಮೂಲಕ ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿದ್ದಾರೆ ಎಂದು ಅರ್ಜಿದಾರರಾದ ಅಸೀಮಾ ಅಲಿ ಹೇಳಿದ್ದರು.

ಆದೇಶದಲ್ಲಿ ಮಾರ್ಪಾಡು ಮಾಡಬೇಕೆಂಬ ಮನವಿಯನ್ನು ಪ್ರತಿವಾದಿಗಳು ಮಾಡಿಲ್ಲ. ಸಭೆಗೆ ಹಾಜರಾಗುವ ಸಂಬಂಧ ಅರ್ಜಿದಾರರಿಗೆ ಲಿಂಕ್ ಕಳುಹಿಸದೇ ಹಾಕಿ ಇಂಡಿಯಾ ಅಧಿಕಾರಿಗಳು, ನಿರ್ದಿಷ್ಟವಾಗಿ ಭೋಲಾನಾಥ್ ನ್ಯಾಯಾಂಗ ನಿಂದನೆ ಮಾಡಿದ್ದಾರೆ. ಅಷ್ಟೇ ಅಲ್ಲ, ತನ್ನ ತಪ್ಪಿಗೆ ವಿಷಾದ ವ್ಯಕ್ತಪಡಿಸಿಲ್ಲ. ಕ್ಷಮಾಪಣೆಯನ್ನು ಕೇಳುವುದು ಬಿಡಿ, ಅಂಥ ಪ್ರಯತ್ನವನ್ನೂ ಮಾಡಿಲ್ಲ ಎಂದು ನ್ಯಾಯಾಲಯ ಕಟುವಾಗಿ ಹೇಳಿದೆ.



# ಸನ್‌ರೈಸರ್ಸ್‌ಗೆ ಗೆಲುವಿನ 'ಅಭಿಷೇಕ'

## ಶರ್ಮಾ ಶತಕ ಸಂಭ್ರಮ ● ಇಶಾನ್ ಮಾಲಿಂಗಗೆ ನಾಲ್ಕು ವಿಕೆಟ್ ● ಡೆಲ್ಲಿಗೆ 47 ರನ್ ಸೋಲು ● ಎಸ್‌ಆರ್‌ಎಚ್‌ಗೆ ಹ್ಯಾಟ್ರಿಕ್ ಜಯ

ಅಭಿಷೇಕ್ ಶರ್ಮಾ
135 ರನ್
68 ಎಸೆತ
10 ಬೌಂಡರಿ
10 ಸಿಕ್ಸರ್



ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್ ಅಭಿಷೇಕ್ ಶರ್ಮಾ 'ಎಕ್ಸ್' ಚಿತ್ರ

ಹೈದರಾಬಾದ್ (ಪಿಟಿಐ): ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ ಅವರದ್ದೇ ಪಾರುಪತ್ಯ. ಅವರ ಬ್ಯಾಟಿಂಗ್ ಅಬ್ಬರದ ಮುಂದೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬೌಲರ್‌ಗಳು ಸುಸ್ತಾದರು.

ಅಭಿಷೇಕ್ (ಅಜೇಯ 135; 68 ಎಸೆತ) ಅವರ ಶತಕದ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು 47 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು. ಅದರೊಂದಿಗೆ, ಹಾಲಿ ಲೀಗ್‌ನಲ್ಲಿ ಹ್ಯಾಟ್ರಿಕ್ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿಯಿತು.

ಸನ್‌ರೈಸರ್ಸ್ ನೀಡಿದ್ದ 243 ರನ್‌ಗಳ ದೊಡ್ಡ ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಶ್ರೀಲಂಕಾದ ವೇಗಿ ಇಶಾನ್ ಮಾಲಿಂಗ (32ಕ್ಕೆ4) ಪರಿಣಾಮಕಾರಿ ಬೌಲಿಂಗ್ ಮೂಲಕ ಕಡಿವಾಣ ಹಾಕಿದರು. ಆಲ್‌ರೌಂಡರ್ ನಿತೀಶ್ ರಾಣಾ (57; 30ಎ, 4x7, 6x3) ಅರ್ಧಶತಕ ಗಳಿಸಿದ್ದು ಬಿಟ್ಟರೆ, ಉಳಿದ ಬ್ಯಾಟರ್‌ಗಳು ದೀರ್ಘ ಇನಿಂಗ್ಸ್ ಕಟ್ಟುವಲ್ಲಿ ವಿಫಲರಾದರು. ಅಕ್ಷರ್ ಪಟೇಲ್ ಪಡೆ 9 ವಿಕೆಟ್‌ಗಳಿಗೆ 195 ರನ್ ಗಳಿಸಿ, ಓವರ್ ಪೂರೈಸಿತು.


ಕಳೆದ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಅರ್ಧಶತಕ ಗಳಿಸಿದ್ದ ಕೆ.ಎಲ್.ರಾಹುಲ್ 23 ಎಸೆತಗಳಲ್ಲಿ 37 ರನ್ ಗಳಿಸಿದರು. ಆ ಪಂದ್ಯದಲ್ಲಿ ಡೆಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದ್ದ ಟ್ರಿಸ್ಟನ್ ಸ್ಟಬ್ಸ್ (27; 16ಎ) ಹಾಗೂ ಡೇವಿಡ್ ಮಿಲ್ಲರ್ (0;1ಎ) ಇಲ್ಲಿ ನಿರಾಶೆ ಅನುಭವಿಸಿದರು. 'ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್' ಸಮೀರ್ ರಿಜ್ವಿ (41; 28ಎ) ಕೊಂಚ ಹೊತ್ತು ಹೋರಾಟ ತೋರಿದರು.

ಇದಕ್ಕೆ ಮೊದಲು, ಡೆಲ್ಲಿ ತಂಡದ ನಾಯಕ ಅಕ್ಷರ್ ಪಟೇಲ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ಸನ್‌ರೈಸರ್ಸ್ ಬ್ಯಾಟರ್‌ಗಳ ಎದುರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬೌಲರ್‌ಗಳ ಆಟ ನಡೆಯಲಿಲ್ಲ.

ಆರಂಭಿಕ ಜೋಡಿ ಅಭಿಷೇಕ್ ಹಾಗೂ ಟ್ರಾವಿಸ್ ಹೆಡ್ (37; 26ಎ) ಅವರು 8.5 ಓವರ್‌ಗಳಲ್ಲಿ 97 ರನ್ ಸೂರೆ ಮಾಡಿ, ಭದ್ರ ಅಡಿಪಾಯ ಹಾಕಿಕೊಟ್ಟರು. ಟ್ರಾವಿಸ್ ನಿರ್ಗಮಿಸಿದ ನಂತರ ನಾಯಕ ಇಶಾನ್ ಕಿಶನ್ 13 ಎಸೆತಗಳಲ್ಲಿ 25 ರನ್ ಗಳಿಸಿದರು. ಅಭಿಷೇಕ್ ಮತ್ತು ಇಶಾನ್ ಎರಡನೇ ವಿಕೆಟ್ ಜತೆಯಾಟದಲ್ಲಿ 79 ರನ್ ಸೇರಿಸಿದರು.

ಕೊನೆಯ ಹಂತದ ಓವರ್‌ಗಳಲ್ಲಿ ಅಭಿಷೇಕ್ ತುಸು ಸುಸ್ತಾದಂತೆ ಕಂಡರು. ಆಗ ಹೆನ್ರಿಚ್ ಕ್ಲಾಸೆನ್ (ಔಟಾಗದೇ 37; 13ಎಸೆತ) ತಂಡದ ಮೊತ್ತ ಹೆಚ್ಚಿಸುವ ಹೊಣೆ ನಿಭಾಯಿಸಿದರು. ಇಶಾನ್ ಪಡೆ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 242 ರನ್ ಗಳಿಸಿತು.

ಅಭಿಷೇಕ್ ಬ್ಯಾಟಿಂಗ್‌ನಲ್ಲಿ 10 ಬೌಂಡರಿ ಮತ್ತು ಅಷ್ಟೇ ಸಂಖ್ಯೆಯ ಸಿಕ್ಸರ್‌ಗಳಿದ್ದವು. ಡೆಲ್ಲಿ ತಂಡದ ನಿತೀಶ್ ರಾಣಾ (4 ಓವರ್‌ಗಳಲ್ಲಿ 55 ರನ್) ಅವರ ಆಫ್‌ಬ್ರೇಕ್ ಎಸೆತಗಳು, ಲುಂಗಿ ಎನ್‌ಗಿಡಿಯ (4 ಓವರ್ 41 ರನ್) ನಿಧಾನಗತಿಯ ಸ್ವಿಂಗ್ ಎಸೆತಗಳು ಕೂಡ ಅಭಿಷೇಕ್ ಆಟಕ್ಕೆ ಅಡ್ಡಿಯಾಗಲಿಲ್ಲ. ಅಭಿಷೇಕ್ ಅವರು ಸ್ವಿಂಗ್ ಮತ್ತು ಸ್ಪಿನ್ ಎಸೆತಗಳಿಗೆ ತಕ್ಕಂತೆ ತಮ್ಮ ಪಾದಚಲನೆಯನ್ನು ಹೊಂದಿಸಿಕೊಳ್ಳುವ ಚುರುಕುತನ ಮೆರೆದರು. ಅವರ ಈ ಹಿಂದಿನ ಸ್ಟ್ರೈಕ್‌ರೇಟ್‌ಗಳಿಗೆ ಹೋಲಿಕೆ ಮಾಡಿದರೆ ಈ ಶತಕವು ತುಸು ನಿಧಾನವೆನಿಸ ಬಹುದು. ಅವರು ಇಲ್ಲಿ 47 ಎಸೆತಗಳಲ್ಲಿ ಮೂರಂಕಿ ದಾಟಿದರು. ಐಪಿಎಲ್‌ನಲ್ಲಿ ಇದು ಅವರ ಮೂರನೇ ಶತಕ. ಟಿ20 ಮಾದರಿಯಲ್ಲಿ ಅವರು ಒಟ್ಟಾರೆ 9ನೇ ಶತಕ ಹೊಡೆದು ವಿರಾಟ್ ಕೊಹ್ಲಿ, ಕ್ವಿಂಟನ್ ಡಿಕಾಕ್ ಅವರ ದಾಖಲೆಯನ್ನು ಸಮ ಮಾಡಿದರು.



ನಾಲ್ಕು ವಿಕೆಟ್ ಗಳಿಸಿದ ಇಶಾನ್ ಮಾಲಿಂಗ ಸಂಭ್ರಮ ಪಿಟಿಐ ಚಿತ್ರ

**ಸಂಕ್ಷಿಪ್ತ ಸ್ಕೋರು:** ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 242 (ಅಭಿಷೇಕ್ ಶರ್ಮಾ ಔಟಾಗದೇ 135, ಟ್ರಾವಿಸ್ ಹೆಡ್ 37, ಇಶಾನ್ ಕಿಶನ್ 25, ಹೆನ್ರಿಚ್ ಕ್ಲಾಸನ್ ಔಟಾಗದೇ 37; ಅಕ್ಷರ್ ಪಟೇಲ್ 23ಕ್ಕೆ1). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 195 (ಕೆ.ಎಲ್.ರಾಹುಲ್ 37, ನಿತೀಶ್ ರಾಣಾ 57, ಸಮೀರ್ ರಿಜ್ವಿ 41, ಟ್ರಿಸ್ಟನ್ ಸ್ಟಬ್ಸ್ 27, ಇಶಾನ್ ಮಾಲಿಂಗ 32ಕ್ಕೆ4, ಹರ್ಷ್ ದುಬೆ 12ಕ್ಕೆ3).
**ಪಂದ್ಯದ ಆಟಗಾರ:** ಅಭಿಷೇಕ್ ಶರ್ಮಾ.

# ಆಯುಷ್ ಮ್ಹಾತ್ರೆಗೆ ಗಾಯ: ಐಪಿಎಲ್‌ಗೆ ಅಲಭ್ಯ



ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟರ್ ಆಯುಷ್ ಮ್ಹಾತ್ರೆ ಅವರು ಸ್ನಾಯುಸೆಳೆತದ ಗಾಯದಿಂದಾಗಿ ಈ ಬಾರಿಯ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ.

ಇದರಿಂದಾಗಿ ಚೆನ್ನೈ ತಂಡಕ್ಕೆ ದೊಡ್ಡ ಆತಂಕ ಎದುರಾದಂತಾಗಿದೆ. 18 ವರ್ಷದ ಆಯುಷ್ ಅವರು ಈಚೆಗೆ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಗಾಯಗೊಂಡಿದ್ದರು. ಅವರಿಗೆ 6ರಿಂದ 12 ವಾರಗಳ ಆರೈಕೆ ಮತ್ತು ಪುನಶ್ಚೇತನಕ್ಕೆ ವೈದ್ಯರು ಶಿಫಾರಸು ಮಾಡಿದ್ದಾರೆ.

'ಆಯುಷ್ ಅವರು ಐಪಿಎಲ್‌ನ ಮುಂಬರುವ ಎಲ್ಲ ಪಂದ್ಯಗಳಿಗೂ ಅಲಭ್ಯರಾಗಲಿದ್ದಾರೆ' ಎಂದು ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಆವೃತ್ತಿಯಲ್ಲಿ ಆಯುಷ್ ಅವರು ಚೆನ್ನೈನ ಯಶಸ್ವಿ ಬ್ಯಾಟರ್‌ಗಳಲ್ಲಿ ಒಬ್ಬರಾಗಿದ್ದರೆ. 177.87ರ ಸ್ಟ್ರೈಕ್‌ರೇಟ್‌ನಲ್ಲಿ 201 ರನ್ ಸೇರಿಸಿದ್ದಾರೆ.

### ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ಎನ್‌ಆರ್‌ಆರ್ |
|---|---|---|---|---|---|---|
| ಪಿಬಿಕೆಎಸ್ | 6 | 5 | 0 | 1 | 11 | 1.420 |
| ಆರ್‌ಸಿಬಿ | 6 | 4 | 2 | 0 | 8 | 1.171 |
| ಎಸ್‌ಆರ್‌ಎಚ್ | 7 | 4 | 3 | 0 | 8 | 0.820 |
| ಆರ್ ಆರ್ | 6 | 4 | 2 | 0 | 8 | 0.599 |
| ಡಿ ಸಿ | 6 | 3 | 3 | 0 | 6 | - 0.130 |
| ಜಿ ಟಿ | 6 | 3 | 3 | 0 | 6 | - 0.821 |
| ಎಂ ಐ | 6 | 2 | 4 | 0 | 4 | 0.067 |
| ಸಿಎಸ್‌ಕೆ | 6 | 2 | 4 | 0 | 4 | - 0.780 |
| ಎಲ್‌ಎಸ್‌ಜಿ | 6 | 2 | 4 | 0 | 4 | - 1.173 |
| ಕೆಕೆಆರ್ | 7 | 1 | 5 | 1 | 3 | - 0.879 |

ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (323 ರನ್)
ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್, ಸಿಎಸ್‌ಕೆ (13 ವಿಕೆಟ್)


# ಫ್ರೆಂಚ್ ಓಪನ್‌ಗೆ ಅಲ್ಕರಾಜ್ ಗೈರು?

ಮ್ಯಾಡ್ರಿಡ್ (ಎಪಿ/ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಬಲಗೈ ಮಣಿಕಟ್ಟಿನ ಗಾಯದಿಂದಾಗಿ ಈ ಬಾರಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯುವ ಬಗ್ಗೆ ಸೋಮವಾರ ಅನುಮಾನ ವ್ಯಕ್ತಪಡಿಸಿದ್ದಾರೆ.

ಅಲ್ಕರಾಜ್ ಅವರು ಶೀಘ್ರದಲ್ಲಿಯೇ ವೈದ್ಯಕೀಯ ತಪಾಸಣೆ ಮಾಡಿಸಲಿದ್ದಾರೆ. ಆ ಬಳಿಕವಷ್ಟೇ ಫ್ರೆಂಚ್ ಓಪನ್‌ನಲ್ಲಿ ಭಾಗವಹಿಸುವ ಬಗ್ಗೆ ನಿರ್ಧರಿಸಲಿದ್ದಾರೆ. ಟೂರ್ನಿಯು ಮೇ 24ರಿಂದ ಜೂನ್ 7ರ ವರೆಗೆ ನಡೆಯಲಿದೆ.

ಸ್ಪೇನ್‌ನ 22 ವರ್ಷ ವಯಸ್ಸಿನ ತಾರೆ, ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ ಆಡುತ್ತಿದ್ದಾಗ ಬಲಗೈ ಮಣಿಕಟ್ಟಿಗೆ ಗಂಭೀರ ಗಾಯ ಮಾಡಿಕೊಂಡಿದ್ದರು. ಹೀಗಾಗಿ ಟೂರ್ನಿಯಿಂದ ಅರ್ಧದಲ್ಲಿಯೇ ಹೊರನಡೆದಿದ್ದರು.

**ಅಲ್ಕರಾಜ್ ವರ್ಷದ ಕ್ರೀಡಾಪಟು:** ಅಲ್ಕರಾಜ್ ಅವರು ಪ್ರತಿಷ್ಠಿತ 'ಲಾರಿಯಸ್ ವರ್ಷದ ಕ್ರೀಡಾಪಟು' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಈ ಗೌರವ ಬೆಲರೂಸ್‌ನ ಅರಿನಾ ಸಬಲೆಂಕಾ ಅವರಿಗೆ ಒಲಿದಿದೆ. ಅದರೊಂದಿಗೆ, ಎರಡೂ ಪ್ರಶಸ್ತಿಗಳು ಟೆನಿಸ್ ಆಟಗಾರರಿಗೇ ಒಲಿದಿರುವುದು ವಿಶೇಷ.



'ಲಾರಿಯಸ್ ವರ್ಷದ ಕ್ರೀಡಾಪಟು' ಪ್ರಶಸ್ತಿಯೊಂದಿಗೆ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ